ಸಾಯಣಮಾಧವ ವಿರಚಿತ

ಶಾಂಕರ ದರ್ಶನ



ಅನುವಾದ

ಶೇಷಾಚಲ ಶರ್ಮ

ಕನ್ನಡ ಅಧ್ಯಯನ ಸಂಸ್ಥೆ : : ಮೈಸೂರು ವಿಶ್ವವಿದ್ಯಾನಿಲಯ





ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಣೆ-೩೫೭
ಪಠ್ಯಪುಸ್ತಕ ಮಾಲೆ-೧೯೧

ಪ್ರಧಾನ ಸಂಪಾದಕ

ಡಾ. ಹಾ. ಮಾ. ನಾಯಕ

ವಿಭಾಗ ಸಂಪಾದಕ

ಡಾ. ಕೆ. ಬಿ. ರಾಮಕೃಷ್ಣರಾವ್

ಶಾಂಕರದರ್ಶನ

ಶಾಂಕರದರ್ಶನ

ಶೇಷಾಚಲ ಶರ್ಮಾ

ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
1979

SHANKARADARSHANA by Sāyaṇa Mādhava; Kannada translation by Seshachala Sharma; Published by the Institute of Kannada Studies, University of Mysore, Manasagangotri, Mysore-570006. First edition 1979. Pp. xii + 104.

Published under the centrally sponsored scheme of Production of books and literature in regional languages at the University level, of the Government of India in the Ministry of Education and Social Welfare (Department of Culture), New Delhi.

ಬೆಲೆ: ರೂ. 6-00

ಮಾರಾಟಗಾರರು: ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–570012

ಮುದ್ರಕರು: ಮಿತ್ರ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು–570008

ಮುನ್ನುಡಿ

ಕನ್ನಡ ಭಾಷೆ-ಸಾಹಿತ್ಯಗಳ ಸರ್ವತೋಮುಖವಾದ ಬೆಳವಣಿಗೆಯನ್ನು ಸಾಧಿಸುವ ದೃಷ್ಟಿಯಿಂದ ೧೯೬೬ರ ಕೊನೆಯಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಪ್ರಾರಂಭವಾಯಿತು. ರಾಷ್ಟ್ರಕವಿ ಕುವೆಂಪು ಅವರ ಮಾರ್ಗದರ್ಶನದಲ್ಲಿ ರೂಪುಗೊಂಡಿದ್ದ ಯೋಜನೆಗಳೆಲ್ಲ ಸಾಕಾರಗೊಳ್ಳತೊಡಗಿದುದಕ್ಕೆ ಕನ್ನಡ ಅಧ್ಯಯನ ಸಂಸ್ಥೆ ಸಾಕ್ಷಿಯಾಗಿದೆ. ಕನ್ನಡ, ಭಾಷಾವಿಜ್ಞಾನ, ದಕ್ಷಿಣ ಭಾರತೀಯ ಅಧ್ಯಯನ, ಜಾನಪದ ಮತ್ತು ಭಾಷಾಂತರ (ಎಂ.ಫಿಲ್.) ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನಾ ವಿಭಾಗಗಳು, ಭಾಷಾಂತರ ಭಾರತೀಯ ಸಾಹಿತ್ಯ ಮತ್ತು ಜಾನಪದ–ಈ ವಿಷಯಗಳಿಗೆ ಸಂಬಂಧಿಸಿದ ಸ್ನಾತಕೋತ್ತರ ಡಿಪ್ಲೊಮಾ ಶಿಕ್ಷಣಗಳು, ಕನ್ನಡೇತರರಿಗಾಗಿ ನಡೆಸುತ್ತಿರುವ ಕನ್ನಡ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಶಿಕ್ಷಣಗಳು–ಇವುಗಳ ಜೊತೆಗೆ ಇಂದು ಸಂಸ್ಥೆಯಲ್ಲಿ ಆರು ಪ್ರಮುಖ ವಿಭಾಗಗಳಿವೆ: (೧) ಸಂಪಾದನ ವಿಭಾಗ, (೨) ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ, (೩) ಜಾನಪದ ವಿಭಾಗ, (೪) ಕನ್ನಡ ವಿಶ್ವಕೋಶ ವಿಭಾಗ, (೫) ಹರಿದಾಸ ಸಾಹಿತ್ಯ ಸಂಪಾದನ ಮತ್ತು ಸಂಶೋಧನ ವಿಭಾಗ ಮತ್ತು (೬) ಎಪಿಗ್ರಾಫಿಯ ಕರ್ನಾಟಕ ವಿಭಾಗ. ಸಂಸ್ಥೆಯ ಬಹುಮುಖವಾದ ಚಟುವಟಿಕೆಗಳ ಪ್ರತೀಕವಾಗಿವೆ ಈ ವಿಭಾಗಗಳು.

ವಿಶ್ವವಿದ್ಯಾನಿಲಯದ ಎಲ್ಲ ಹಂತಗಳಲ್ಲಿಯೂ ಕನ್ನಡವನ್ನು ಶಿಕ್ಷಣಮಾಧ್ಯಮವನ್ನಾಗಿ ಬಳಸಬೇಕೆಂಬ ನೀತಿಗನುಗುಣವಾಗಿ ಕೆಲವು ಸಂಸ್ಥೆಗಳಲ್ಲಿ ಸ್ನಾತಕಪೂರ್ವ ಮತ್ತು ಸ್ನಾತಕ ಹಂತಗಳಲ್ಲಿ ಕನ್ನಡ ಮಾಧ್ಯಮವನ್ನು ಒದಗಿಸುವುದರ ಜೊತೆಗೆ, ಸ್ನಾತಕೋತ್ತರ ಹಂತದವರೆಗೆ ಯಾವ ಪರೀಕ್ಷೆಗೆ ಬೇಕಾದರೂ ಕನ್ನಡದಲ್ಲಿಯೇ ಉತ್ತರಿಸುವ ಸೌಲಭ್ಯವನ್ನೂ ವಿಶ್ವವಿದ್ಯಾನಿಲಯ ಒದಗಿಸಿದೆ. ವಿಜ್ಞಾನ ಮತ್ತು ಮಾನವಿಕಗಳಿಗೆ ಸಂಬಂಧಿಸಿದ ಪಠ್ಯಪುಸ್ತಕ, ಆಕರ ಗ್ರಂಥ ಮತ್ತು ಸಂದರ್ಭ ಗ್ರಂಥಗಳನ್ನು ಹೊರತರುವ ದೃಷ್ಟಿಯಿಂದ ೧೯೬೭–೬೮ರಲ್ಲಿಯೇ ಮೈಸೂರು ವಿಶ್ವವಿದ್ಯಾನಿಲಯ ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗವನ್ನು ಸ್ಥಾಪಿಸಿತು. ಇದಕ್ಕೂ ಮೊದಲು, ಸುಮಾರು ಒಂದು ದಶಕಕ್ಕೂ ಹೆಚ್ಚುಕಾಲ 'ಪ್ರಸಾರಾಂಗ' ತನ್ನ ಇತರ ಕಾರ್ಯಗಳ ಜೊತೆಯಲ್ಲಿ ಈ ಕಾರ್ಯವನ್ನೂ ನಡೆಸಿಕೊಂಡು ಬಂದಿತ್ತು. ೧೯೬೯–೭೦ರಲ್ಲಿ ಕೇಂದ್ರ ಸರ್ಕಾರ ಪ್ರಾದೇಶಿಕ ಭಾಷೆಗಳ ಅಭಿವೃದ್ಧಿ ಯೋಜನೆಯನ್ನು ಜಾರಿಗೆ ಕೊಟ್ಟದ್ದರಿಂದ ಈ ಕೆಲಸಕ್ಕೆ ಹೆಚ್ಚಿನ ಚಾಲನೆ ದೊರೆಯಿತು. ಇದರಿಂದ ಮತ್ತಷ್ಟು ವ್ಯಾಪಕವಾಗಿ, ಸಮಗ್ರವಾಗಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಯಿತು.

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳ ಮುಖ್ಯರು ಸಲಹೆ–ಸೂಚನೆ ಮತ್ತು ವಿಭಾಗ ಸಂಪಾದಕತ್ವದ ಮೂಲಕ ಬಹುಮೂಲ್ಯ ನೆರವು ನೀಡುತ್ತಿದ್ದಾರೆ. ವಿಶ್ವವಿದ್ಯಾನಿಲಯ ಕಾಲೇಜುಗಳ, ಸ್ನಾತಕೋತ್ತರ ವಿಭಾಗಗಳ, ಮಾನ್ಯತೆ ಪಡೆದಿರುವ ಕಾಲೇಜುಗಳ ಅಧ್ಯಾಪಕರು, ಪ್ರಸಿದ್ಧ ಲೇಖಕರು ಮತ್ತು ಭಾಷಾಂತರಕಾರರು ಉತ್ಸಾಹ ದಿಂದ ಯೋಜನೆಯಲ್ಲಿ ಭಾಗವಹಿಸುತ್ತಿದ್ದಾರೆ. ಸಾಕಷ್ಟು ಗ್ರಂಥಗಳು ಹೊರಬರು ತ್ತಿವೆ. 'ವಿಜ್ಞಾನ ಲೇಖಕರ ಕಾರ್ಯಶಿಬಿರ'ದಂತಹ ತರಬೇತಿ ಕಾರ್ಯಕ್ರಮಗಳು, ಬಹುಮಾನ ಯೋಜನೆಯಂತಹ ಪ್ರೋತ್ಸಾಹದಾಯಕ ಕ್ರಮಗಳು ಉತ್ತಮ ಫಲ ನೀಡುತ್ತವೆಂಬುದರಲ್ಲಿ ಅನುಮಾನವಿಲ್ಲ. ರಾಜ್ಯದ ಇತರ ವಿಶ್ವವಿದ್ಯಾನಿಲಯಗಳೂ ಈ ಕಾರ್ಯದಲ್ಲಿ ತೊಡಗಿರುವುದರಿಂದ ಮುಂದಿನ ಕೆಲವು ವರ್ಷಗಳಲ್ಲಿ ಪಠ್ಯಪುಸ್ತಕಗಳ ಅಭಾವದ ಪ್ರಶ್ನೆ ಏಳದಂತಾಗುತ್ತದೆಂದು ಭಾವಿಸಲಾಗಿದೆ.

ತತ್ತ್ವಶಾಸ್ತ್ರ ವಿಭಾಗ ಮುಖ್ಯರಾದ ಡಾ. ಕೆ. ಬಿ. ರಾಮಕೃಷ್ಣರಾವ್ ಅವರ ಸಂಪಾದಕತ್ವದಲ್ಲಿ ಹೊರಬರುತ್ತಿರುವ ತತ್ತ್ವಶಾಸ್ತ್ರ ಗ್ರಂಥಗಳಲ್ಲಿ 'ಶಾಂಕರದರ್ಶನ'ವೂ ಒಂದು. ಸಾಯಣಮಾಧವರ 'ಸರ್ವದರ್ಶನ ಸಂಗ್ರಹ'ವೆಂಬ ಬೃಹತ್ ಕೃತಿಯ ಒಂದು ಭಾಗವಾಗಿರುವ ಈ ದರ್ಶನವನ್ನು ಕನ್ನಡಿಗರಿಗೆ ಒದಗಿಸಿಕೊಟ್ಟಿರುವವರು ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಉಪಪ್ರಾಧ್ಯಾಪಕರಾಗಿರುವ ಶ್ರೀ ಶೇಷಾಚಲಶರ್ಮ ಅವರು. ಮೂಲಸಹಿತವಾಗಿ ಅವರು ಶಾಂಕರದರ್ಶನವನ್ನು ಕನ್ನಡಿಸಿರುವುದೇ ಅಲ್ಲದೆ, ಅಗತ್ಯವಾದ ಟಿಪ್ಪಣಿಗಳನ್ನೂ, ವಿವರಗಳನ್ನೂ ಒದಗಿಸಿ ಕೊಟ್ಟಿದ್ದಾರೆ. ತತ್ತ್ವಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗೂ, ಅಧ್ಯಾಪಕರಿಗೂ ಇದು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಇಂಥದೊಂದು ಗ್ರಂಥವನ್ನು ಸಿದ್ಧಪಡಿಸಿಕೊಟ್ಟ ಶ್ರೀ ಶೇಷಾಚಲ ಶರ್ಮ ಅವರಿಗೂ, ಇದರ ಪ್ರಕಟಣೆಯಲ್ಲಿ ಸಹಕರಿಸಿರುವ ಡಾ. ಕೆ. ಬಿ. ರಾಮಕೃಷ್ಣರಾವ್ ಅವರಿಗೂ, ಮುದ್ರಣಕಾರ್ಯದಲ್ಲಿ ನೆರವಾಗಿರುವ ಶ್ರೀ ಎಚ್. ಎಸ್. ಹರಿಶಂಕರ್ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಹಾ. ಮಾ. ನಾಯಕ
ಪ್ರಧಾನ ಸಂಪಾದಕ

ವಿಭಾಗ ಸಂಪಾದಕರ ಮಾತು

"ಶಾಂಕರದರ್ಶನ" ಶ್ರೀ ಸಾಯಣಮಾಧವರಿಂದ ರಚಿತವಾದ "ಸರ್ವದರ್ಶನ ಸಂಗ್ರಹ"ದ ಕೊನೆಯ ಅಧ್ಯಾಯ. ಅನೇಕಸಲ ವಿಶ್ವವಿದ್ಯಾನಿಲಯದಲ್ಲಿ ಈ ಭಾಗ ಪಠ್ಯ ಪುಸ್ತಕವಾಗಿ ನಿಯಮಿತಗೊಳ್ಳುತ್ತಿದೆ. ಅದರ ಕನ್ನಡ ಅನುವಾದವೂ ಅಗತ್ಯವಾಗಿ ಬೇಕೆನಿಸುತ್ತಿತ್ತು. ಶ್ರೀ ಶೇಷಾಚಲ ಶರ್ಮರು ಈ ಬೇಡಿಕೆಯನ್ನು ಪೂರೈಸಿದ್ದಾರೆ. ಅನುವಾದಕಾರರು ಸಂಸ್ಕೃತ ವಿದ್ವಾಂಸರು. ವೇದಾಂತವನ್ನು ಆಳವಾಗಿ ಬಲ್ಲವರು. ಇಂತಹವರು ಶಾಂಕರದರ್ಶನದ ಅನುವಾದವನ್ನು ಕನ್ನಡಿಗರಿಗೆ ಒದಗಿಸಿರುವುದು ಉಚಿತ ವಾಗಿದೆ. ದರ್ಶನದ ಪರಿಭಾಷೆಗೆ ಎಳ್ಳಷ್ಟೂ ಅಪಚಾರವಾಗದಂತೆ ಸರಳ ರೀತಿಯಲ್ಲಿ ವೇದಾಂತ ತತ್ತ್ವವನ್ನು ಕನ್ನಡಕ್ಕೆ ತಂದಿದ್ದಾರೆ. ಓದುಗರಿಗೆ ವಿಚಾರವು ಎಲ್ಲಿ ಕಷ್ಟವಾಗ ಬಹುದೆಂದು ತೋರುವುದೋ ಅಲ್ಲಿ ವಿಧ್ಯುಕ್ತವಾದ ಟಿಪ್ಪಣಿಗಳನ್ನು ನೀಡಿದ್ದಾರೆ. ಅನು ವಾದದಲ್ಲಿ ಅನಗತ್ಯವಾಗಿ ವಾಕ್ಯಗಳನ್ನು ಬೆಳಸದೆ ಪದಗಳನ್ನು ಉಪಯೋಗಿಸದೆ ಇರುವ ಜಾಣ್ಮೆ ಇಲ್ಲಿ ಕಂಡುಬರುತ್ತದೆ. ಅನುವಾದ ಕಲೆ ಶ್ರೀ ಶರ್ಮರಿಗೆ ಸಹಜವಾಗಿ ಬಂದಿದೆ ಎಂದು ತೋರುತ್ತದೆ.

ವೇದಾಂತದ ದೃಷ್ಟಿಯಿಂದ ಆಕರವಾಗಿರುವ ಈ ಕೃತಿಯನ್ನು ಕನ್ನಡಿಗರಿಗೆ ಒದಗಿಸಿದ ಶ್ರೀ ಶರ್ಮರಿಗೂ ಮತ್ತು ಅದನ್ನು ಪ್ರಕಟಗೊಳಿಸುತ್ತಿರುವ ವಿಶ್ವವಿದ್ಯಾ ನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಹಾ. ಮಾ. ನಾಯಕರಿಗೂ ಕನ್ನಡಿಗರು ಕೃತಜ್ಞರು.

ಮಾನಸಗಂಗೋತ್ರಿ,
ಮೈಸೂರು

ಕೆ. ಬಿ. ರಾಮಕೃಷ್ಣರಾವ್

ಅರಿಕೆ

ಭಾರತೀಯ ದರ್ಶನಗಳಲ್ಲಿ ವೇದಾಂತದರ್ಶನ ಮೂರ್ಧನ್ಯವಾದುದು. ವೇದಾಂತ ವೆಂದರೆ ಉಪನಿಷತ್ತು. ಉಪನಿಷತ್ತುಗಳ ಸಿದ್ಧಾಂತವನ್ನು ಪ್ರತಿಪಾದಿಸಲು ಬಾದರಾಯಣ ಮಹರ್ಷಿಗಳು ಬ್ರಹ್ಮಸೂತ್ರಗಳನ್ನು ರಚಿಸಿದರು. ಬೇರೆ ಬೇರೆ ಆಚಾರ್ಯರು ತಮ್ಮದೇ ಆದ ರೀತಿಯಲ್ಲಿ ಈ ಸೂತ್ರಗಳಿಗೆ ವ್ಯಾಖ್ಯಾನ ಮಾಡಿದರು. ಈ ವ್ಯಾಖ್ಯಾನಕಾರರನ್ನು ಮುಖ್ಯವಾಗಿ ಎರಡು ವರ್ಗಗಳಲ್ಲಿ ವಿಂಗಡಿಸಬಹುದು. ಒಂದು ವರ್ಗದ ಆಚಾರ್ಯರು ದ್ವೈತತತ್ತ್ವವನ್ನು ಪ್ರತಿಪಾದಿಸಿ ಸಾಕಾರನಾದ ಭಗವಂತನ ಭಕ್ತಿಗೆ ಪ್ರಾಧಾನ್ಯವಿತ್ತರು. ರಾಮಾನುಜಾಚಾರ್ಯರು, ಮಧ್ವಾಚಾರ್ಯರು ಮುಂತಾದವರು ಈ ಗುಂಪಿಗೆ ಸೇರಿದವರು. ನಿರಾಕಾರ ಪರಬ್ರಹ್ಮನನ್ನು ಪ್ರತಿಪಾದಿಸಿ ಅದ್ವೈತತತ್ತ್ವಕ್ಕೆ ಪ್ರಾಧಾನ್ಯ ನೀಡಿದ ಆಚಾರ್ಯರು ಮತ್ತೊಂದು ವರ್ಗಕ್ಕೆ ಸೇರಿದವರು. ಇವರ ಪೈಕಿ ಶಂಕರಾಚಾರ್ಯರು ಮುಖ್ಯರು.

ಸ್ವತಃಸಿದ್ಧವಾದ ಜೀವಬ್ರಹ್ಮೈಕ್ಯವೇ ಅದ್ವೈತದರ್ಶನದ ಮುಖ್ಯ ಪ್ರತಿಪಾದ್ಯ ವಿಷಯ. ಪರಮಾನುಭವ ಮತ್ತು ಮಹಾಮೇಧೆಗಳಿಂದ ಬೆಳಗಿದ ಶಂಕರಭಗವತ್ಪಾದರು ಪ್ರಸನ್ನಪದಗಂಭೀರವಾದ ಶೈಲಿಯಲ್ಲಿ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ರಚಿಸಿದ್ದಾರೆ. "ಸರ್ವದರ್ಶನಸಂಗ್ರಹ"ದ ಶಾಂಕರದರ್ಶನ ಪ್ರಕರಣವು ಶಂಕರಭಗವತ್ಪಾದರ ಸಿದ್ಧಾಂತದ ಸಾರವನ್ನು ಪ್ರಮಾಣಬದ್ಧವೂ ಗಂಭೀರವೂ ಆದ ಶೈಲಿಯಲ್ಲಿ ನಿರೂಪಿಸುತ್ತದೆ.

"ಸರ್ವದರ್ಶನಸಂಗ್ರಹ"ದ ಕೆಲವು ಪುಸ್ತಕಗಳಲ್ಲಿ ಮಾತ್ರ ಶಾಂಕರದರ್ಶನ ಪ್ರಕರಣವು ಕಂಡುಬರುತ್ತದೆ. ಕೆಲವು ಪುಸ್ತಕಗಳಲ್ಲಿ ಪಾತಂಜಲದರ್ಶನಕ್ಕೇ ಗ್ರಂಥಸಮಾಪ್ತಿಯಾಗಿದೆ. ಈ ಕಾರಣದಿಂದ ಕೆಲವರು "ಸರ್ವದರ್ಶನಸಂಗ್ರಹ"ವನ್ನು ರಚಿಸಿದ ಸಾಯಣಮಾಧವಾಚಾರ್ಯರು ಶಾಂಕರದರ್ಶನ ಪ್ರಕರಣವನ್ನು ಬರೆಯಲಿಲ್ಲವೆಂದು ವಾದಿಸುತ್ತಾರೆ. ಆದರೆ, ಸಾಯಣಮಾಧವಾಚಾರ್ಯರಂತಹ ಮಹಾವಿದ್ವಾಂಸರು "ಸರ್ವದರ್ಶನಸಂಗ್ರಹ"ವೆಂಬ ಹೆಸರಿಟ್ಟ ತಮ್ಮ ಗ್ರಂಥದಲ್ಲಿ ವಿಶ್ವವಿಖ್ಯಾತವಾದ ಶಾಂಕರದರ್ಶನವನ್ನು ಸೇರಿಸದಿರುವುದು ಸಾಧ್ಯವೆ? ವಿಷಯನಿರೂಪಣೆ, ಭಾಷಾಶೈಲಿ ಮುಂತಾದುವನ್ನು ಪರಿಶೀಲಿಸಿದರೆ ಈ ಪ್ರಕರಣವೂ ಸಾಯಣಮಾಧವಾಚಾರ್ಯರಿಂದಲೇ ರಚಿತವಾದುದೆಂದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲದೆ ಪಾತಂಜಲದರ್ಶನಕ್ಕೇ ಸಮಾಪ್ತಿಹೊಂದಿರುವ ಪುಸ್ತಕಗಳಲ್ಲೂ ಕೊನೆಯಲ್ಲಿ "ಇತಃ ಪರಂ ಸರ್ವದರ್ಶನಶಿರೋಮಣಿಭೂತಂ ಶಾಂಕರದರ್ಶನಮನ್ಯತ್ರ ಲಿಖಿತಮಿತ್ಯತ್ರೋಪೇಕ್ಷಿತಮ್" ಎಂಬ ವಾಕ್ಯ ಕಂಡುಬರುತ್ತದೆ.

"ಸರ್ವದರ್ಶನಸಂಗ್ರಹ"ವನ್ನು ಬರೆದ ಸಾಯಣಮಾಧವಾಚಾರ್ಯರು ಕ್ರಿ.ಶ. ಹದಿನಾರನೆಯ ಶತಮಾನದ ಉತ್ತರಾರ್ಧದಲ್ಲಿ ನಮ್ಮ ಕರ್ಣಾಟಕ ಪ್ರಾಂತದಲ್ಲಿ ಬೆಳಗಿದ ಒಂದು ಮಹಾಜ್ಯೋತಿ. ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರಾದ ಇವರ ಹೆಸರು ಇತಿಹಾಸಪ್ರಸಿದ್ಧ. ಸಾಯಣ ಎಂಬುದು ಇವರ ವಂಶದ ಹೆಸರು. ಇವರ ತಂದೆಯ ಹೆಸರು ಮಾಯಣ; ತಾಯಿಯ ಹೆಸರು ಶ್ರೀಮತೀ. ಈ ಸಾಯಣಮಾಧವಾಚಾರ್ಯರೇ ಮುಂದೆ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ವಿದ್ಯಾರಣ್ಯರಾಗಿ ಶೃಂಗೇರಿಯ ಶಾರದಾಪೀಠಕ್ಕೆ ಆಚಾರ್ಯರಾದರು. ವಿದ್ಯಾರಣ್ಯ ಎಂಬ ಹೆಸರಿಗೆ ತಕ್ಕಂತೆ ಸರ್ವತೋಮುಖವಾದ ಪಾಂಡಿತ್ಯ-ಪ್ರತಿಭೆಗಳನ್ನು ಹೊಂದಿದ್ದ ಇವರು ಅನೇಕ ಗ್ರಂಥಗಳನ್ನು ರಚಿಸಿ ಪ್ರಸಿದ್ಧರಾಗಿದ್ದಾರೆ.

ಕನ್ನಡ ಅನುವಾದದ ಬಗ್ಗೆ ಎರಡು ಮಾತು. ಸಂಸ್ಕೃತದ ಪ್ರೌಢವಾದ ಶಾಸ್ತ್ರ ಗ್ರಂಥಗಳನ್ನು ಭಾಷಾಂತರ ಮಾಡುವುದು ಕಠಿಣವಾದ ಕೆಲಸ. ಅನುವಾದಕನು ತನ್ನ ಸ್ವಂತ ಮಾತುಗಳನ್ನು ಸೇರಿಸಿದರೆ ಅದು ಅನುವಾದಕ್ಕಿಂತಲೂ ವ್ಯಾಖ್ಯಾನವೆನಿಸುತ್ತದೆ. ಮೂಲದ ಪದಕ್ಕೆ ಕನ್ನಡದ ಮತ್ತೊಂದು ಪದವಿತ್ತು ಅನುವಾದಿಸಿದರೆ ಎಷ್ಟೋ ಕಡೆ ಮೂಲದ ತಾತ್ಪರ್ಯವನ್ನು ಗ್ರಹಿಸುವುದೇ ಕಷ್ಟವಾಗುತ್ತದೆ. ಆದರೂ ಕೂಡಿದ ಮಟ್ಟಿಗೆ ಸ್ವಂತ ವಾಕ್ಯಗಳಿಂದ ಗ್ರಂಥವನ್ನು ಲಂಬಿಸದೆ, ಮೂಲಾಭಿಪ್ರಾಯಕ್ಕೆ ವಿರೋಧ ಬರದಂತೆ ಅನುವಾದ ಮಾಡಲು ಪ್ರಯತ್ನಮಾಡಲಾಗಿದೆ. ಮೂಲಗ್ರಂಥವನ್ನು ಆಯಾ ವಿಷಯಕ್ಕೆ ತಕ್ಕಂತೆ ಚಿಕ್ಕಚಿಕ್ಕ ಪ್ರಕರಣ (ಪ್ಯಾರ)ಗಳನ್ನಾಗಿ ವಿಂಗಡಿಸಿ ಅವುಗಳಿಗೆ ಉಚಿತವಾದ ಶೀರ್ಷಿಕೆಗಳನ್ನು ಕೊಡಲಾಗಿದೆ. ಅನುವಾದದಲ್ಲೂ ಇದೇ ವಿಧಾನವನ್ನು ಅನುಸರಿಸಲಾಗಿದೆ. ಕಠಿಣವೆಂದು ತೋರಿದ ವಿಷಯಗಳನ್ನು ವಿವರಿಸಲು ಆವಶ್ಯಕವಾದ ಟಿಪ್ಪಣಿಗಳನ್ನು ಗ್ರಂಥದ ಕೊನೆಯಲ್ಲಿ ಕೊಡಲಾಗಿದೆ. ಭಾರತೀಯ ದರ್ಶನಗಳ ಅದರಲ್ಲೂ ಅದ್ವೈತದರ್ಶನದ ಸಾಮಾನ್ಯ ಪರಿಚಯವುಳ್ಳ ಓದುಗರಿಗೂ, ವಿಶ್ವವಿದ್ಯಾನಿಲಯದ ದರ್ಶನವಿಭಾಗದ ವಿದ್ಯಾರ್ಥಿಗಳಿಗೂ ಮೂಲಸಹಿತವಾದ ಈ ಅನುವಾದದಿಂದ ಉಪಯೋಗವಾಗುತ್ತದೆಯೆಂದು ಭಾವಿಸುತ್ತೇನೆ.

ಅನುವಾದದಲ್ಲಿ ಕೆಲವೆಡೆ ಉಂಟಾಗಿರುವ ದೋಷಗಳನ್ನು ಓದುಗರು ಮುಂದೆ ಕಂಡಂತೆ ತಿದ್ದಿಕೊಂಡು ಓದಬೇಕಾಗಿ ಪ್ರಾರ್ಥನೆ. ೧೧ನೇ ಪುಟದ ಏಳನೆಯ ಸಾಲಿನಲ್ಲಿ "ಪಾಕಜನ್ಯವಾದ ಭೇದವು" ಎಂಬಲ್ಲಿ "ಪಾಕಜನ್ಯವಾದ ರೂಪಾದಿಗಳ ಭೇದವು" ಎಂದು ಓದಿಕೊಳ್ಳಬೇಕು. ೨೧ನೇ ಪುಟದ ಹತ್ತೊಂಬತ್ತನೆಯ ಸಾಲಿನಲ್ಲಿ "ದಿಕ್ ಮತ್ತು" ಎಂಬುದಕ್ಕೆ ಬದಲಾಗಿ "ದಿಕ್ಕುಗಳಲ್ಲಿ ಗಮನಾದಿರೂಪವಾದ" ಎಂದು ತಿದ್ದಿಕೊಳ್ಳಬೇಕು. ೩೦ನೇ ಪುಟದಲ್ಲಿ "ಪುತ್ರ ಎಂಬ ಪದವನ್ನು ಬರೆದಿರುವ" ಮತ್ತು "ಪುತ್ರ ಎಂಬ ಪದವನ್ನು ಗುರುತುಮಾಡಿರುವ" ಎಂಬೆಡೆಗಳಲ್ಲಿ "ಮಗುವಿನ ಹೆಜ್ಜೆಯ ಗುರುತನ್ನು ಹೊಂದಿರುವ" ಎಂದು ತಿದ್ದಿಕೊಳ್ಳಬೇಕು. ೫೪ನೇ ಪುಟದ ಹದಿನೈದನೆಯ ಸಾಲಿನಲ್ಲಿ "ವಿಧಿವಿವೇಚನೆಯನ್ನು ವಿವರಣೆಮಾಡಿರುವ" ಎಂಬುದಕ್ಕೆ ಬದಲಾಗಿ "ವಿಧಿವಿವೇಕವನ್ನು (ಮಂಡನಮಿಶ್ರ

ಕೃತ ಗ್ರಂಥ) ವ್ಯಾಖ್ಯಾನ ಮಾಡಿರುವ" ಎಂದು ಓದಿಕೊಳ್ಳಬೇಕು. ೮೨ನೇ ಪುಟದ ಹದಿನಾರನೆಯ ಸಾಲಿನಲ್ಲಿ "ಬೇರೆಯಾದುದು (ಲಾಭವು)" ಎಂಬುದಕ್ಕೆ ಬದಲಾಗಿ "ಉತ್ಕೃಷ್ಟವಾದುದು" ಎಂದು ಓದಿಕೊಳ್ಳಬೇಕು. ಇತರ ಕಡೆ ಕಂಡುಬರುವ ಸಣ್ಣಪುಟ್ಟ ಮುದ್ರಣದೋಷಗಳನ್ನು ಓದುಗರು ಸುಲಭವಾಗಿ ತಿದ್ದಿಕೊಳ್ಳಬಹುದೆಂದು ಭಾವಿಸಿ ಪ್ರತ್ಯೇಕವಾದ ತಿದ್ದುಪಡಿಯನ್ನು ಕೊಟ್ಟಿಲ್ಲ.

ಈ ಅನುವಾದಕಾರ್ಯವನ್ನು ಕೈಗೊಳ್ಳಲು ನನಗೆ ಪ್ರೇರಣೆಯಿತ್ತ ತತ್ತ್ವಶಾಸ್ತ್ರ ಪ್ರಾಧ್ಯಾಪಕರಾದ ಡಾ. ಕೆ. ಬಿ. ರಾಮಕೃಷ್ಣರಾಯರಿಗೂ ಈ ಗ್ರಂಥವನ್ನು ಪ್ರಕಾಶಕ್ಕೆ ತಂದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಹಾ. ಮಾ. ನಾಯಕರಿಗೂ ನಾನು ಕೃತಜ್ಞನಾಗಿದ್ದೇನೆ. ನನ್ನ ಮಿತ್ರರೂ ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯ ಅದ್ವೈತವೇದಾಂತ ಪ್ರಾಧ್ಯಾಪಕರೂ ಆದ ವಿದ್ವಾನ್ ಶ್ರೀ. ಕೆ. ನಾರಾಯಣಭಟ್ಟರು ಅನುವಾದದಲ್ಲಿ ಕೆಲವೆಡೆ ಸ್ಖಾಲಿತ್ಯಗಳನ್ನು ತಿದ್ದಿಕೊಟ್ಟು ಉಪಕಾರಮಾಡಿದ್ದಾರೆ. ಅದಕ್ಕಾಗಿ ಅವರಿಗೂ ನಾನು ಕೃತಜ್ಞ.

ಶೇಷಾಚಲ ಶರ್ಮಾ

ವಿಷಯಸೂಚಿ

ಶ್ರೀಸಾಯಣಮಾಧವರಚಿತಸರ್ವದರ್ಶನಸಂಗ್ರಹಸ್ಥಂ

ಶಾಂಕರದರ್ಶನಮ್

ಪರಿಣಾಮವಾದಖಂಡನಮ್

(ಪ್ರಧಾನಸಾಧಕಾನುಮಾನನಿರಾಕರಣಮ್)

ಸೋಽಯಂ ಪರಿಣಾಮವಾದಃ ಪ್ರಾಮಾಣಿಕಗರ್ಹಣಮರ್ಹತಿ। ನ ಹ್ಯಚೇತನಂ ಪ್ರಧಾನಂ ಚೇತನಾನಧಿಷ್ಠಿತಂ ಪ್ರವರ್ತತೇ। ಸುವರ್ಣಾದೌ ರುಚಕಾದ್ಯುಪಾದಾನೇ ಹೇಮಕಾರಾದಿಚೇತನಾಧಿಷ್ಠಾನೋಪಲಮ್ಭೇನ ನಿತ್ಯತ್ವಸಾಧಕಕೃತಕತ್ವವತ್ ಸುಖದುಃಖಮೋಹಾತ್ಮನಾನ್ವಿತತ್ವಾದೇಃ ಸಾಧನಸ್ಯ ಸಾಧ್ಯವಿಪರ್ಯಯವ್ಯಾಪ್ತತಯಾ ವಿರುದ್ಧತ್ವಾತ್।

ಸ್ವರೂಪಾಸಿದ್ಧತ್ವಾಚ್ಚ। ಆನ್ತರಾಃ ಖಲ್ವಮೀ ಸುಖದುಃಖಮೋಹಾ ಬಾಹ್ಯೇಭ್ಯಶ್ಚನ್ದನಾದಿಭ್ಯೋ ವಿಭಿನ್ನಪ್ರತ್ಯಯವೇದನೀಯೇಭ್ಯೋ ವ್ಯತಿರಿಕ್ತಾ ಅಧ್ಯಕ್ಷಮೀಕ್ಷ್ಯನ್ತೇ। ಯದ್ಯಮೀ ಸುಖಾದಿಸ್ವಭಾವಾ ಭವೇಯುಸ್ತದಾ ಹೇಮನ್ತೇಽಪಿ ಚನ್ದನಃ ಸುಖಃ ಸ್ಯಾತ್। ನ ಹಿ ಚನ್ದನಃ ಕದಾಚಿದಚನ್ದನಃ। ತಥಾಽನಿದಾಘೇಽಪಿ ಕುಙ್ಕುಮಪಙ್ಕಃ ಸುಖೋಭವೇತ್। ನಹ್ಯಸೌ ಕದಾಚಿದಕುಙ್ಕುಮಪಙ್ಕ ಇತಿ। ಏವಂ ಕಣ್ಟಕಃ ಕ್ರಮೇಲಕಸ್ಯೇವ ಮನುಷ್ಯಾದೀನಾಮಪಿ ಪ್ರಾಣಭೃತಾಂ ಸುಖಃ ಸ್ಯಾತ್। ನಹ್ಯಸೌ ಕಾಂಶ್ಚಿತ್ಪ್ರತ್ಯೇವ ಕಣ್ಟಕ ಇತಿ। ತಸ್ಮಾಚ್ಚನ್ದನಕುಙ್ಕುಮಾದಯೋ ವಿಶೇಷಾಃ ಕಾಲವಿಶೇಷಾದ್ಯಪೇಕ್ಷಯಾ ಸುಖಾದಿಹೇತವೋ ನತು ಸುಖಾದಿಸ್ವಭಾವಾ ಇತಿ ರಮಣೀಯಮ್। ತಸ್ಮಾದ್ಧೇತುರಸಿದ್ಧ ಇತಿ ಸಿದ್ಧಮ್।

ಶಾಂಕರದರ್ಶನ

ಪರಿಣಾಮವಾದದ ಖಂಡನೆ

(ಪ್ರಧಾನವನ್ನು ಸಾಧಿಸುವ ಅನುಮಾನದ ನಿರಾಕರಣೆ)

ಅಂತಹ ಈ 'ಪರಿಣಾಮವಾದ'[1]ವು ಪ್ರಾಮಾಣಿಕರಾದವರ ನಿಂದೆಗೊಳಗಾಗುತ್ತದೆ. ಏಕೆಂದರೆ, ಅಚೇತನವಾದ ಪ್ರಧಾನವು ಚೇತನನ ಆಶ್ರಯವಿಲ್ಲದೆ (ಸ್ವತಂತ್ರವಾಗಿ) ಪ್ರವರ್ತಿಸುವುದಿಲ್ಲ. ಉಪಾದಾನ ಕಾರಣವಾದ ಚಿನ್ನ ಮೊದಲಾದ ದ್ರವ್ಯದಿಂದ ಚಿನ್ನದ ಸರ ಮುಂತಾದುದು ಆಗಬೇಕಾದರೆ ಚೇತನನಾಗಿರುವ ಅಕ್ಕಸಾಲಿಗ ಮುಂತಾದವನು (ಕರ್ತೃ) ಇದ್ದೇಇರಬೇಕಷ್ಟೆ. ಆದುದರಿಂದ ನಿತ್ಯತ್ವವನ್ನು ಸಾಧಿಸಲು ಹೊರಟ

ಕೃತಕತ್ವ ಹೇತುವಿನಂತೆ ಸುಖದುಃಖಮೋಹರೂಪ ಸ್ವಭಾವದಿಂದ ಕೂಡಿರುವಿಕೆ ಎಂದು ಮುಂತಾದ ಹೇತುವು ಸಾಧ್ಯಾಭಾವಕ್ಕೆ ವ್ಯಾಪ್ತವಾಗಿರುವುದರಿಂದ ಸಾಧ್ಯಕ್ಕೆ 'ವಿರುದ್ಧ'[೩] ವಾಗುತ್ತದೆ.

ಮತ್ತು ಹೇತುವು ಸ್ವರೂಪಾಸಿದ್ಧಿದೋಷದಿಂದ ಕೂಡಿದೆ. ಸುಖದುಃಖಮೋಹ ಗಳು ಆಂತರಿಕವಾದವುಗಳು ಅಂದರೆ ಮಾನಸಿಕವಾದ ಪ್ರತೀತಿಗೆ ಗೋಚರವಾಗತಕ್ಕವು. ಬಾಹ್ಯವಾದ ಚಂದನ ಮೊದಲಾದುವು ಚಾಕ್ಷುಷ ಮೊದಲಾದ ಜ್ಞಾನಕ್ಕೆ ಗೋಚರವಾಗ ತಕ್ಕವು. ಸುಖದುಃಖಮೋಹಗಳು ಬಾಹ್ಯವಾದ ಚಂದನ ಮೊದಲಾದ ವಸ್ತುಗಳಿಗಿಂತ ಭಿನ್ನವಾಗಿಯೇ ಗೋಚರವಾಗುವುದರಿಂದ ಸುಖದುಃಖಮೋಹಗಳು ಚಂದನ ಮೊದಲಾದ ವಸ್ತುಗಳ ಸ್ವಭಾವವಲ್ಲ. ಒಂದು ವೇಳೆ ಸುಖಾದಿಗಳು ಚಂದನಾದಿ ವಸ್ತುಗಳ ಸ್ವಭಾವವೇ ಆಗಿರುವುದಾದರೆ ಛಳಿಗಾಲದಲ್ಲಿಯೂ ಚಂದನವು ಸುಖವಾಗಿರಬೇಕು. ಚಂದನವು ಎಂದಿಗೂ ಚಂದನವಲ್ಲದುದಾಗಿ ಆಗುವುದಿಲ್ಲವಷ್ಟೆ. ಅದೇ ರೀತಿ ಬೇಸಿಗೆ ಯಲ್ಲದ ಕಾಲಗಳಲ್ಲೂ ಕೇಸರಿಯ ಲೇಪವು ಸುಖವಾಗಬೇಕಾದೀತು. ಏಕೆಂದರೆ, ಇದು ಎಂದಾದರೂ ಕೇಸರಿಯ ಲೇಪವಲ್ಲದುದಾಗಿ ಆಗುವುದಿಲ್ಲವಷ್ಟೆ. ಇದೇ ರೀತಿ ಮುಳ್ಳು ಒಂಟೆಗೆ ಹೇಗೋ ಹಾಗೆ ಮನುಷ್ಯ ಮೊದಲಾದ ಪ್ರಾಣಧಾರಿಗಳಿಗೂ ಸುಖ ವಾಗಬೇಕಾದೀತು. ಮುಳ್ಳು ಕೆಲವರಿಗೆ ಮಾತ್ರ ಮುಳ್ಳಾಗಿ ಇರುವುದಿಲ್ಲವಷ್ಟೆ. ಆದುದ ರಿಂದ ಚಂದನ, ಕೇಸರಿ ಮುಂತಾದ ವಿಶೇಷ ವಸ್ತುಗಳು ಕಾಲವಿಶೇಷ ಮೊದಲಾದ ಕಾರಣದಿಂದ ಸುಖಾದಿಗಳಿಗೆ ಕಾರಣಗಳೇ ಹೊರತು, ಸುಖಾದಿ ಸ್ವರೂಪಗಳೇ ಅಲ್ಲ ಎಂದು ಹೇಳುವುದೇ ಯುಕ್ತವಾಗಿದೆ. ಆದುದರಿಂದ ಹೇತು ಅಸಿದ್ಧವೆಂದು ನಿಶ್ಚಿತವಾಗು ತ್ತದೆ. (ಪಕ್ಷವಾದ ಚಂದನಾದಿ ಪದಾರ್ಥಗಳಲ್ಲಿ ಸುಖದುಃಖಮೋಹ ರೂಪವಾದ ಸ್ವಭಾವದಿಂದ ಕೂಡಿರುವಿಕೆಯೆಂಬ ಹೇತು ಇಲ್ಲವಾದುದರಿಂದ ಸ್ವರೂಪಾಸಿದ್ಧಿದೋಷ ಯುಕ್ತವಾಗುತ್ತದೆಯೆಂದು ನಿಶ್ಚಿತವಾಗುತ್ತದೆ.)

ಶ್ರುತಿಃ ನ ಪ್ರಧಾನಪ್ರತಿಪಾದಿಕಾ

ನಾಪಿ ಶ್ರುತಿಃ ಪ್ರಧಾನಕಾರಣತ್ವವಾದೇ ಪ್ರಮಾಣಮ್। ಯತಃ—"ಯದಗ್ನೇ ರೋಹಿತಗ್‌ಂ ರೂಪಂ ತೇಜಸಸ್ತದ್ರೂಪಂ ಯಚ್ಛುಕ್ಲಂ ತದಪಾಂ ಯತ್ಕೃಷ್ಣಂ ತದನ್ನಸ್ಯ" (ಛಾಂ. 6-4-1) ಇತಿ ಛಾನ್ದೋಗ್ಯಶಾಖಾಯಾಂ ತೇಜೋಽಬನ್ನಾತ್ಮಿಕಾಯಾಃ ಪ್ರಕೃತೇ ರ್ಲೋಹಿತಶುಕ್ಲಕೃಷ್ಣರೂಪಾಣಿ ಸಮಾಮ್ನಾತಾನಿ, ತಾನ್ಯೇವಾತ್ರ ಪ್ರತ್ಯಭಿಜ್ಞಾಯನ್ತೇ। ತತ್ರ ಶ್ರೌತಪ್ರತ್ಯಭಿಜ್ಞಾಯಾಃ ಪ್ರಾಬಲ್ಯಾತ್ ಲೋಹಿತಾದಿಶಬ್ದಾನಾಂ ಮುಖ್ಯಾರ್ಥಸಮ್ಭವಾಚ್ಚ ತೇಜೋಽಬನ್ನಾತ್ಮಿಕಾ ಜರಾಯುಜಾಣ್ಡಜಸ್ವೇದಜೋದ್ಭಿಜ್ಜಚತುಷ್ಟಯಸ್ಯ ಭೂತಗ್ರಾಮಸ್ಯ ಪ್ರಕೃತಿರವಸೀಯತೇ। ಯದ್ಯಪಿ ತೇಜೋಽಬನ್ನಾನಾಂ ಪ್ರಕೃತೇರ್ಜಾತತ್ವೇನಯೋಗವೃತ್ತ್ಯಾಽ ವಗತಮಜಾತ್ವಮುಕ್ತಪ್ರಕೃತೌ ಸುಖಾವಬೋಧಾಯ ಪ್ರಕಲ್ಪ್ಯತೇ। ಯಥಾ "ಅಸೌವಾದಿತ್ಯೋ ದೇವಮಧು" (ಛಾಂ. 3-1-1) ಇತ್ಯಾದಿವಾಕ್ಯೇನಾದಿತ್ಯಸ್ಯ ಮಧುತ್ವಂ ಪರಿಕಲ್ಪ್ಯತೇ ತಥಾ

ತೇಜೋಽಬನ್ನಾತ್ಮಿಕಾ ಪ್ರಕೃತಿರೇವಾಜೇತಿ। ಅತೋಽಜಾಮೇಕಾಮಿತ್ಯಾದಿಕಾ ಶ್ರುತಿರಪಿ ನ ಪ್ರಧಾನಪ್ರತಿಪಾದಿಕಾ।

ಶ್ರುತಿಯು ಪ್ರಧಾನವನ್ನು ಪ್ರತಿಪಾದಿಸುವುದಿಲ್ಲ

ಪ್ರಧಾನವೇ ಜಗತ್ತಿಗೆ ಕಾರಣವೆಂಬ ವಾದಕ್ಕೆ 'ವೇದ'[3]ವೂ ಪ್ರಮಾಣವಾಗುವುದಿಲ್ಲ. ಏಕೆಂದರೆ, "ಅಗ್ನಿಯ ಕೆಂಬಣ್ಣದ ರೂಪವು ಯಾವುದೋ ಅದೇ ತೇಜಸ್ಸಿನ ರೂಪ, ಯಾವುದು ಬಿಳಿಯ ರೂಪವೋ ಅದೇ ನೀರಿನ ರೂಪ, ಯಾವುದು ಕಪ್ಪು ಬಣ್ಣದ ರೂಪವೋ ಅದೇ ಅನ್ನದ ರೂಪ" (ಛಾಂ. 6-4-1) ಎಂದು ಛಾಂದೋಗ್ಯ ಶಾಖೆಯಲ್ಲಿ ತೇಜೋಽಬನ್ನಾತ್ಮಕವಾದ ಪ್ರಕೃತಿಗೆ ಕೆಂಪು, ಬಿಳಿ ಹಾಗೂ ಕಪ್ಪು ರೂಪಗಳು ಹೇಳಲ್ಪಟ್ಟಿವೆ; ಅವುಗಳೇ ಇಲ್ಲಿ ಪ್ರತ್ಯಭಿಜ್ಞೆಮಾಡಲ್ಪಟ್ಟಿವೆ. (ಅವೇ ಇವು ಎಂದು ಗುರುತಿಸಲ್ಪಟ್ಟಿವೆ). ವೇದೋಕ್ತವಾದ ಪ್ರತ್ಯಭಿಜ್ಞೆಯೇ ಪ್ರಬಲವಾದುದರಿಂದ ಮತ್ತು ಲೋಹಿತ ಮೊದಲಾದ ಶಬ್ದಗಳಿಗೆ ಮುಖ್ಯಾರ್ಥಗಳ ಸಂಭವವಿರುವುದರಿಂದ ಜರಾಯುಜ, ಅಂಡಜ, ಸ್ವೇದಜ ಮತ್ತು ಉದ್ಭಿಜ್ಜ ಎಂದು ನಾಲ್ಕು ವಿಧವಾದ ಭೂತಸಮೂಹಕ್ಕೆ ತೇಜಸ್ಸು, ನೀರು ಹಾಗೂ ಅನ್ನ—ರೂಪವಾದುದೇ ಪ್ರಕೃತಿ ಎಂದು ನಿಶ್ಚಯಿಸಲ್ಪಡುತ್ತದೆ. ತೇಜಸ್ಸು, ನೀರು, ಅನ್ನ–ಇವುಗಳು ಪ್ರಕೃತಿಯಿಂದ ಹುಟ್ಟಿದವುಗಳಾದುದರಿಂದ "ಹುಟ್ಟದಿರುವುದರಿಂದ ಅಜತ್ವ"ವೆಂಬುದು ಯೋಗವೃತ್ತಿ (ಮುಖ್ಯವೃತ್ತಿ)ಯಿಂದ ಸಿದ್ಧಿಸುವುದಿಲ್ಲ. ಆದರೂ ರೂಢಿವೃತ್ತಿಯಿಂದ ತಿಳಿಯುವ ಅಜಾತ್ವವೇ ಸುಲಭವಾಗಿ ಅರ್ಥವಾಗುವುದಕ್ಕೋಸ್ಕರ ಇಲ್ಲಿ ಹೇಳಿರುವ ಪ್ರಕೃತಿಯಲ್ಲಿ ಅಂಗೀಕರಿಸಲ್ಪಡುತ್ತದೆ. "ಈ ಆದಿತ್ಯನೇ ದೇವಮಧು" (ಛಾಂ. 3-1-1) ಎಂದು ಮುಂತಾದ ವಾಕ್ಯದಿಂದ ಆದಿತ್ಯನಲ್ಲಿ ಮಧುತ್ವವು ಕಲ್ಪಿತವಾಗುವಂತೆ ತೇಜೋಽಬನ್ನಾತ್ಮಕವಾದ ಪ್ರಕೃತಿಯೇ "ಅಜಾ" ಎಂಬುದಾಗಿ ಕಲ್ಪನೆ (ರೂಪಕ). ಆದುದರಿಂದ "ಅಜಾಮೇಕಾಮ್" ಮುಂತಾದ ಶ್ರುತಿಯೂ ಪ್ರಧಾನವನ್ನು ಪ್ರತಿಪಾದಿಸುವುದಿಲ್ಲ.

ಸಾಙ್ಖ್ಯೋಕ್ತದೃಷ್ಟಾನ್ತನಿರಾಕರಣಮ್

ಯದವಾದಿ ನಿದರ್ಶನಂ ಪೂರ್ವವಾದಿನಾ ಕ್ಷೀರಾದಿಕಮಚೇತನಂ ಚೇತನಾನಧಿಷ್ಠಿತಮೇವ ವತ್ಸವಿವೃದ್ಧ್ಯರ್ಥಂ ಪ್ರವರ್ತತ ಇತಿ। ನೈತದ್ರಮಣೀಯಮ್। ಬುದ್ಧಿವಿಶೇಷಶಾಲಿನಃ ಪರಮೇಶ್ವರಸ್ಯ ತತ್ರಾಪ್ಯಧಿಷ್ಠಾತೃತ್ವಾಭ್ಯುಪಗಮಾತ್। ನ ಚ ಪರಮೇಶ್ವರಸ್ಯ ಕರುಣಯಾ ಪ್ರವೃತ್ತ್ಯಙ್ಗೀಕಾರೇ ಪ್ರಾಗುಕ್ತವಿಕಲ್ಪಾವಸರಃ। ಸೃಷ್ಟೇಃ ಪ್ರಾಕ್ ಪ್ರಾಣಿನಾಂ ದುಃಖಸಮ್ಬನ್ಧಾಸಮ್ಭವೇಽಪಿ ತನ್ನಿದಾನಾದೃಷ್ಟಸಮ್ಬನ್ಧಸಮ್ಭವೇನ ತತ್ಪ್ರಹಾಣೇಚ್ಛಯಾ ಪ್ರವೃತ್ತ್ಯುಪಪತ್ತೇಃ।

ಸಾಂಖ್ಯರ ದೃಷ್ಟಾಂತದ ನಿರಾಕರಣೆ

ಅಚೇತನವಾದ ಹಾಲುಮುಂತಾದುದು ಚೇತನನಿಂದ ಅಧಿಷ್ಠಿತವಾಗದೆಯೇ ಕರುವಿನ ಬೆಳವಣಿಗೆಗೋಸ್ಕರ ಪ್ರವರ್ತಿಸುತ್ತದೆ ಎಂದು ಪೂರ್ವಪಕ್ಷಿಯು ಹೇಳುವ

ದೃಷ್ಟಾಂತವು ಸಮಂಜಸವಾಗಿಲ್ಲ. ಏಕೆಂದರೆ, ಬುದ್ಧಿವಿಶೇಷಶಾಲಿಯಾದ ಪರಮೇಶ್ವರನೇ ಅಲ್ಲಿಯೂ ಅಧಿಷ್ಠಾತೃವಾಗಿದ್ದಾನೆಂದು ಒಪ್ಪಿಕೊಳ್ಳಬೇಕು. ಪರಮೇಶ್ವರನು ಕರುಣೆಯಿಂದ ಪ್ರವರ್ತಿಸುತ್ತಾನೆಂದು ಅಂಗೀಕರಿಸುವುದಾದರೆ 'ಹಿಂದೆ ಹೇಳಿದ[4] ವಿರೋಧ'ಗಳಿಗೆ ಅವಕಾಶವಿರುವುದಿಲ್ಲ. ಸೃಷ್ಟಿಗೆ ಮುಂಚೆ ಪ್ರಾಣಿಗಳಿಗೆ ದುಃಖದ ಸಂಬಂಧವಿಲ್ಲದಿದ್ದರೂ ದುಃಖಕ್ಕೆ ಕಾರಣವಾದ ಅದೃಷ್ಟದ ಸಂಬಂಧವು ಇರಬಹುದಾದ್ದರಿಂದ ಅಂತಹ ದುಃಖವನ್ನು ಹೋಗಲಾಡಿಸುವ ಇಚ್ಛೆಯಿಂದ ಪರಮೇಶ್ವರನು ಪ್ರವರ್ತಿಸುತ್ತಾನೆಂಬುದು ಯುಕ್ತವಾಗುತ್ತದೆ.

ಪ್ರಧಾನಸ್ಯ ನ ಪುರುಷಾರ್ಥಾ ಪ್ರವೃತ್ತಿಃ

ಕಿಂಚ, ಪುರುಷಾರ್ಥಪ್ರಯುಕ್ತಾ ಪ್ರಧಾನಪ್ರವೃತ್ತಿರಿತ್ಯುಕ್ತಂ, ತದ್ವಿವೇಕ್ತವ್ಯಮ್। ಕಿಂ ಪ್ರಧಾನಂ ಕೇವಲಂ ಭೋಗಾರ್ಥಂ ಪ್ರವರ್ತತೇ ಕಿಂ ವಾ ಕೇವಲಮೋಕ್ಷಾರ್ಥಮಾಹೋಸ್ವಿದುಭಯಾರ್ಥಮ್?

ನ ತಾವದಾದ್ಯಃ ಕಲ್ಪೋಽವಕಲ್ಪತೇ। ಅನಾಧೇಯಾತಿಶಯಸ್ಯ ಕೂಟಸ್ಥನಿತ್ಯಸ್ಯ ಪುರುಷಸ್ಯ ತಾತ್ತ್ವಿಕಭೋಗಾಸಮ್ಭವಾತ್। ಅನಿರ್ಮೋಕ್ಷಪ್ರಸಙ್ಗಾಚ್ಚ। ಯೇನ ಹಿ ಪ್ರಯೋಜನೇನ ಪ್ರಧಾನಂ ಪ್ರವರ್ತಿತಂ ತದನೇನ ವಿಧಾತವ್ಯಮ್। ಭೋಗೇನ ಚೈತತ್ಪ್ರವರ್ತಿತಮಿತಿ ತಮೇವ ವಿದಧ್ಯಾನ್ನಮೋಕ್ಷಮಿತಿ।

ನಾಽಪಿ ದ್ವಿತೀಯಃ। ಚಿದ್ಧಾತೋರ್ನಿತ್ಯಶುದ್ಧಬುದ್ಧಮುಕ್ತಸ್ವಭಾವತಯಾ ಕರ್ಮಾನುಭವವಾಸನಾನಾಮಸಮ್ಭವೇನ ಪ್ರಧಾನಪ್ರವೃತ್ತೇಃ ಪ್ರಾಗಪಿ ಮುಕ್ತತಯಾ ತದರ್ಥಂ ಪ್ರವೃತ್ತ್ಯನುಪಪತ್ತೇಃ। ಶಬ್ದಾದ್ಯುಪಭೋಗಾರ್ಥಮಪ್ರವೃತ್ತತ್ವೇನ ಪ್ರಧಾನಸ್ಯ ತದಜನಕತ್ವಪ್ರಸಙ್ಗಾಚ್ಚ।

ನಾಽಪಿ ತೃತೀಯಃ। ಪ್ರಾಗುಕ್ತದೂಷಣಲಙ್ಘನಾಲಙ್ಘಿತತ್ವಾತ್। ಪ್ರವೃತ್ತಿಸ್ವಭಾವಾಯಾಃ ಪ್ರಕೃತೇರೌದಾಸೀನ್ಯಾಯೋಗಾಚ್ಚ।

ನನು ಸತ್ತ್ವಪುರುಷಾನ್ಯತಾಖ್ಯಾತಿಃ ಪುರುಷಾರ್ಥಃ। ತಸ್ಯಾಂ ಜಾತಾಯಾಂ ಸಾ ನಿವರ್ತತೇ ಕೃತಕಾರ್ಯತ್ವಾದಿತಿ ಚೇತ್ತದಸಮಞ್ಜಸಮ್। ಅಚೇತನಾಯಾಃ ಪ್ರಕೃತೇರ್ವಿಚಾರ್ಯಕಾರ್ಯಕಾರಿತ್ವಾಯೋಗಾತ್। ಯಥೇಯಂ ಕೃತೇಽಪಿ ಶಬ್ದಾದ್ಯುಪಲಮ್ಭೇ ತದರ್ಥಂ ಪುನಃ ಪ್ರವರ್ತತ ಏವಮತ್ರಾಪಿ ಪುನಃ ಪ್ರವರ್ತೇತ। ಸ್ವಭಾವಸ್ಯಾನಪಾಯಾತ್।

ಕಿಂಚ, ಸಾ ಪ್ರಕೃತಿರ್ವಿವೇಕಖ್ಯಾತಿವಶಾದುಚ್ಛಿದ್ಯತೇನವಾ? ಉಚ್ಛೇದೇ ಸರ್ವಸ್ಯ ಸಮ್ಪ್ರತಿ ಸಂಸಾರೋಽಸ್ತಮಿಯಾತ್। ಅನುಚ್ಛೇದೇ ನ ಕಸ್ಯಚಿನ್ಮೋಕ್ಷಃ। ನನು ಪ್ರಧಾನಾಭೇದೇಽಪಿ ತತ್ತತ್ಪುರುಷಾವಿವೇಕಖ್ಯಾತಿಲಕ್ಷಣಾವಿದ್ಯಾಸದಸತ್ತ್ವನಿಬನ್ಧನೌ ಬನ್ಧಮೋಕ್ಷಾವುಪಪದ್ಯೇಯಾತಾಮಿತಿ ಚೇತ್—ಹನ್ತ! ತರ್ಹಿ ಕೃತಂ ಪ್ರಕೃತ್ಯಾ। ಅವಿದ್ಯಾಸದಸದ್ಭಾವಾಭ್ಯಾಮೇವ ತದುಪಪತ್ತೇಃ।

ನನ್ವವಿದ್ಯಾಪಕ್ಷೇಽಪ್ಯೇಷ ದೋಷಃ ಪ್ರಾದುಃಷ್ಯಾದಿತಿ ಚೇತ್—ತದೇತತ್ತತ್ತ್ಯವಸ್ಥಾನ ಮಸ್ಥಾನೇ। ನಹಿ ವಯಂ ಪ್ರಧಾನವದವಿದ್ಯಾಂ ಸರ್ವೇಷು ಜೀವೇಷ್ವೇಕಾಮಾಚಕ್ಷ್ಮಹೇ ಯೇನೈವಮುಪಾಲಭ್ಯೇಮಹಿ। ಅಪಿತ್ವಿಯಂ ಪ್ರತಿಜೀವಂ ಭಿದ್ಯತೇ। ತೇನ ಯಸ್ಯೈವ ಜೀವಸ್ಯ ವಿದ್ಯೋತ್ಪದ್ಯತೇ ತಸ್ಯೈವಾವಿದ್ಯಾ ಸಮುಚ್ಛಿದ್ಯತೇ ನಾನ್ಯಸ್ಯ। ಭಿನ್ನಾಯತನ ಯೋಸ್ತಯೋರ್ವಿರೋಧಾಭಾವಾತ್। ಅತೋ ನ ಸಮಸ್ತಸಂಸಾರೋಚ್ಛೇದಪ್ರಸಙ್ಗದೋಷಃ। ತಸ್ಮಾತ್ಪರಿಣಾಮಃ ಪರಿತ್ಯಕ್ತವ್ಯಃ। ಸ್ವೀಕರ್ತವ್ಯಶ್ಚ ವಿವರ್ತವಾದಃ।

ಪುರುಷಾರ್ಥಕ್ಕಾಗಿ ಪ್ರಧಾನವು ಪ್ರವರ್ತಿಸಲಾರದು

ಮತ್ತು ಪುರುಷನ ಪ್ರಯೋಜನಕ್ಕಾಗಿ ಪ್ರಧಾನವು ಪ್ರವರ್ತಿಸುತ್ತದೆ ಎಂದು ಹೇಳಿದುದನ್ನು ಸ್ವಲ್ಪ ವಿವೇಚನೆ ಮಾಡಬೇಕು. ಪ್ರಧಾನವು ಕೇವಲ ಭೋಗಕ್ಕಾಗಿಯೇ ಪ್ರವರ್ತಿಸುತ್ತದೋ? ಅಥವಾ ಕೇವಲ ಮೋಕ್ಷಕ್ಕಾಗಿಯೋ? ಅಥವಾ ಎರಡಕ್ಕೂನೋ?

ಇವುಗಳ ಪೈಕಿ ಮೊದಲನೆಯ ಪಕ್ಷವು ಸರಿಯಿಲ್ಲ. ಏಕೆಂದರೆ, ಸುಖದುಃಖ ಮುಂತಾದ ಅತಿಶಯ ಧರ್ಮಕ್ಕೆ ಅನರ್ಹನೂ ಕೂಟಸ್ಥನಿತ್ಯನೂ ಆದ ಪುರುಷನಿಗೆ ತಾತ್ತ್ವಿಕವಾದ ಭೋಗಸಂಭವವೇ ಇಲ್ಲ. ಹಾಗೆ ಸಂಭವವಿದ್ದರೆ ಮೋಕ್ಷವೇ ಇಲ್ಲದಿರ ಬೇಕಾಗುತ್ತದೆ. ಯಾವ ಪ್ರಯೋಜನಕ್ಕಾಗಿ ಪ್ರಧಾನವು ಹೊರಟಿತೋ ಅದನ್ನೇ ಅದು ನೆರವೇರಿಸಬೇಕು. ಭೋಗಕ್ಕಾಗಿ ಹೊರಟ ಪ್ರಧಾನವು ಭೋಗವನ್ನೇ ಉಂಟುಮಾಡಬೇಕೇ ಹೊರತು ಮೋಕ್ಷವನ್ನಲ್ಲ!

ಎರಡನೆಯ ಪಕ್ಷವೂ ಸರಿಯಿಲ್ಲ. ಚಿತ್ ಎಂಬ ತತ್ತ್ವವು ಸ್ವಭಾವತಃ ನಿತ್ಯವೂ, ಶುದ್ಧವೂ, ಬುದ್ಧವೂ, ಮುಕ್ತವೂ ಆಗಿರುವ ಕಾರಣ, ಕರ್ಮಾನುಭವ ಹಾಗೂ ವಾಸನೆಗಳ ಸಂಭವವೇ ಇಲ್ಲದಿರುವುದರಿಂದ ಪ್ರಧಾನವು ಪ್ರವರ್ತಿಸುವುದಕ್ಕೆ ಮುಂಚೆಯೂ ಮುಕ್ತ ವಾಗಿಯೇ ಇರುವುದರಿಂದ ಅದಕ್ಕೋಸ್ಕರ ಪ್ರವರ್ತಿಸುತ್ತದೆ ಎಂಬುದು ಯುಕ್ತವಾಗು ವುದಿಲ್ಲ. ಮತ್ತು ಶಬ್ದ, ಸ್ಪರ್ಶ ಮುಂತಾದ ಭೋಗಕ್ಕಾಗಿ ಹೊರಟಿಲ್ಲವಾದುದರಿಂದ ಪ್ರಧಾನವು ಅದನ್ನು(ಭೋಗವನ್ನು) ಉಂಟುಮಾಡುವ ಪ್ರಸಂಗವೇ ಇಲ್ಲದಿರಬೇಕಾಗುತ್ತದೆ.

ಮೂರನೆಯ ಪಕ್ಷವೂ ಹೊಂದುವುದಿಲ್ಲ. ಏಕೆಂದರೆ, ಹಿಂದೆ ಹೇಳಿದ ದೋಷಗಳೇ ಇಲ್ಲಿಯೂ ಆಕ್ರಮಿಸುತ್ತವೆ. (ಪುರುಷನಿಗೆ ತಾತ್ತ್ವಿಕವಾದ ಭೋಗವಾಗಲಿ, ಮೋಕ್ಷ ವಾಗಲಿ ಇಲ್ಲವೇ ಇಲ್ಲ.) ಪ್ರವೃತ್ತಿಯೇ ಅಂದರೆ ಚಾಂಚಲ್ಯವೇ ಸ್ವಭಾವವಾಗಿ ಉಳ್ಳ ಪ್ರಕೃತಿಗೆ ಉದಾಸೀನವಾಗಿರುವಿಕೆಯು ಸಾಧ್ಯವಾಗುವುದೇ ಇಲ್ಲ. (ಆದುದರಿಂದ ಅದು ಮೋಕ್ಷವನ್ನುಂಟುಮಾಡಲೇ ಆರದು.)

ಪ್ರಕೃತಿ ಬೇರೆ, ಪುರುಷ ಬೇರೆ ಎಂಬ ಪರಿಜ್ಞಾನವೇ ಪುರುಷಾರ್ಥವು. ಅದು ಉಂಟಾದರೆ, ತಾನು ಮಾಡಬೇಕಾದ ಕಾರ್ಯವನ್ನು ಮಾಡಿಯಾದುದರಿಂದ ಪ್ರಧಾನವು ನಿವೃತ್ತಿ ಹೊಂದುತ್ತದೆ ಎಂದು ಹೇಳುವುದಾದರೆ, ಅದೂ ಸಮಂಜಸವಾಗುವುದಿಲ್ಲ. ಅಚೇತನವಾದ ಪ್ರಕೃತಿಗೆ ವಿಚಾರಪೂರ್ವಕವಾಗಿ ಕೆಲಸಮಾಡುವ ಯೋಗ್ಯತೆಯಿಲ್ಲ.

ಶಬ್ದ, ಸ್ಪರ್ಶ–ಮುಂತಾದ ಉಪಭೋಗವನ್ನುಂಟುಮಾಡಿದರೂ ಮತ್ತೆ ಅದಕ್ಕಾಗಿಯೇ ಪ್ರವರ್ತಿಸುತ್ತಿರುವಂತೆ, ಪ್ರಕೃತಿಪುರುಷ ವಿವೇಕವುಂಟಾದಮೇಲೂ ಮತ್ತೆ ಪ್ರವರ್ತಿಸಲೇ ಬೇಕಾಗುತ್ತದೆ. ಏಕೆಂದರೆ, ಸ್ವಭಾವವನ್ನು ಬಿಡಲಾಗುವುದಿಲ್ಲ.

ಮತ್ತು, ವಿವೇಕಖ್ಯಾತಿವಶದಿಂದ ಪ್ರಕೃತಿಯು ನಾಶವಾಗುತ್ತದೆಯೋ? ಅಥವಾ ಇಲ್ಲವೊ? ನಾಶಹೊಂದವುದಾದರೆ, ಎಲ್ಲರಿಗೂ ಈಗ ಸಂಸಾರವು ಅಸ್ತಂಗತವಾಗಬೇಕಾಗು ತ್ತದೆ. ನಾಶಹೊಂದುವುದಿಲ್ಲವೆನ್ನುವುದಾದರೆ, ಯಾರಿಗೂ ಮೋಕ್ಷವಿಲ್ಲದಿರಬೇಕಾಗುತ್ತದೆ. ಹಾಗಲ್ಲ; ಪ್ರಧಾನವು ಬೇರೆ ಬೇರೆಯಾಗಿ ಇಲ್ಲದಿದ್ದರೂ ಆಯಾಪುರುಷನ ಅವಿವೇಕಖ್ಯಾತಿ ಎಂಬ ಅವಿದ್ಯೆಯು ಇರುವಿಕೆ ಅಥವಾ ಇಲ್ಲದಿರುವಿಕೆಯ ಕಾರಣದಿಂದ ಬಂಧ–ಮೋಕ್ಷಗಳು ಉಪಪನ್ನವಾಗುತ್ತವೆ ಎಂದು ಹೇಳುವುದಾದರೆ, ಅಯ್ಯೋ! ಹಾಗಾದರೆ ಈ ಪ್ರಕೃತಿಯೇ ಬೇಡ. ಅವಿದ್ಯೆಯು ಇರುವಿಕೆ ಅಥವಾ ಇಲ್ಲದಿರುವಿಕೆಯಿಂದಲೇ ಬಂಧ–ಮೋಕ್ಷಗಳು ಉಪ ಪನ್ನವಾಗುತ್ತವೆಯಷ್ಟೆ!

ಅವಿದ್ಯಾಪಕ್ಷದಲ್ಲಿಯೂ ಈ ದೋಷವು ಸಂಭವಿಸುತ್ತದೆ ಎಂದು ಹೇಳಿದರೆ, ಈ ಪ್ರತಿವಾದವು ಸರಿಯಲ್ಲ. ಏಕೆಂದರೆ, ಪ್ರಧಾನದಂತೆ ಎಲ್ಲ ಜೀವರಲ್ಲಿಯೂ ಒಂದೇ ಅವಿದ್ಯೆ ಯಿದೆಯೆಂದು ನಾವು ಹೇಳುವುದಾದರೆ, ನಿಂದೆಗೊಳಗಾಗಬಹುದು. ಆದರೆ, ಪ್ರತಿಜೀವಕ್ಕೂ ಈ ಅವಿದ್ಯೆಯು ಭಿನ್ನಭಿನ್ನವಾಗಿದೆ. ಯಾವ ಜೀವಕ್ಕೆ ವಿದ್ಯೆಯುಂಟಾಗುತ್ತದೆಯೋ ಆ ಜೀವದ ಅವಿದ್ಯೆಯು ಮಾತ್ರ ನಾಶವಾಗುತ್ತದೆ, ಬೇರೆಯವರದಲ್ಲ. ಬೇರೆ ಬೇರೆ ಆಶ್ರಯ ಗಳಲ್ಲಿರುವ ವಿದ್ಯೆ–ಅವಿದ್ಯೆಗಳಿಗೆ ವಿರೋಧವೇನೂ ಇಲ್ಲ. ಆದುದರಿಂದ ಎಲ್ಲರಿಗೂ "ಸಂಸಾರ ನಾಶಪ್ರಸಂಗ"ವೆಂಬ ದೋಷವಿಲ್ಲ. ಆದಕಾರಣ ಪರಿಣಾಮವಾದ'ವನ್ನು ಪರಿತ್ಯಜಿಸ ಬೇಕು, ವಿವರ್ತವಾದ'ವನ್ನು ಸ್ವೀಕರಿಸಬೇಕು.

ಚಿಜ್ಜಡಯೋಃಸಾರೂಪ್ಯಾಭಾವೇಽಪಿ ವಿವರ್ತಸಿದ್ಧಿಃ

ನನು ಜೀವಜಡಯೋಃ ಸಾರೂಪ್ಯಾಭಾವೇನ ಚಿದ್ವಿವರ್ತತ್ವಂ ಪ್ರಪಞ್ಚಸ್ಯ ನ ಸಮ ರಿಪದ್ಯತ ಇತಿ ಪ್ರಾಗವಾದಿಷ್ಮೇತಿ ಚೇತ್—ನೈತತ್ಸಾಧು। ನಹಿ ಸಾರೂಪ್ಯನಿಬನ್ಧನಾಃ ಸರ್ವೇ ವಿಭ್ರಮಾ ಇತಿ ವ್ಯಾಪ್ತಿರಸ್ತಿ। ಅಸರೂಪಾದಪಿ ಕಾಮಾದೇಃ ಕಾನ್ತಾಲಿಙ್ಗನಾದಿಷ್ವಿವ ಸ್ವ ವಿಭ್ರಮಸ್ಯೋಪಲಮ್ಭಾತ್। ಕಿಂಚ, ಕಾದಾಚಿತ್ಕೇ ವಿಭ್ರಮೇ ಸಾರೂಪ್ಯಾಪೇಕ್ಷಾ ನಾನಾ ವಿದ್ಯಾನಿಬನ್ಧನೇ ಪ್ರಪಞ್ಚೇ। ತದವೋಚದಾಚಾರ್ಯವಾಚಸ್ಪತಿಃ :

ವಿವರ್ತಸ್ತು ಪ್ರಪಞ್ಚೋಽಯಂ ಬ್ರಹ್ಮಣೋಽಪರಿಣಾಮಿನಃ।
ಅನಾದಿವಾಸನೋದ್ಭೂತೋ ನ ಸಾರೂಪ್ಯಮಪೇಕ್ಷತೇ॥ ಇತಿ।

ತದೇತತ್ಸರ್ವಂ ವೇದಾನ್ತಶಾಸ್ತ್ರಪರಿಶ್ರಮಶಾಲಿನಾಂ ಸುಗಮಂ ಸುಘಟಂ ಚ।

ಸಾರೂಪ್ಯವಿಲ್ಲದಿದ್ದರೂ ವಿವರ್ತವು ಸಿದ್ಧಿಸುತ್ತದೆ

ಜೀವ ಮತ್ತು ಜಡಗಳಿಗೆ ಸಮಾನವಾದ ಸ್ವರೂಪವಿಲ್ಲದಿರುವುದರಿಂದ ಪ್ರಪಂಚ ಚಿತ್ತಿನ ವಿವರ್ತವಾಗಿರಲು ಸಾಧ್ಯವಿಲ್ಲವೆಂದು ಹಿಂದೆಯೇ ನಾವು ಹೇಳಿದ್ದೇವೆ–ಎನ್ನುವು

ಸರಿಯಿಲ್ಲ. ಏಕೆಂದರೆ, ಎಲ್ಲ ಭ್ರಮೆಗಳೂ ಸಾರೂಪ್ಯವಶದಿಂದಲೇ ಉಂಟಾಗುತ್ತವೆ ಎಂಬ ನಿಯಮವೇನೂ ಇಲ್ಲ. ಸದೃಶವಲ್ಲದಿರುವ ತೀವ್ರಾಭಿಲಾಷೆಯಿಂದ ಕಾಮಿನಿಯ ಆಲಿಂಗನ ಮುಂತಾದ ಕನಸಿನ ಭ್ರಮೆಗಳು ಉಂಟಾಗುತ್ತವೆ. ಮತ್ತು ತಾತ್ಕಾಲಿಕವಾದ ಭ್ರಮೆಯುಂಟಾಗಲು ಸಾರೂಪ್ಯವು ಬೇಕಾಗಬಹುದು. ಆದರೆ ಅನಾದಿಯಾದ ಅವಿದ್ಯೆಯ ವಶದಿಂದ ಉಂಟಾಗಿರುವ ಪ್ರಪಂಚವಿಭ್ರಮದಲ್ಲಿ ಅದು ಬೇಕಾಗಿಲ್ಲ. ಆದುದರಿಂದಲೇ ವಾಚಸ್ಪತಿಮಿಶ್ರರು, "ಅಪರಿಣಾಮಿಯಾದ ಬ್ರಹ್ಮನ ವಿವರ್ತವೇ ಈ ಪ್ರಪಂಚವು. ಇದು ಅನಾದಿಯಾದ ವಾಸನೆಯಿಂದ ಉಂಟಾಗಿರುವುದರಿಂದ ಸಾರೂಪ್ಯವನ್ನಪೇಕ್ಷಿಸುವುದಿಲ್ಲ." ಎಂದು ಹೇಳಿದ್ದಾರೆ. ಇದೆಲ್ಲವೂ ವೇದಾಂತಶಾಸ್ತ್ರ ಪರಿಶ್ರಮವುಳ್ಳವರಿಗೆ ಸುಲಭವಾಗಿಯೂ ಸುಸಂಘಟಿತವಾಗಿಯೂ ಗೊತ್ತಾಗುತ್ತದೆ.

ವೇದಾನ್ತಶಾಸ್ತ್ರಾರ್ಥಸಙ್ಗ್ರಹಃ

ತಚ್ಚ ವೇದಾನ್ತಶಾಸ್ತ್ರಂ ಚತುರ್ಲಕ್ಷಣಮ್। ಭಗವತಾ ಬಾದರಾಯಣೇನ ಪ್ರಣೀತಸ್ಯ ವೇದಾನ್ತಶಾಸ್ತ್ರಸ್ಯ ಪ್ರತ್ಯಗ್ಬ್ರಹ್ಮೈಕ್ಯಂ ವಿಷಯ ಇತಿ ಶಙ್ಕರಾಚಾರ್ಯಾಃ ಪ್ರತ್ಯಪೀಪದನ್। ತತ್ರ ಪ್ರಥಮೇ ಸಮನ್ವಯಾಧ್ಯಾಯೇ ಸರ್ವೇಷಾಂ ವೇದಾನ್ತಾನಾಂ ಬ್ರಹ್ಮಣಿ ತಾತ್ಪರ್ಯೇಣ ಪರ್ಯವಸಾನಮ್। ದ್ವಿತೀಯೇಽವಿರೋಧಾಧ್ಯಾಯೇ ಸಾಙ್ಖ್ಯಾದಿತರ್ಕವಿರೋಧನಿರಾಕರಣಮ್। ತೃತೀಯೇ ಸಾಧನಾಧ್ಯಾಯೇ ಬ್ರಹ್ಮವಿದ್ಯಾಸಾಧನಮ್। ಚತುರ್ಥೇ ಫಲಾಧ್ಯಾಯೇ ವಿದ್ಯಾಫಲಮ್।

ತತ್ರ ಪ್ರತ್ಯಧ್ಯಾಯಂ ಪಾದಚತುಷ್ಟಯಮ್। ತತ್ರ ಪ್ರಥಮಸ್ಯಾಧ್ಯಾಯಸ್ಯ ಪ್ರಥಮೇ ಪಾದೇ ಸ್ಪಷ್ಟಬ್ರಹ್ಮಲಿಙ್ಗಂ ವಾಕ್ಯಜಾತಂ ಮೀಮಾಂಸ್ಯತೇ। ದ್ವಿತೀಯೇಽಸ್ಪಷ್ಟಬ್ರಹ್ಮಲಿಙ್ಗಮುಪಾಸ್ಯವಿಷಯಮ್। ತೃತೀಯೇ ತಾದೃಶಂ ಜ್ಞೇಯವಿಷಯಮ್। ಚತುರ್ಥೇಽವ್ಯಕ್ತಾಜಾಪದಾದಿ ಸನ್ದಿಗ್ಧಂ ಪದಜಾತಮಿತಿ।

ಅವಿರೋಧಸ್ಯ ದ್ವಿತೀಯಸ್ಯ ಪ್ರಥಮೇ ಸಾಙ್ಖ್ಯಯೋಗಕಣಾದಾದಿಸ್ಮೃತಿವಿರೋಧಪರಿಹಾರಃ। ದ್ವಿತೀಯೇ ಸಾಙ್ಖ್ಯಾದಿಮತಾನಾಂ ದುಷ್ಟತ್ವಮ್। ತೃತೀಯೇ ಪಞ್ಚಮಹಾಭೂತಶ್ರುತೀನಾಂ ಜೀವಶ್ರುತೀನಾಂಚ ಪರಸ್ಪರವಿರೋಧಪರಿಹಾರಃ। ಚತುರ್ಥೇ ಲಿಙ್ಗಶರೀರಶ್ರುತೀನಾಂ ವಿರೋಧಪರಿಹಾರಃ।

ತೃತೀಯಸ್ಯ ಪ್ರಥಮೇ ಜೀವಸ್ಯ ಪರಲೋಕಗಮನಾಗಮನವಿಚಾರಪುರಃಸರಂ ವೈರಾಗ್ಯಮ್। ದ್ವಿತೀಯೇ ತ್ವಮ್ಪದತತ್ಪದಾರ್ಥಪರಿಶೋಧನಮ್। ತೃತೀಯೇ ಸಗುಣವಿದ್ಯಾಸು ಗುಣೋಪಸಂಹಾರಃ। ಚತುರ್ಥೇ ನಿರ್ಗುಣಬ್ರಹ್ಮವಿದ್ಯಾಯಾ ಬಹಿರಙ್ಗಾನ್ತರಙ್ಗಾಶ್ರಮಯಜ್ಞಶಮಾದಿಸಾಧನಜಾತಮ್।

ಚತುರ್ಥಸ್ಯ ಪ್ರಥಮೇ ಬ್ರಹ್ಮಸಾಕ್ಷಾತ್ಕಾರೇಣ ಜೀವತಃ ಪಾಪಪುಣ್ಯಕ್ಲೇಶವೈಧುರ್ಯಲಕ್ಷಣಾ ಮುಕ್ತಿಃ। ದ್ವಿತೀಯೇ ಮರಣೋತ್ಕ್ರಮಣಪ್ರಕಾರಃ। ತೃತೀಯೇ ಸಗುಣ

ಬ್ರಹ್ಮೋಪಾಸಕಸ್ಯೋತ್ತರಮಾರ್ಗಃ। ಚತುರ್ಥೇ ನಿರ್ಗುಣಸಗುಣಬ್ರಹ್ಮವಿದೋಃ ವಿದೇಹ ಕೈವಲ್ಯಬ್ರಹ್ಮಲೋಕಾವಸ್ಥಾನಾನಿ। ತದಿತ್ಥಂ ಬ್ರಹ್ಮವಿಚಾರಶಾಸ್ತ್ರಾಧ್ಯಾಯಪಾದಾರ್ಥಸಙ್ಗ್ರಹಃ।

ವೇದಾಂತಶಾಸ್ತ್ರಾರ್ಥಸಂಗ್ರಹ

ಆ ವೇದಾಂತಶಾಸ್ತ್ರವು ನಾಲ್ಕು ಅಧ್ಯಾಯಗಳುಳ್ಳದ್ದಾಗಿದೆ. ಪೂಜ್ಯರಾದ ಬಾದರಾಯಣರು ರಚಿಸಿದ ವೇದಾಂತ ಶಾಸ್ತ್ರಕ್ಕೆ ಜೀವಬ್ರಹ್ಮೈಕ್ಯವೇ ಪ್ರತಿಪಾದ್ಯವಾದ ವಿಷಯವೆಂದು ಶಂಕರಾಚಾರ್ಯರು ಪ್ರತಿಪಾದಿಸಿದ್ದಾರೆ. ಅದರಲ್ಲಿ ಮೊದಲನೆಯದಾದ ಸಮನ್ವಯಾಧ್ಯಾಯದಲ್ಲಿ ಎಲ್ಲ ವೇದಾಂತ(ವಾಕ್ಯ)ಗಳಿಗೂ ಬ್ರಹ್ಮವೊಂದರಲ್ಲಿಯೇ ತಾತ್ಪರ್ಯವೆಂಬುದು ನಿರೂಪಿತವಾಗಿದೆ. ಎರಡನೆಯದಾದ ಅವಿರೋಧಾಧ್ಯಾಯದಲ್ಲಿ ಸಾಂಖ್ಯರೇ ಮೊದಲಾದವರ ತರ್ಕಗಳಿಂದುಂಟಾದ ವಿರೋಧವು ಪರಿಹರಿಸಲ್ಪಟ್ಟಿದೆ. ಮೂರನೆಯದಾದ ಸಾಧನಾಧ್ಯಾಯದಲ್ಲಿ ಬ್ರಹ್ಮವಿದ್ಯಾಸಾಧನವು ನಿರೂಪಿತವಾಗಿದೆ. ನಾಲ್ಕನೆಯದಾದ ಫಲಾಧ್ಯಾಯದಲ್ಲಿ ಬ್ರಹ್ಮವಿದ್ಯೆಯ ಫಲವು ಪ್ರತಿಪಾದಿತವಾಗಿದೆ.

ಪ್ರತಿ ಅಧ್ಯಾಯದಲ್ಲಿಯೂ ನಾಲ್ಕು ಪಾದಗಳಿವೆ. ಆ ಪೈಕಿ ಮೊದಲನೆಯ ಅಧ್ಯಾಯದ ಮೊದಲನೆಯ ಪಾದದಲ್ಲಿ ಸ್ಪಷ್ಟವಾಗಿ (ಅಸಂದಿಗ್ಧವಾಗಿ) ಬ್ರಹ್ಮಪ್ರತಿಪಾದಕವಾದ ಹೇತುಗಳುಳ್ಳ ವಾಕ್ಯಸಮೂಹವು ವಿಮರ್ಶಿಸಲ್ಪಡುತ್ತದೆ. ಎರಡನೆಯ ಪಾದದಲ್ಲಿ ಅಸ್ಪಷ್ಟವಾಗಿ ಬ್ರಹ್ಮಪ್ರತಿಪಾದಕವಾದ ಹೇತುಗಳುಳ್ಳ ಉಪಾಸ್ಯವಿಷಯಕವಾದ ವಾಕ್ಯಸಮೂಹವು ವಿಚಾರಮಾಡಲ್ಪಡುತ್ತದೆ. ಮೂರನೆಯ ಪಾದದಲ್ಲಿ ಅಸ್ಪಷ್ಟವಾಗಿ ಬ್ರಹ್ಮಪ್ರತಿಪಾದಕವಾದ ಹೇತುಗಳುಳ್ಳ ಜ್ಞೇಯವಿಷಯಕವಾದ ವಾಕ್ಯಗಳು ವಿಮರ್ಶಿಸಲ್ಪಟ್ಟಿವೆ. ನಾಲ್ಕನೆಯ ಪಾದದಲ್ಲಿ ಅವ್ಯಕ್ತ, ಅಜಾ–ಮೊದಲಾದ ಸಂದೇಹಾಸ್ಪದವಾದ ಪದಗಳ ವಿಮರ್ಶೆಯು ಇದೆ.

ಎರಡನೆಯದಾದ ಅವಿರೋಧಾಧ್ಯಾಯದ ಮೊದಲನೆಯ ಪಾದದಲ್ಲಿ ಸಾಂಖ್ಯ, ಯೋಗ, ಕಣಾದ ಮೊದಲಾದ ಸ್ಮೃತಿಗಳಿಂದ ಒದಗಬಹುದಾದ ವಿರೋಧಗಳಪರಿಹಾರವು ನಿರೂಪಿತವಾಗಿದೆ. ಎರಡನೆಯ ಪಾದದಲ್ಲಿ ಸಾಂಖ್ಯ ಮೊದಲಾದ ಮತಗಳ ದೋಷವು ಪ್ರತಿಪಾದಿತವಾಗಿದೆ. ಮೂರನೆಯ ಪಾದದಲ್ಲಿ ಪಂಚಮಹಾಭೂತಗಳನ್ನು ತಿಳಿಸುವ ಮತ್ತು ಜೀವಬೋಧಕವಾದ ಶ್ರುತಿವಾಕ್ಯಗಳ ಪರಸ್ಪರ ವಿರೋಧವು ಪರಿಹರಿಸಲ್ಪಟ್ಟಿದೆ. ನಾಲ್ಕನೆಯ ಪಾದದಲ್ಲಿ ಲಿಂಗ (ಸೂಕ್ಷ್ಮ) ಶರೀರ ಬೋಧಕವಾದ ಶ್ರುತಿವಾಕ್ಯಗಳ ವಿರೋಧವು ಪರಿಹರಿಸಲ್ಪಟ್ಟಿದೆ.

ಮೂರನೆಯ ಅಧ್ಯಾಯದ ಮೊದಲನೆಯ ಪಾದದಲ್ಲಿ ಜೀವನ ಪರಲೋಕ ಗಮನಾಗಮನ ವಿಚಾರಪೂರ್ವಕವಾಗಿ ವೈರಾಗ್ಯವು ಪ್ರತಿಪಾದಿತವಾಗಿದೆ. ಎರಡನೆಯ ಪಾದದಲ್ಲಿ "ತ್ವಮ್" ಮತ್ತು "ತತ್" ಎಂಬ ಪದಗಳ ಅರ್ಥಗಳ ಪರಿಶೋಧನೆಯು ಉಕ್ತವಾಗಿದೆ. ಮೂರನೆಯ ಪಾದದಲ್ಲಿ ಸಗುಣವಿದ್ಯೆಗಳಲ್ಲಿನ ಗುಣೋಪಸಂಹಾರವು ನಿರೂಪಿತವಾಗಿದೆ.

ನಾಲ್ಕನೆಯ ಪಾದದಲ್ಲಿ ನಿರ್ಗುಣಬ್ರಹ್ಮವಿದ್ಯೆಯ ಬಹಿರಂಗ ಮತ್ತು ಅಂತರಂಗ ರೂಪವಾದ ಆಶ್ರಮ, ಯಜ್ಞ, ಶಮ ಮೊದಲಾದ ಸಾಧನ ಸಮೂಹವು ಪ್ರತಿಪಾದಿತವಾಗಿದೆ.

ನಾಲ್ಕನೆಯ ಅಧ್ಯಾಯದ ಮೊದಲನೆಯ ಪಾದದಲ್ಲಿ ಬ್ರಹ್ಮಸಾಕ್ಷಾತ್ಕಾರದಿಂದ ಪಾಪ, ಪುಣ್ಯ, ಕ್ಲೇಶ-ರಾಹಿತ್ಯ ರೂಪವಾದ ಜೀವನ್ಮುಕ್ತಿಯು ಪ್ರತಿಪಾದಿತವಾಗಿದೆ. ಎರಡನೆಯ ಪಾದದಲ್ಲಿ ಮರಣೋತ್ಕ್ರಮಣದ ರೀತಿಯು ನಿರೂಪಿತವಾಗಿದೆ. ಮೂರನೆಯ ಪಾದದಲ್ಲಿ ಸಗುಣಬ್ರಹ್ಮೋಪಾಸಕನಿಗೆ ಉತ್ತರಮಾರ್ಗವು ಹೇಳಲ್ಪಟ್ಟಿದೆ. ನಾಲ್ಕನೆಯ ಪಾದದಲ್ಲಿ ನಿರ್ಗುಣ ಮತ್ತು ಸಗುಣ ಬ್ರಹ್ಮನನ್ನು ತಿಳಿಯುವವನಿಗೆ ವಿದೇಹಕೈವಲ್ಯ, ಬ್ರಹ್ಮಲೋಕಾವಸ್ಥಾನಗಳು ಹೇಳಲ್ಪಟ್ಟಿವೆ.

ಆದ್ದರಿಂದ ಬ್ರಹ್ಮವಿಚಾರಶಾಸ್ತ್ರದ ಅಧ್ಯಾಯಗಳಲ್ಲಿ ಮತ್ತು ಪಾದಗಳಲ್ಲಿ ಪ್ರತಿಪಾದಿತವಾಗಿರುವ ವಿಷಯಗಳ ಸಂಗ್ರಹವು ಈರೀತಿಯಾಗಿದೆ.

ಜಿಜ್ಞಾಸಾಧಿಕರಣಮ್

ತತ್ರ ಪ್ರಥಮಮಧಿಕರಣಮ್ "ಅಥಾತೋ ಬ್ರಹ್ಮಜಿಜ್ಞಾಸಾ" (ಬ್ರ.ಸೂ. 1-1-1) ಇತಿ ಬ್ರಹ್ಮಮೀಮಾಂಸಾರಮ್ಭೋಪಪಾದನಪರಮ್। ಅಧಿಕರಣಂ ಚ ಪಞ್ಚಾವಯವಂ ಪ್ರಸಿದ್ಧಮ್। ತೇ ಚ ವಿಷಯಾದಯಃ ಪಞ್ಚಾವಯವಾ ನಿರೂಪ್ಯನ್ತೇ। "ಆತ್ಮಾ ವಾಽರೇ ದ್ರಷ್ಟವ್ಯಃ" (ಬೃ. 2-4-5) ಇತ್ಯೇತದ್ವಾಕ್ಯಂ ವಿಷಯಃ। ಬ್ರಹ್ಮ ಜಿಜ್ಞಾಸಿತವ್ಯಂ ನ ವೇತಿ ಸನ್ದೇಹಃ। ಜಿಜ್ಞಾಸ್ಯತ್ವವ್ಯಾಪಕಯೋಃ ಸನ್ದೇಹಪ್ರಯೋಜನಯೋಃ ಸಮ್ಭವಾಸಮ್ಭವಾಭ್ಯಾಮ್।

ಜಿಜ್ಞಾಸಾಧಿಕರಣ

ಅದರಲ್ಲಿ "ಅಥಾತೋ ಬ್ರಹ್ಮಜಿಜ್ಞಾಸಾ" (ಬ್ರ.ಸೂ. 1-1-1) ಎಂಬ ಮೊದಲನೆಯ ಅಧಿಕರಣವು ಬ್ರಹ್ಮವಿಚಾರಾರಂಭವನ್ನು ಸಮರ್ಥಿಸುತ್ತದೆ. ಅಧಿಕರಣವೆಂಬುದು ಐದು ಅವಯವಗಳುಳ್ಳದ್ದು ಎಂದು ಪ್ರಸಿದ್ಧವಾಗಿದೆ. ವಿಷಯ, ಸಂಶಯ, ಪೂರ್ವಪಕ್ಷ, ಸಿದ್ಧಾಂತ ಮತ್ತು ಸಂಗತಿ ಎಂಬ ಆ ಐದು ಅವಯವಗಳು ನಿರೂಪಿಸಲ್ಪಡುತ್ತವೆ. "ಆತ್ಮಾ ವಾರೇ ದ್ರಷ್ಟವ್ಯಃ" (ಬೃ.2-4-5) (ಎಲೈ! ಆತ್ಮನು ಸಾಕ್ಷಾತ್ಕರಿಸಲ್ಪಡತಕ್ಕವನು) ಎಂಬ ಈ ವಾಕ್ಯವೇ ವಿಷಯವು. ಬ್ರಹ್ಮವು ಜಿಜ್ಞಾಸೆಮಾಡಲ್ಪಡಬೇಕಾದುದೇ ಅಥವಾ ಅಲ್ಲವೆ? ಎಂಬುದೇ ಸಂಶಯ. ಜಿಜ್ಞಾಸ್ಯತ್ವಕ್ಕೆ ವ್ಯಾಪಕವಾದ (ನಿಯಾಮಕವಾದ) ಸಂದೇಹ ಮತ್ತು ಪ್ರಯೋಜನಗಳ ಸಂಭವ ಮತ್ತು ಅಸಂಭವಗಳಿಂದ ಈ ರೀತಿಯಾದ ಸಂದೇಹವು ಉಂಟಾಗುತ್ತದೆ.

ಅಹಮನುಭವವೇದ್ಯ ಆತ್ಮಾ ನ ಜಿಜ್ಞಾಸ್ಯಃ ಇತಿ ಪೂರ್ವಪಕ್ಷಃ

ತತ್ರ ಕಸ್ಯೇದಂ ಜಿಜ್ಞಾಸ್ಯತ್ವಮವಗಮ್ಯತೇ? ಅಹಮನುಭವಗಮ್ಯಸ್ಯ ಶ್ರುತಿಗಮ್ಯಸ್ಯ ವಾ?

ನಾದ್ಯಃ। ಸರ್ವಜನೀನೇನಾಹಮನುಭವೇನೇದಮಾಸ್ಪದದೇಹಾದಿಭ್ಯೋ ವಿವೇಕೇ
ನಾತ್ಮನಃ ಸ್ಪಷ್ಟಂ ಪ್ರತಿಭಾಸಮಾನತ್ವಾತ್। ನನು ಸ್ಥೂಲೋಽಹಂ ಕೃಶೋಽಹಮಿತ್ಯಾ
ದೇಹಧರ್ಮಸಮಾನಾಧಿಕರಣ್ಯಾನುಭವಾದಧ್ಯಸ್ತಾತ್ಮಭಾವದೇಹಾಲಮ್ಬನೋಽಯಮಹಜ್ಞಾ
ಇತಿ ಚೇನ್ನ। ಬಾಲ್ಯಾದ್ಯವಸ್ಥಾಸು ಭಿನ್ನಪರಿಮಾಣತಯಾ ಬದರಾಮಲಕಾದಿವತ್ ಪರಸ್ಪ
ಭೇದೇನ ಶರೀರಸ್ಯ ಪ್ರತ್ಯಭಿಜ್ಞಾನಾನುಪಪತ್ತೇಃ।

ಅಥೋಚ್ಯೇತ, ಯಥಾ ಪೀಲುಪಾಕಪಕ್ಷೇ ಪಿಠರಪಾಕಪಕ್ಷೇ ವಾ ಕಾಲಭೇದೇನೈಕಸ್ಮಿ
ವಸ್ತುನಿ ಪಾಕಜಭೇದೋ ಯುಜ್ಯತೇ ತಥೈಕಸ್ಮಿನ್ ಶರೀರಾಭಿಧೇ ವಸ್ತುನಿ ಕಾಲಭೇದೇ
ಪರಿಮಾಣಭೇದಃ। ಅತ ಏವ ಲೌಕಿಕಾಃ ಶರೀರಮಾತ್ಮನಃ ಸಕಾಶಾದಭಿನ್ನಂ ಪ್ರತಿಪದ
ಮಾನಾಃ ಪ್ರತ್ಯಭಿಜಾನತೇ ಚೇತಿ।

ನ ತದ್ಭದ್ರಮ್। ಮಣಿಮನ್ತ್ರೌಷಧಾದ್ಯುಪಾಯಭೇದೇನ ಭೂಮಿಕಾಧಾನವನ್ನಾನಾ
ವಿಧಾನ್ ದೇಹಾನ್ ಪ್ರತಿಪದ್ಯಮಾನಸ್ಯಾಹಮಾಲಮ್ಬನಸ್ಯ ಭಿನ್ನಸ್ಯಾತ್ಮನಃ ಶರೀರಾದ್ಭೇದೇ
ಭಾಸಮಾನತ್ವಾತ್। ಅತ ಏವ ಚಕ್ಷುರಾದೀನಾಮಪ್ಯಹಮಾಲಮ್ಬನತ್ವಮಶಕ್ಯಶಙ್ಕಮ್
"ನಾನ್ಯದೃಷ್ಟಂ ಸ್ಮರತ್ಯನ್ಯಃ" (ನ್ಯಾ.ಕು.1-15) ಇತಿನ್ಯಾಯೇನ ಚಕ್ಷುರಾದೌ ನಷ್ಟೇಽಪಿ ರೂಪಾ
ಪ್ರತಿಸನ್ಧಾನಾನುಪಪತ್ತೇಃ। ನಾಪ್ಯನ್ತಃಕರಣಸ್ಯಾಹಮಾಲಮ್ಬನತ್ವಮಾಸ್ಥೇಯಮ್। "ಅಯ
ಮೇವ ಭೇದೋ ಭೇದಹೇತುರ್ವಾ ಯದ್ವಿರುದ್ಧಧರ್ಮಾಧ್ಯಾಸಃ ಕಾರಣಭೇದಶ್ಚ" ಇತಿನ್ಯಾಯೇ
ಕರ್ತೃಕರಣಭೂತಯೋರಾತ್ಮಾನ್ತಃಕರಣಯೋಸ್ತಕ್ಷವಾಸಿವತ್ ಸಮ್ಭೇದಾಸಮ್ಭವಾತ್। ಯದ
ಭೇದ ಏವ ನಾದ್ರಿಯತೇ ತರ್ಹಿ ಸ್ಥೂಲೋಽಹಂ ಕೃಶೋಽಹಂ ಕೃಷ್ಣೋಽಹಮಿತ್ಯಾ
ಸಜಾಖ್ಯನಮುತ್ಸನ್ನಸಜ್ಜಕಥಂ ಸ್ಯಾತ್। ನಸ್ಯಾತ್। ಏವಂ ಲೋಕೇ ಶಾಸ್ತ್ರೇ ಚೋಭಯಥಾ
ಶಬ್ದಪ್ರಯೋಗದರ್ಶನೇನ ಮುಖ್ಯಾರ್ಥತ್ವಾನುಪಪತ್ತೌ ಮಞ್ಚಾಃ ಕ್ರೋಶನ್ತೀತ್ಯಾದಿವದೌ
ಚಾರಿಕತ್ವೇನೋಪಪತ್ತೇಃ।

ಅಹಮನುಭವವೇದ್ಯನಾದ ಆತ್ಮನು ಜಿಜ್ಞಾಸ್ಯನಲ್ಲವೆಂದು ಪೂರ್ವಪಕ್ಷ

(ಈ ವಿಷಯದಲ್ಲಿ ಸಂದೇಹ ಮತ್ತು ಪ್ರಯೋಜನಗಳು ಇಲ್ಲವೆಂದು ಭಾವಿಸುವವ
ಶಂಕಿಸುತ್ತಾನೆ):—

ಇಲ್ಲಿ ಜಿಜ್ಞಾಸೆ ಮಾಡಲ್ಪಡಬೇಕಾದವನು ಯಾರು? "ಅಹಮ್"(ನಾನು) ಎನ್ನು
ಅನುಭವದಲ್ಲಿ ತೋರುವ ಆತ್ಮನೆ? ಅಥವಾ, ಶ್ರುತಿಪ್ರತಿಪಾದ್ಯನಾದ ಆತ್ಮನೆ?

ಅಹಮನುಭವವೇದ್ಯನಾದ ಆತ್ಮನು ಜಿಜ್ಞಾಸೆಮಾಡಲ್ಪಡಬೇಕಾಗಿಲ್ಲ. ಏಕೆಂದರೆ
ಲೋಕಪ್ರಸಿದ್ಧವಾದ "ಅಹಮ್"(ನಾನು) ಎಂಬ ಅನುಭವದಿಂದ "ಇದಮ್"(ಇದು
ಎಂಬುದಕ್ಕೆ ವಿಷಯವಾದ ದೇಹಾದಿಗಳಿಗಿಂತ ಬೇರೆಯಾಗಿ ಆತ್ಮನು(ಜೀವ) ಸ್ಪಷ್ಟವಾ
ತೋರುತ್ತಿದ್ದಾನೆ. "ಸ್ಥೂಲನಾದ ನಾನು", "ಕೃಶನಾದ ನಾನು" ಎಂದು ಮುಂತಾ
ದೇಹಧರ್ಮಗಳಿಗೆ ಸಮಾನಾಶ್ರಯವಾದ ಅನುಭವವೂ ಇರುವುದರಿಂದ ಆರೋಪಿತವಾ
ಆತ್ಮಭಾವವುಳ್ಳ ದೇಹವೇ "ನಾನು" ಎಂಬ ಅನುಭವಕ್ಕೆ ವಿಷಯವು—ಎಂದು ಹೇ

ಬಹುದು. ಆದರೆ, ಬಾಲ್ಯ ಮೊದಲಾದ ಅವಸ್ಥೆಗಳಲ್ಲಿ ಬೇರೆ ಬೇರೆ ಪರಿಮಾಣವನ್ನು ಹೊಂದಿರುವ ಕಾರಣ, ಎಲಚಿಹಣ್ಣು, ನೆಲ್ಲಿಕಾಯಿಗಳಂತೆ ಪರಸ್ಪರ ಭಿನ್ನವಾಗಿರುವ ಶರೀರವನ್ನೇ "ನಾನು" ಎಂದು ಪ್ರತ್ಯಭಿಜ್ಞೆ[8] ಮಾಡುವುದು (ಅದೇ ಇದು ಎಂದು ಗುರುತಿಸುವುದು) ಸರಿಯಲ್ಲ.

ಅಥವಾ ಹೀಗೆ ಹೇಳಬಹುದು:—ವೈಶೇಷಿಕರ "ಪೀಲುಪಾಕ"[9] ಪಕ್ಷದಲ್ಲಿ ಅಥವಾ ನೈಯಾಯಿಕರ "ಪಿಠರಪಾಕ"[10] ಪಕ್ಷದಲ್ಲಿ ಕಾಲಭೇದದಿಂದ ಒಂದೇವಸ್ತುವಿನಲ್ಲಿ ಪಾಕಜನ್ಯವಾದ ಭೇದವು ಉಪಪನ್ನವಾಗುವಂತೆ ಶರೀರವೆಂಬ ಒಂದೇ ವಸ್ತುವಿನಲ್ಲಿ ಕಾಲಭೇದದಿಂದ ಪರಿಮಾಣಭೇದವು ಯುಕ್ತವಾಗುತ್ತದೆ ಆದುದರಿಂದಲೇ ಲೌಕಿಕರಾದ ಚಾರ್ವಾಕರು ಶರೀರವು ಆತ್ಮನಿಗಿಂತ ಭಿನ್ನವಲ್ಲವೆಂದು ಭಾವಿಸುತ್ತಾರೆ. ಮತ್ತು ಅದೇರೀತಿಯಾಗಿಯೇ ಪ್ರತ್ಯಭಿಜ್ಞೆ ಪಡುತ್ತಾರೆ.

ಈ ವಾದವೂ ಸರಿಯಿಲ್ಲ. ಏಕೆಂದರೆ ಮಣಿ, ಮಂತ್ರ, ಔಷಧ—ಮೊದಲಾದ ಉಪಾಯಭೇದದಿಂದ ಒಬ್ಬ ಇಂದ್ರಜಾಲಿಕನು ಅನೇಕವೇಷಗಳನ್ನು ಹೊಂದುವಂತೆ, ನಾನಾ ವಿಧವಾದ ದೇಹಗಳನ್ನು ಪಡೆಯುವ ಬೇರೆಯಾದ ಆತ್ಮನೇ ಶರೀರಕ್ಕಿಂತಲೂ ಬೇರೆಯಾಗಿ ತೋರುತ್ತಾನೆ. ಆದುದರಿಂದಲೇ ಕಣ್ಣು ಮೊದಲಾದ ಇಂದ್ರಿಯಗಳೇ "ನಾನು" ಎನ್ನುವುದಕ್ಕೆ ಆಲಂಬನವೆಂದೂ ಶಂಕಿಸಲಾಗದು. ಏಕೆಂದರೆ "ಒಬ್ಬನು ಕಂಡಿದ್ದನ್ನು ಇನ್ನೊಬ್ಬನು ಸ್ಮರಿಸಲಾರನು" (ನ್ಯಾ.ಕು.1-15) ಎಂಬ ನ್ಯಾಯಕ್ಕನುಸಾರವಾಗಿ ಕಣ್ಣು ಮೊದಲಾದುದು ನಾಶಹೊಂದಿದರೂ ಉಂಟಾಗುವ ರೂಪಾದಿಗಳ ಸ್ಮರಣೆಯು ಅಯುಕ್ತವಾದೀತು. ಅಂತಃಕರಣವೂ(ಮನಸ್ಸು) ಕೂಡ "ನಾನು" ಎನ್ನುವುದಕ್ಕೆ ಆಲಂಬನವಾಗುವುದಿಲ್ಲ. ಏಕೆಂದರೆ, "ವಿರುದ್ಧಧರ್ಮಗಳನ್ನು ಹೊಂದಿರುವಿಕೆಯೇಂಬುದೇ ಭೇದವು. ಕಾರಣಭೇದವೆಂಬುದೇ ಭೇದಕ್ಕೆ ಕಾರಣವು" ಎಂಬ ನ್ಯಾಯಕ್ಕನುಸಾರವಾಗಿ ಕರ್ತೃವಾದ ಆತ್ಮನಿಗೂ ಕರಣ (ಸಾಧನ)ವಾದ ಅಂತಃಕರಣಕ್ಕೂ ತಾದಾತ್ಮ್ಯವು ಸಂಭವಿಸುವುದೇ ಇಲ್ಲ. ಹಾಗಾದರೆ, ಅಭೇದವನ್ನು ಒಪ್ಪದಿದ್ದರೆ, "ಸ್ಥೂಲನಾದ ನಾನು" "ಕೃಶನಾದ ನಾನು" "ಕಪ್ಪಾದ ನಾನು" ಎಂದು ಮುಂತಾದ ಅನುಭವವು ಲುಪ್ತಪ್ರಾಯವಾಗಬೇಕಾದೀತು ಎಂದು ಕೇಳಬಹುದು; ಆದರೆ ಅದಕ್ಕೆ ಅವಕಾಶವಿಲ್ಲ. ಏಕೆಂದರೆ ಲೋಕ, ಶಾಸ್ತ್ರ-ಎರಡರಲ್ಲಿಯೂ ಈ ರೀತಿಯಾದ ಮಾತನ್ನು ಬಳಸುವುದು ಕಂಡುಬರುವುದರಿಂದ ಮುಖ್ಯಾರ್ಥವು ಹೊಂದದಿದ್ದರೂ, "ಮಂಚಗಳು ಗೋಳಾಡುತ್ತವೆ" ಎಂದು ಮುಂತಾದ ವ್ಯವಹಾರದಂತೆ ಔಪಚಾರಿಕವಾಗಿ[11] (ಗೌಣವೃತ್ತಿ) ಆಗಬಹುದು.

ಶ್ರುತಿಪ್ರತಿಪಾದ್ಯ ಆತ್ಮಾ ನಜಿಜ್ಞಾಸ್ಯಃ ಇತಿ ಪೂರ್ವಪಕ್ಷಃ

ನದ್ವಿತೀಯಃ। ಅಹಮನುಭವಗಮ್ಯಸ್ಯೈವ ಶ್ರುತಿಗಮ್ಯತ್ವಾತ್। "ಸತ್ಯಂ ಜ್ಞಾನಮನನ್ತಂಬ್ರಹ್ಮ" (ತೈ.2-1-1) ಇತ್ಯಾದಿಶ್ರುತಿಭ್ಯೋಹಿ ಬ್ರಹ್ಮಾವಗಮ್ಯತೇ। ಬ್ರಹ್ಮಭಾವಶ್ಚ "ಅಯಮಾತ್ಮಾ ಬ್ರಹ್ಮ" (ಬೃ.2-5-19) "ತತ್ತ್ವಮಸಿ" (ಛಾ.6-8-7) ಇತ್ಯಾದಿಶ್ರುತಿಸ್ಸಹ

ಪ್ರತ್ಯಯಗಮ್ಯಸ್ಯೈವ ಬೋಧ್ಯತೇ। ತಥಾ ಚೇದಮನುಮಾನಂ ಸಮುಸೂಚಿಃ— ವಿಮತಮಜಿಜ್ಞಾಸ್ಯಮಸಂದಿಗ್ಧತ್ವಾತ್ ಕರತಲಾಮಲಕವತ್।

ಶ್ರುತಿಪ್ರತಿಪಾದ್ಯನಾದ ಆತ್ಮನೂ ಜಿಜ್ಞಾಸ್ಯನಲ್ಲವೆಂದು ಪೂರ್ವಪಕ್ಷ

ಶ್ರುತಿಪ್ರತಿಪಾದ್ಯನಾದ ಆತ್ಮನು ಜಿಜ್ಞಾಸೆಮಾಡಲ್ಪಡಬೇಕಾದವನು ಎನ್ನುವ ಎರಡನೆಯ ಪಕ್ಷವೂ ಸರಿಹೋಗುವುದಿಲ್ಲ. ಅಹಮನುಭವಸಂವೇದ್ಯನಾದ ಆತ್ಮನೇ ಶ್ರುತಿಪ್ರತಿಪಾದ್ಯನಾದವನು. "ಸತ್ಯವೂ, ಜ್ಞಾನವೂ, ಅನಂತವೂ ಆದುದು ಬ್ರಹ್ಮ" (ತೈ.2-1-1) ಎಂದು ಮುಂತಾದ ಶ್ರುತಿಗಳಿಂದ ಬ್ರಹ್ಮವು ತಿಳಿಯಲ್ಪಡುತ್ತದೆ. ಬ್ರಹ್ಮಭಾವವಾದರೋ "ಈ ಅತ್ಮನೇ(ನಾನೇ) ಬ್ರಹ್ಮವು" (ಬೃ.2-5-19) "ಅದು ನೀನಾಗಿದ್ದೀಯೆ" (ಛಾ.6-8-7) ಇತ್ಯಾದಿ ಶ್ರುತಿಗಳಲ್ಲಿ "ಅಹಮ್" (ನಾನು) ಎನ್ನುವ ಪ್ರತೀತಿಗೆ ಗೋಚರವಾಗುವವನಿಗೇ ಹೇಳಲ್ಪಡುತ್ತದೆ. ಆದ್ದರಿಂದ ಅನುಮಾನವಾಕ್ಯವು ಈ ರೀತಿ ಇದೆ:

ವಿವಾದವಿಷಯವಾದುದು (ಆತ್ಮವು) ಜಿಜ್ಞಾಸೆಮಾಡಲ್ಪಡತಕ್ಕದ್ದಲ್ಲ; ಅಂಗೈನೆಲ್ಲಿಕಾಯಿಯಂತೆ ಅಸಂದಿಗ್ಧವಾಗಿರುವುದರಿಂದ.

ಬ್ರಹ್ಮಜಿಜ್ಞಾಸಾಯಾಃ ಪ್ರಯೋಜನಂ ನಾಸ್ತೀತಿ ಆಕ್ಷೇಪಃ

ತಥಾ ಫಲಂ ನ ಫಲಭಾವಮೀಕ್ಷತೇ। ಪುರುಷೈರರ್ಥ್ಯತ ಇತಿ ವ್ಯುತ್ಪತ್ತ್ಯಾ ನಿಃಶೇಷದುಃಖೋಪಶಮಲಕ್ಷಿತಂ ಪರಮಾನಂದೈಕರಸಂ ಚ ಪುರುಷಾರ್ಥಶಬ್ದಸ್ಯಾರ್ಥಃ ಸಕಲಪುರುಷಧೌರೇಯೈಃ ಪ್ರೇಪ್ಸ್ಯತೇ, ನೈತತ್ಸಾಂಸಾರಿಕಂ ಸುಖಜಾತಮ್। ತಸ್ಯೈಹಿಕಸ್ಯ ಪಾರಲೌಕಿಕಸ್ಯ ಚ ಸಾತಿಶಯತಯಾ ಚ ಸದೃಕ್ಷತಯಾ ಚ ಪ್ರೇಕ್ಷಾವದ್ಭಿರರ್ಥ್ಯಮಾನತ್ವಾನುಪಪತ್ತೇಃ। ಯತ್ತತ್ಪರಿಪಂಥಿ ದುಃಖಜಾತಂ ತಜ್ಜಿಹಾಸ್ಯತೇ। ತಚ್ಚಾವಿದ್ಯಾಪರಪರ್ಯಾಯಸಂಸಾರ ಏವ। ಕರ್ತೃತ್ವಾದಿಸಕಲಾನರ್ಥಕರತ್ವಾದವಿದ್ಯಾಯಾಃ। ಸಮಿತ್ಯೇಕೀಕರಣೇ ವರ್ತತೇ। ಸಪ್ಫೋದಾದೌ ತಥಾ ಚೋಪಲಬ್ಧಾತ್। ತಥಾ ಚಾತ್ಮಾನಂ ದೇಹೇನೈಕೀಕೃತ್ಯ ಸ್ವರ್ಗನರಕಮಾರ್ಗಯೋಃ ಸರತಿ ಯೇನ ಪುರುಷಃ ಸ ಸಂಸಾರೋಽವಿದ್ಯಾಶಬ್ದಾರ್ಥಃ। ತನ್ನಿವೃತ್ತಿಃ ಫಲಂ ಫಲವತಾಮಭಿಮತಮ್। ತಥಾ ಕಥಿತಮ್—"ಅವಿದ್ಯಾಸ್ತಮಯೋ ಮೋಕ್ಷಃ ಸಾ ಚ ಬಂಧ ಉದಾಹೃತಃ" ಇತಿ।

ತಚ್ಚ ಕಾಶಕುಶಾವಲಂಬನಕಲ್ಪಮ್। ಆತ್ಮಯಾಥಾತ್ಮ್ಯಾನುಭವೇನ ಸಹವರ್ತಮಾನಸ್ಯ ಸಂಸಾರಸ್ಯ ರೂಪರಸವದ್ವಿರೋಧಾಭಾವೇನ ನಿವರ್ತ್ಯನಿವರ್ತಕಭಾವಾಭಾವಾತ್। ನನು ಸಹಾನುವರ್ತಮಾನೋ ಬೋಧಃ ಸಂಸಾರಂ ಮಾ ಬಾಧಿಷ್ಟ। ಸಹಾವರ್ತಮಾನಸ್ತು ಬೋಧಃ ಪ್ರಕಾಶಸ್ತಮೋವದ್ಬಾಧಿಷ್ಯತ ಇತಿ ಚೇತ್ತದೇತದ್ವಿರಿಕ್ತಂ ವಚಃ। ಅಹಮನುಭವಾದನ್ಯಸ್ಯಾತ್ಮಜ್ಞಾನಸ್ಯ ಮೂಷಿಕವಿಷಾಣಾಯಮಾನತ್ವಾತ್। ನನ್ವನ್ಯೋಽಯಮನುಭವಃ ಪಾಮರಾಣಾಂ ಮಾಸ್ಮಭವನ್ನಾಮ। ವೇದಾಂತವಚನನಿಚಯಪರ್ಯಾಲೋಚನಕ್ಷಮಾಣಾಂ ಪರೀಕ್ಷಕಾಣಾಂ ಸಂಭವತ್ಯೇವೇತ್ಯಪಿ ನ ವಕ್ತವ್ಯಮ್। ಅಬಾಧಿತಾನುಭವ

ವಿರೋಧೇನ ವೇದಾನ್ತವಾಕ್ಯಾನಾಂ ಗ್ರಾವಪ್ಲವನಾದಿವಾಕ್ಯಕಲ್ಪತ್ವಾತ್। ನ ಹ್ಯಾಗಮಾಃ ಪರಃಶತಂ ಘಟಂ ಪಟಯಿತುಮುತ್ಸಹನ್ತೇ।

ನಚಾಧ್ಯಯನವಿಧಿವ್ಯಾಕೋಪಃ। ಗುರುಮತಾನುಸಾರೇಣ ಹುಂ ಫಡಾದಿ ವಾಕ್ಯವಜ್ಜಪಮಾತ್ರೋಪಯೋಗಿತ್ವೇನಾಚಾರ್ಯಮತಾನುಸಾರೇಣ ವಾ "ಯಜಮಾನಃ ಪ್ರಸ್ತರಃ" ಇತ್ಯಾದಿ ವಾಕ್ಯವತ್ ಸ್ತಾವಕತ್ವೇನ ವೇದಾನ್ತಸಿದ್ಧಾನ್ತಸ್ಯಾಧ್ಯೇತವ್ಯತ್ವಸಮ್ಭವಾತ್। ತಥಾಚ ಪ್ರಯೋಗಃ:— ವಿವಾದಾಸ್ಪದಂ ಬ್ರಹ್ಮ ವಿಚಾರ್ಯಪದಂ ನ ಭವತ್ಯಫಲತ್ವಾತ್ಕಾಕದನ್ತವದಿತಿ। ತದಾಹುರಾಚಾರ್ಯಾಃ:—

"ಅಹನ್ಧಿಯಾತ್ಮನಃ ಸಿದ್ಧೇಸ್ತಸ್ಯೈವ ಬ್ರಹ್ಮಭಾವತಃ।
ತಜ್ಜ್ಞಾನಾಸ್ಮುಕ್ತ್ಯಭಾವಾಚ್ಚ ಜಿಜ್ಞಾಸಾನಾವಕಲ್ಪತೇ"॥ ಇತಿ।

ನಚ ಭೇದೇನಾಧ್ಯಸ್ತದೇಹಾದಿನಿವೃತ್ತಿಃ ಫಲಮಿತ್ಯಫಲತ್ವಹೇತುರಸಿದ್ಧ ಇತಿ ವೇದಿತವ್ಯಮ್। ಭೇದಗ್ರಹೋಹಿ ವ್ಯಾಪಕನಿವೃತ್ತ್ಯಾ ವ್ಯಾಪ್ಯನಿವೃತ್ತಿರಿತಿ ನ್ಯಾಯೇನ ಭೇದಾಗ್ರಹಪರಿಪನ್ಥಿನಂ ಭೇದಸಂಸ್ಕಾರಮುಪೇಕ್ಷತೇ। ಅನಾಕಲಿತಕಲಧೌತಸ್ಯ ಶುಕ್ತಿಶಕಲೇ ತತ್ಸಮಾರೋಪಾನುಪಲಮ್ಭಾತ್। ಸಂಸ್ಕಾರಶ್ಚ ಪ್ರಮಿತಿಪೂರ್ವಕಾಙ್ಕ್ಷತಿ। ಅನನುಭೂತೇ ಸಂಸ್ಕಾರಾನುದಯಾತ್। ನಚಭ್ರಾನ್ತಿರೂಪೋಽನುಭವಸ್ತತ್ಕಾರಣಮಿತಿ ಭಣಿತವ್ಯಮ್। ಭ್ರಾನ್ತೇರಭ್ರಾನ್ತಿಪೂರ್ವಕತ್ವೇನ ಕ್ವಚಿತ್ಪ್ರಮಿತೇರವಶ್ಯಾಭ್ಯುಪಗಮಯಿತವ್ಯತ್ವಾತ್। ಪ್ರಯೋಗಶ್ಚ:—ವಿಮತಾವಾತ್ಮಾನಾತ್ಮಾನೌ ಭೇದೇನ ಪ್ರಮಿತಾವಭೇದಾಯೋಗ್ಯತ್ವಾತ್, ತಮಃಪ್ರಕಾಶವತ್। ನ ಚಾತ್ಮಾನಾತ್ಮನೋರಭೇದಾಯೋಗ್ಯತ್ವಲಕ್ಷಣೋ ಹೇತುರಸಿದ್ಧ ಇತಿ ಶಙ್ಕನೀಯಮ್। ವಿಕಲ್ಪಾಸಹತ್ವಾತ್। ತಥಾಹಿ:—ಅನಾತ್ಮಾತ್ಮಪರಿಶೇಷಃ ಸ್ಯಾದಾತ್ಮಾನಾತ್ಮಪರಿಶೇಷೋವಾ?

ಆದ್ಯೇ ಮುಕ್ತಿದಶಾಯಾಮಿವ ಪರಿದೃಶ್ಯಮಾನಂ ಜಗದಸ್ತಮಿಯಾತ್।

ದ್ವಿತೀಯೇ ಜಗದಾನ್ಧ್ಯಂ ಪ್ರಸಜ್ಯೇತ। ತಮಃಪ್ರಕಾಶವದ್ವಿರುದ್ಧಸ್ವಭಾವತ್ವಾಚ್ಚ ದೃಗ್ದೃಶ್ಯಯೋರಾತ್ಮಾನಾತ್ಮನೋರಭೇದಾಯೋಗ್ಯತ್ವಮವಧೇಯಮ್। ತತಶ್ಚಾರ್ಥಾಧ್ಯಾಸಾನುಪಪತ್ತ್ಯಾ ತತ್ಪೂರ್ವಕಸ್ಯ ಜ್ಞಾನಾಧ್ಯಾಸಸ್ಯಾಸಮ್ಭವೇನ ಬ್ರಹ್ಮಣೋ ವಿಚಾರ್ಯತ್ವಾಸಮ್ಭವಾದ್ವಿಚಾರಾತ್ಮಿಕಾ ಚತುರ್ಲಕ್ಷಣಶಾರೀರಕಮೀಮಾಂಸಾ ನಾರಮ್ಭಣೀಯೇತಿ ಪೂರ್ವಪಕ್ಷೇ ಪ್ರಾಪ್ತೇ ಸಿದ್ಧಾನ್ತೋಽಭಿಧೀಯತೇ:—

ಬ್ರಹ್ಮಜಿಜ್ಞಾಸೆಯು ಪ್ರಯೋಜನ ರಹಿತವಾದುದೆಂದು ಆಕ್ಷೇಪ

ಹಾಗೆಯೇ ಪ್ರಯೋಜನವೂಕೂಡ ಪ್ರಯೋಜನವಾಗಿ ಆಗುವುದಿಲ್ಲ; ಪುರುಷರಿಂದ ಬೇಡಲ್ಪಡುತ್ತದೆ ಎಂಬ ವ್ಯುತ್ಪತ್ತಿಯಿಂದ ನಿಃಶೇಷದುಃಖನಾಶರೂಪವಾದ ಮತ್ತು ಪರಮಾನಂದೈಕರಸ ರೂಪವಾದುದೇ ಪುರುಷಾರ್ಥಶಬ್ದದ ಅರ್ಥ. ಇದನ್ನೇ ಎಲ್ಲ ಪುರುಷಶ್ರೇಷ್ಠರೂ ಅಪೇಕ್ಷಿಸುತ್ತಾರೆ. ಇದು ಸಾಂಸಾರಿಕವಾದ ಸುಖರಾಶಿಯಲ್ಲ. ಐಹಲೌಕಿಕ ಮತ್ತು ಪಾರಲೌಕಿಕ(ಸ್ವರ್ಗಾದಿ) ಎಂದು ಎರಡು ವಿಧವಾಗಿರುವ ಸಾಂಸಾರಿಕ ಸುಖವು

ತರತಮಭಾವ ಹಾಗೂ ಸಾದೃಶ್ಯವನ್ನು ಉಳ್ಳದ್ದಾದುದರಿಂದ ವಿವೇಕಶಾಲಿಗಳಾದವರ
ಬೇಡಲು ಯೋಗ್ಯವಾದುದಲ್ಲ. ಆದುದರಿಂದ ನಿರತಿಶಯವೂ ಅಸದೃಶವೂ ಆದ ಸುಖಕ್ಕೆ
ವಿರೋಧಿಯಾದ ದುಃಖರಾಶಿಯು ಜಿಹಾಸಿಸಲ್ಪಡುತ್ತದೆ. ಅವಿದ್ಯೆ ಎಂಬ ಇನ್ನೊಂದ
ಹೆಸರುಳ್ಳ ಸಂಸಾರವೇ ಆ ದುಃಖರಾಶಿಯು. ಏಕೆಂದರೆ, ಕರ್ತೃತ್ವ ಮೊದಲಾದ ಸಕಲ
ಅನರ್ಥಗಳನ್ನೂ ಆ ಅವಿದ್ಯೆಯೇ ಉಂಟುಮಾಡುತ್ತದೆ. "ಸಮ್" ಎಂಬುದು "ಏಕೀಕರಣ"
ಎನ್ನುವ ಅರ್ಥದಲ್ಲಿದೆ. "ಸಂಭೇದ" ಎಂದು ಮೊದಲಾದ ಶಬ್ದಗಳಲ್ಲಿ ಅದೇ ಅರ್ಥದಲ್ಲಿ
ಪ್ರಯೋಗವು ಕಂಡುಬರುತ್ತದೆ. ಆದ್ದರಿಂದ ಆತ್ಮನನ್ನು ದೇಹದೊಡನೆ ಏಕೀಕರಿಸಿಕೊಂಡು
ಸ್ವರ್ಗ–ನರಕ ಮಾರ್ಗಗಳಲ್ಲಿ ಪುರುಷನು ಯಾವುದರಿಂದ ಸಂಚರಿಸುತ್ತಾನೆಯೋ ಅದೇ
ಸಂಸಾರ. ಅದೇ ಅವಿದ್ಯಾಶಬ್ದದ ಅರ್ಥ. ಆ ಸಂಸಾರದ ನಿವೃತ್ತಿಯೇ ಪ್ರಯೋಜನವು
ಎಂಬುದಾಗಿ ಪ್ರಯೋಜನಾಕಾಂಕ್ಷಿಗಳ ಅಭಿಮತ. ಆದ್ದರಿಂದಲೇ "ಅವಿದ್ಯೆಯು ಅಸ್ತಂಗತ
ವಾಗುವಿಕೆಯೆಂಬುದೇ ಮೋಕ್ಷವು; ಆ ಅವಿದ್ಯೆಯೇ ಬಂಧವು" ಎಂಬುದಾಗಿ ಹೇಳುತ್ತಾರೆ.

ಈ ರೀತಿಯಾದ ಪ್ರಯೋಜನವನ್ನು ಹೇಳುವುದು ನೀರಿನಲ್ಲಿ ಮುಳುಗುತ್ತಿರುವವನು
ಸಣ್ಣ ಹುಲ್ಲನ್ನು ಹಿಡಿದುಕೊಂಡಂತೆಯೇ ಆಗುತ್ತದೆ. ಏಕೆಂದರೆ, ಆತ್ಮನ ಯಾಥಾತ್ಮ್ಯಾನು
ಭವದ ಜೊತೆಯಲ್ಲಿಯೇ ಇರುವ ಸಂಸಾರಕ್ಕೆ ರೂಪ ಮತ್ತು ರಸಗಳಂತೆ ಪರಸ್ಪರ ವಿರೋಧ
ವಿಲ್ಲದುದರಿಂದ ನಿವರ್ತ್ಯನಿವರ್ತಕ ಭಾವವು ಇಲ್ಲ. ಸಂಸಾರದ ಜೊತೆಯಲ್ಲಿ ಅನುವರ್ತಿಸು
ತ್ತಿರುವ "ನಾನು" ಎಂಬ ಜ್ಞಾನವು ಸಂಸಾರವನ್ನು ಬಾಧಿಸದಿರಬಹುದು; ಆದರೆ, ಜೊತೆ
ಯಲ್ಲಿ ಇರದಿರುವ ಬೋಧವು (ಶುದ್ಧವಾದ ಅದ್ವಿತೀಯಾತ್ಮಜ್ಞಾನವು) ಬೆಳಕು ಕತ್ತಲೆ
ಯನ್ನು ಹೇಗೋಹಾಗೆ ಬಾಧಿಸುತ್ತದೆ—ಎಂದು ಕೇಳಬಹುದು. ಆದರೆ ಇದು ಬರಿ
ಪೊಳ್ಳಾದ ನುಡಿ. ಏಕೆಂದರೆ, "ಅಹಮ್" ಎನ್ನುವ ಅನುಭವಕ್ಕಿಂತಲೂ ಬೇರೆಯಾದ
ಆತ್ಮಜ್ಞಾನವುಂಟೆಂಬುದು ಇಲಿಯ ಕೊಂಬಿನಂತೆಯೇ ಸರಿ. (ಅಸತ್ ಆದುದು ಎಂದಭಿ
ಪ್ರಾಯ). ಬೇರೆಯಾದ ಈ ಅನುಭವವು (ಅದ್ವಿತೀಯಾತ್ಮಜ್ಞಾನವು) ಪಾಮರರಾದವರಿಗೆ
ಉಂಟಾಗದಿರಬಹುದು; ಆದರೆ, ವೇದಾಂತವಾಕ್ಯಗಳ ಸಮೂಹವನ್ನು ಪರ್ಯಾಲೋಚನೆ
ಮಾಡುವುದರಲ್ಲಿ ಸಮರ್ಥರಾದ ಪರೀಕ್ಷಕರಿಗೆ ಉಂಟಾಗಿಯೇ ಆಗುತ್ತದೆ ಎಂಬುದಾಗಿಯೂ
ಹೇಳಲಾಗುವುದಿಲ್ಲ. ಏಕೆಂದರೆ, ಅಬಾಧಿತವಾದ ಅನುಭವಕ್ಕೆ ವಿರೋಧ ಬರುವುದರಿಂದ
ವೇದಾಂತವಾಕ್ಯಗಳೆಲ್ಲಾ "ನೀರಿನಲ್ಲಿ ಕಲ್ಲು ತೇಲುತ್ತದೆ" ಎಂದು ಮುಂತಾದ ವಾಕ್ಯಗಳಿಗೆ
ಸಮಾನವಾಗುತ್ತವೆ. ನೂರಾರು ವೇದಗಳೂ ಕೂಡ ಘಟವನ್ನು ಪಟವನ್ನಾಗಿ ಮಾಡ
ಲಾರವಷ್ಟೆ!

ಹಾಗಾದರೆ, "ಅಧ್ಯಯನ ವಿಧಿಯು"[12] ವಿರುದ್ಧವಾಗುತ್ತದೆಯೆಂದು ಕೇಳಬಹುದು.
ಪ್ರಾಭಾಕರಗುರುಮತಾನುಸಾರವಾಗಿ "ಹುಂ", "ಫಟ್" ಮುಂತಾದ ವಾಕ್ಯಗಳಂತೆ
ಕೇವಲ ಜಪಕ್ಕೆ ಮಾತ್ರ ಉಪಯೋಗಿಗಳಾಗಿರುವುದರಿಂದಲೂ, ಕುಮಾರಿಲಭಟ್ಟಾಚಾರ್ಯರ
ಮತಾನುಸಾರವಾಗಿ "ಯಜಮಾನನು ಪ್ರಸ್ತರವು" ಎಂದು ಮುಂತಾದ ವಾಕ್ಯಗಳಂತೆ
ಕೇವಲ ಸ್ತೋತ್ರಪರವಾದವುಗಳಾದುದರಿಂದಲೂ, ವೇದಾಂತಸಿದ್ಧಾಂತವು ಅಧ್ಯಯನ

ಮಾಡಲ್ಪಡತಕ್ಕದ್ದು ಎಂಬುದಾಗಿ ಆಗಬಹುದು. ಆದ್ದರಿಂದ ಅನುಮಾನ ಪ್ರಯೋಗವು ಈ ರೀತಿ ಇದೆ:

> ವಿವಾದಾಸ್ಪದವಾದ ಬ್ರಹ್ಮವು ವಿಚಾರಣೀಯವಾದ ವಸ್ತುವಲ್ಲ; ನಿಷ್ಫಲವಾದುದರಿಂದ; ಕಾಕದಂತದಂತೆ.

ಆದ್ದರಿಂದಲೇ ಆಚಾರ್ಯರು "ಅಹಮ್" ಎನ್ನುವ ಜ್ಞಾನದಿಂದಲೇ ಆತ್ಮನು ಸಿದ್ಧಿಸುವುದರಿಂದಲೂ, ಅವನೇ ಬ್ರಹ್ಮನಾದುದರಿಂದಲೂ ಅವನ ಜ್ಞಾನದಿಂದ ಮುಕ್ತಿಯುಂಟಾಗುವುದಿಲ್ಲವಾದುದರಿಂದಲೂ ಬ್ರಹ್ಮಜಿಜ್ಞಾಸೆಯು ಉಪಪನ್ನವಾಗುವುದಿಲ್ಲ" ಎಂದು ಹೇಳುತ್ತಾರೆ.

ಮತ್ತು, ಬೇರೆ ಎಂಬುದಾಗಿ ಆರೋಪಿತವಾದ ದೇಹಾದಿಗಳ ನಿವೃತ್ತಿಯೇ ಪ್ರಯೋಜನವಾಗುವುದರಿಂದ ಪ್ರಯೋಜನವಿಲ್ಲವೆಂಬ ಹೇತುವು ಅಸಿದ್ಧವಾಗುತ್ತದೆಯೆಂದು ತಿಳಿಯಕೂಡದು. ಏಕೆಂದರೆ, ಭೇದನಿಶ್ಚಯವು ಉಂಟಾಗಬೇಕಾದರೆ, "ವ್ಯಾಪಕವು[13] ನಿವೃತ್ತವಾಗುವುದರಿಂದ ವ್ಯಾಪ್ಯವೂ ನಿವೃತ್ತವಾಗುತ್ತದೆ" ಎಂಬ ನಿಯಮಕ್ಕನುಸಾರವಾಗಿ ಭೇದದ ಅಜ್ಞಾನಕ್ಕೆ ವಿರೋಧಿಯಾದ ಭೇದಸಂಸ್ಕಾರ(ವಾಸನೆ)ವು ಇರಬೇಕು. ಎಂದೂ ಬೆಳ್ಳಿಯನ್ನೇ ಕಂಡಿಲ್ಲದವನಿಗೆ ಕಪ್ಪೆಚಿಪ್ಪಿನಲ್ಲಿ ಬೆಳ್ಳಿ ಎಂಬ ಭ್ರಮೆಯು ಉಂಟಾಗುವುದಿಲ್ಲ. ಸಂಸ್ಕಾರವುಂಟಾಗಲು ಹಿಂದೆ ಪ್ರಮಾತ್ಮಕವಾದ ಅನುಭವವು ಇರಬೇಕು. ಅನುಭೂತವಾಗದಿರುವ ವಿಷಯದ ಬಗ್ಗೆ ಸಂಸ್ಕಾರವುಂಟಾಗಲಾರದು. ಭ್ರಮಾತ್ಮಕವಾದ ಅನುಭವವೇ ಆ ಸಂಸ್ಕಾರಕ್ಕೆ ಕಾರಣವಾಗುತ್ತದೆಯೆಂದು ಹೇಳಲಾಗದು. ಭ್ರಮೆಗೆ ಮೊದಲು ಪ್ರಮೆಯು ಇರಲೇ ಬೇಕಾದುದರಿಂದ ಎಲ್ಲಾದರೂ ಒಂದೆಡೆ ಪ್ರಮೆಯನ್ನು ಒಪ್ಪಿಕೊಳ್ಳಲೇ ಬೇಕು. ಆದ್ದರಿಂದ ಅನುಮಾನ ಪ್ರಯೋಗವು ಈರೀತಿ ಆಗುತ್ತದೆ:

> ವಿವಾದವಿಷಯವಾದ ಆತ್ಮಾನಾತ್ಮಗಳು ಬೇರೆಬೇರೆಯಾಗಿಯೇ ತಿಳಿಯಲ್ಪಡುತ್ತವೆ; ಅಭಿನ್ನವಾಗಿರಲು ಅರ್ಹವಲ್ಲದುದರಿಂದ; ಕತ್ತಲೆ–ಬೆಳಕುಗಳಂತೆ.

ಆತ್ಮಾನಾತ್ಮಗಳು ಅಭಿನ್ನವಾಗಿರಲು ಅರ್ಹವಾದವುಗಳಲ್ಲವೆಂಬ ಹೇತುವು ಅಸಿದ್ಧವಾಗುತ್ತದೆಯೆಂದು ಶಂಕಿಸಕೂಡದು. ಏಕೆಂದರೆ ಈ ಶಂಕೆಯ ವಿಕಲ್ಪಗಳು (ಪ್ರಕಾರಗಳು) ಸರಿಹೊಂದುವುದಿಲ್ಲ. ಹೇಗೆಂದರೆ:—

ಅನಾತ್ಮವಸ್ತುವು ಆತ್ಮವಸ್ತುವಿಗೆ ಅಂಗಭೂತವಾದುದೋ, (ತತ್ಸ್ವರೂಪವಾದುದು) ಅಥವಾ ಆತ್ಮವಸ್ತುವು ಅನಾತ್ಮವಸ್ತುವಿಗೆ ಅಂಗಭೂತವಾದುದೋ? ಎಂದು ವಿಚಾರಮಾಡಬೇಕು.

ಮೊದಲನೆಯ ಪಕ್ಷದಲ್ಲಿ ಮೋಕ್ಷಾವಸ್ಥೆಯಲ್ಲಿ ಹೇಗೋ ಹಾಗೆ ಈ ದೃಶ್ಯವಾದ ಜಗತ್ತು ಅಸ್ತಂಗತವಾಗಬೇಕಾಗುತ್ತದೆ.

ಎರಡನೆಯ ಪಕ್ಷದಲ್ಲಿ (ಪ್ರಕಾಶಕವಾದ ಚೈತನ್ಯವಿಲ್ಲದ ಕಾರಣ) ಜಗತ್ತೆಲ್ಲವೂ ಅಂಧಕಾರಮಯವಾಗಬೇಕಾಗುತ್ತದೆ. ಮತ್ತು ಕತ್ತಲೆ–ಬೆಳಕುಗಳಂತೆ ಪರಸ್ಪರವಿರುದ್ಧ ವಾದ ಸ್ವಭಾವವುಳ್ಳವುಗಳಾದುದರಿಂದ ದೃಗ್–ದೃಶ್ಯರೂಪವಾದ ಆತ್ಮ–ಅನಾತ್ಮವಸ್ತು ಗಳಿಗೆ ಅಭೇದವು ಯೋಗ್ಯವಾಗುವುದೇ ಇಲ್ಲ. ಹೀಗೆ ಆತ್ಮನಲ್ಲಿ ಪ್ರಪಂಚವೆಂಬವಸ್ತುವನ್ನು ಆರೋಪಮಾಡಲಾಗುವುದಿಲ್ಲವಾದ್ದರಿಂದ ತನ್ಮೂಲಕವಾದ ಜ್ಞಾನಾಧ್ಯಾಸವೂ ಅಸಂಭವ ವಾದುದರಿಂದ ಬ್ರಹ್ಮನು ವಿಚಾರಮಾಡಲ್ಪಡತಕ್ಕವನೇ ಅಲ್ಲ. ಆದ್ದರಿಂದ ವಿಚಾರ ರೂಪ ವಾದ ನಾಲ್ಕು ಅಧ್ಯಾಯಗಳುಳ್ಳ ಶಾರೀರಕ ಮೀಮಾಂಸಾ ಶಾಸ್ತ್ರವನ್ನು ಆರಂಭಿಸ ಬೇಕಾಗಿಲ್ಲ—ಎಂದು ಪೂರ್ವಪಕ್ಷವು ಉಂಟಾಗಲು ಸಿದ್ಧಾಂತವು ಹೇಳಲ್ಪಡುತ್ತದೆ.

ನಿರುಪಾಧಿಕಂ ಬ್ರಹ್ಮ ಜಿಜ್ಞಾಸ್ಯಮಿತಿ ಸಿದ್ಧಾನ್ತಃ

ಅಹಮ್ಪ್ರತ್ಯಯಾದನ್ಯದಾತ್ಮತತ್ತ್ವಂ ನಾಸ್ತೀತಿ ನ ವಕ್ತವ್ಯಮ್। ನಿರಸ್ತ ಸಮಸ್ತೋ ಪಾಧಿಕಸ್ಯಾತ್ಮತತ್ತ್ವಸ್ಯ ಶ್ರುತ್ಯಾದಿಷು ಪ್ರಸಿದ್ಧತ್ವಾತ್। ನಚ ತೇಷಾಮುಪಚರಿತಾರ್ಥತಾ ಉಪಕ್ರಮೋಪಸಂಹಾರಾದಿಷಡ್ವಿಧತಾತ್ಪರ್ಯಲಿಙ್ಗವತ್ತಯಾ ತತ್ತ್ವಂ ಬೋಧಯತಾಮುಪ ಚರಿತಾರ್ಥತ್ವಾನುಪಪತ್ತೇಃ।

ಲಿಙ್ಗಷಟ್ಕಂಚ ಪೂರ್ವಾಚಾರ್ಯೈರ್ದರ್ಶಿತಮ್:—

'ಉಪಕ್ರಮೋಪಸಂಹಾರಾವಭ್ಯಾಸೋಽಪೂರ್ವತಾ ಫಲಮ್।
ಅರ್ಥವಾದೋಪಪತ್ತೀಚ ಲಿಙ್ಗಂ ತಾತ್ಪರ್ಯನಿರ್ಣಯೇ॥" ಇತಿ।

ತತ್ರ 'ಸದೇವ ಸೌಮ್ಯೇದಮಗ್ರ ಆಸೀತ್" ಇತ್ಯುಪಕ್ರಮಃ। "ಐತದಾತ್ಮ್ಯಮಿದಂಸರ್ವಂ ತತ್ಸತ್ಯಂ, ಸ ಆತ್ಮಾ, ತತ್ತ್ವಮಸಿ ಶ್ವೇತಕೇತೋ!" ಇತ್ಯುಪಸಂಹಾರಃ। ತಯೋರ್ಬ್ರಹ ವಿಷಯತ್ವೇನೈಕ್ಯರೂಪ್ಯಮೇಕಲಿಙ್ಗಮ್। ಅಸಕೃತ್ತತ್ತ್ವಮಸೀತ್ಯುಕ್ತಿರಭ್ಯಾಸಃ। ಮಾನಾನ್ ರಾಗಮ್ಯತ್ವಮಪೂರ್ವತ್ವಮ್। ಏಕವಿಜ್ಞಾನೇನ ಸರ್ವವಿಜ್ಞಾನಂ ಫಲಮ್। ಸೃಷ್ಟಿಸ್ಥಿ ಪ್ರಲಯಪ್ರವೇಶನಿಯಮನಾನಿ ಪಞ್ಚಾರ್ಥವಾದಾಃ। ಮೃದಾದಿದೃಷ್ಟಾನ್ತಾ ಉಪಪತ್ತಯಃ ತಸ್ಮಾದೇತೈರ್ಲಿಙ್ಗೈರ್ವೇದಾನ್ತಾನಾಂ ನಿತ್ಯಶುದ್ಧಬುದ್ಧಮುಕ್ತಸ್ವಭಾವಬ್ರಹ್ಮಾತ್ಮಪರತ್ವಂ ನಿಶ್ಚೇತವ್ಯಮ್।

ತದಿತ್ಥಮೌಪನಿಷದಸ್ಯಾತ್ಮತತ್ತ್ವಸ್ಯಾಹಮನುಭವೇಽನವಭಾಸಮಾನತ್ವಾತ್ತಸ್ಯಾನುಭವಸಾ ಧ್ಯಸ್ಯಾತ್ಮವಿಷಯತ್ವಂ ಸಿದ್ಧಮ್।

ನಿರುಪಾಧಿಕವಾದ ಬ್ರಹ್ಮವೇ ಜಿಜ್ಞಾಸ್ಯವೆಂದು ಸಿದ್ಧಾಂತ

"ಅಹಮ್" ಎನ್ನುವಾಗ ತೋರುವುದಕ್ಕಿಂತಲೂ ಬೇರೆಯಾದ ಆತ್ಮತತ್ತ್ವವು ಇಲ್ಲವೆಂದು ಹೇಳಲಾಗದು. ಎಲ್ಲ ಉಪಾಧಿಗಳನ್ನೂ ಕಳೆದುಕೊಂಡಿರುವ ಆತ್ಮತತ್ತ್ವವು ಶ್ರುತಿಮೊದಲಾದುವುಗಳಲ್ಲಿ ಪ್ರಸಿದ್ಧವಾಗಿದೆ. ಅವುಗಳೆಲ್ಲಾ ಔಪಚಾರಿಕವಾದ ಅರ್ಥ

ವುಳ್ಳವುಗಳಲ್ಲ. ಉಪಕ್ರಮೋಪಸಂಹಾರ (ಆರಂಭ-ಸಮಾಪ್ತಿ) ಮೊದಲಾದ ತಾತ್ಪರ್ಯ ನಿರ್ಣಾಯಕಗಳಾದ ಲಿಂಗಗಳು (ಕಾರಣಗಳು) ಇರುವುದರಿಂದ ತತ್ತ್ವವನ್ನು ತಿಳಿಸುವ ಮಾತುಗಳಿಗೆ ಉಪಚರಿತವಾದ ಅರ್ಥವನ್ನು ಹೇಳುವುದು ಸರಿಯಲ್ಲ.

ಪೂರ್ವಾಚಾರ್ಯರು ಆರು ತಾತ್ಪರ್ಯನಿರ್ಣಯಲಿಂಗಗಳನ್ನು ಈ ರೀತಿ ತೋರಿಸಿದ್ದಾರೆ:-

"೧) ಉಪಕ್ರಮೋಪಸಂಹಾರಗಳು, ೨) ಅಭ್ಯಾಸ, ೩) ಅಪೂರ್ವತೆ ೪) ಫಲ, ೫) ಅರ್ಥವಾದ ಮತ್ತು ೬) ಉಪಪತ್ತಿ—ಎಂಬಿವು ಆರು ತಾತ್ಪರ್ಯ ನಿರ್ಣಯಕ್ಕೆ ಕಾರಣಗಳು."

ಅಷ್ಟೇಕೆ, "ಸದೇವ ಸೌಮ್ಯೇದಮಗ್ರ ಆಸೀತ್"(ಛಾ.6-2-1) (ಎಲೈ! ಸೌಮ್ಯನೇ! ಮೊದಲಿಗೆ ಇದು ಸತ್ ಆಗಿಯೇ ಇತ್ತು.) ಎಂಬುದು ಉಪಕ್ರಮ. "ಐತದಾತ್ಮ್ಯಮಿದಂ ಸರ್ವಂ, ತತ್‌ಸತ್ಯಂ, ಸ ಆತ್ಮಾ, ತತ್ತ್ವಮಸಿ ಶ್ವೇತಕೇತೋ!" (ಛಾಂ.6-8-16) ಇದೆಲ್ಲವೂ (ಈ ಪ್ರಪಂಚವೆಲ್ಲವೂ) ಇದೇರೂಪ(ಸದ್ರೂಪ)ವಾದುದು; ಅದು ಸತ್ಯವು; ಅದು ಆತ್ಮವು; ಎಲೈ! ಶ್ವೇತಕೇತುವೇ! (ಅದು ನೀನಾಗಿದ್ದೀಯೆ) ಎಂಬುದು ಉಪಸಂಹಾರ. ಈ ಉಪಕ್ರಮೋಪಸಂಹಾರಗಳೆರಡಕ್ಕೂ ಬ್ರಹ್ಮವೇ ವಿಷಯವಾಗಿರುವುದರಿಂದ ಏಕರೂಪತೆಯೆಂಬ ಒಂದೇ ಲಿಂಗ(ತಾತ್ಪರ್ಯ ನಿರ್ಣಾಯಕ)ವಾಗುತ್ತದೆ. ಅನೇಕಬಾರಿ "ತತ್ತ್ವಮಸಿ" (ಅದು ನೀನಾಗಿದ್ದೀಯೆ) ಎಂದು ಹೇಳಿರುವುದೇ ಅಭ್ಯಾಸವು. ಬೇರೆ ಪ್ರಮಾಣದಿಂದ ಗೊತ್ತಾಗದಿರುವಿಕೆಯೇ ಅಪೂರ್ವತ್ವವು. ಒಂದನ್ನು ತಿಳಿಯುವುದರಿಂದ ಎಲ್ಲವನ್ನೂ ತಿಳಿಯುವಿಕೆಯೆಂಬುದೇ ಫಲವು. ಸೃಷ್ಟಿ, ಸ್ಥಿತಿ, ಪ್ರಲಯ, ಪ್ರವೇಶ, ನಿಯಮನ ಎಂಬ ಈ ಐದೂ ಅರ್ಥವಾದಗಳು. ಆದುದರಿಂದ ಈ ತಾತ್ಪರ್ಯನಿರ್ಣಾಯಕ ಲಿಂಗಗಳಿಂದ ವೇದಾಂತಗಳಿಗೆ ನಿತ್ಯವೂ, ಶುದ್ಧವೂ ಬುದ್ಧವೂ, ಮುಕ್ತವೂ ಆದ ಬ್ರಹ್ಮವೇ ಆತ್ಮ ಎಂಬುದೇ ತಾತ್ಪರ್ಯವೆಂಬುದಾಗಿ ನಿಶ್ಚಯಿಸಬೇಕು.

ಈ ರೀತಿಯಾಗಿ ಉಪನಿಷತ್ಪ್ರತಿಪಾದ್ಯವಾದ ಆತ್ಮತತ್ತ್ವವು "ಅಹಮ್" ಎನ್ನುವ ಅನುಭವದಲ್ಲಿ ತೋರುವುದಿಲ್ಲವಾದ್ದರಿಂದ ಆ ಅನುಭವವು (ಅಹಮನುಭವವು) ಆರೋಪಿತವಾದ ಆತ್ಮನನ್ನೇ ವಿಷಯವಾಗಿ ಉಳ್ಳದ್ದೆಂದು ಸಿದ್ಧವಾಗುತ್ತದೆ.

ಕಣಾದಗೌತಮಮತಯೋರ್ನಿರಾಕರಣಮ್

ಕಣಭಕ್ಷಾಕ್ಷಚರಣಾದಿಕಕ್ಷೀಕೃತಸ್ಯಾತ್ಮನೋ ಭಾನಾಭಾವಾದಹಮನುಭವಸ್ಯಾಧ್ಯಸ್ತಾತ್ಮವಿಷಯತ್ವಮೇಷಿತವ್ಯಮ್। ನ ತಾವದಹಮನುಭವಃ ಸರ್ವಗತತ್ವಮಾತ್ಮನೋಽವಗಮಯಿತುಮೀಷ್ಟೇ। ಅಹಮಿಹಾಸ್ಮಿ ಸದನೇ ಜಾನಾನ ಇತಿ ಪ್ರಾದೇಶಿಕತ್ವಗ್ರಹಣಾತ್। ನ ಚೇದಂ ದೇಹಸ್ಯ ಪ್ರಾದೇಶಿಕತ್ವಂ ಪ್ರತಿಭಾಸತ ಇತಿ ವೇದಿತವ್ಯಮ್। ಅಹಮಿತ್ಯುಲ್ಲೇಖಾಯೋಗಾತ್।

ನನು ಯಥಾ ರಾಜ್ಞಃ ಸರ್ವಪ್ರಯೋಜನವಿಧಾತರಿ ಭೃತ್ಯೇ ಮಮಾತ್ಮಾ ಭದ್ರಸೇನ ಇತ್ಯುಪಚಾರಸ್ತದ್ವದಾತ್ಮವಚನಸ್ಯಾಹಂಶಬ್ದಸ್ಯ ದೇಹ ಉಪಚಾರ ಇತಿಚೇತ್-ನೈವಂ ಮೋಚಃ

ಉಪಚರಿತಾತ್ಮಭಾವಸ್ಯ ದೇಹಾದೇಃ ಸ್ವಸಮಾನಾಕೃತಿಶಿಲಾಪುತ್ರಕಾದಿವಜ್ ಜ್ಞಾತೃತ್ವಾಯೋಗಾತ್। ನಚ ಜ್ಞಾತೃತ್ವಮಪ್ಯುಪಚರಿತಮ್। ಪ್ರಯೋಕ್ತುಃ ಸ್ವಪ್ರತಿಪತ್ತಿಪ್ರಕಾಶಕೇ ಪ್ರಯೋಗೇ ಪ್ರತಿಪತ್ತ್ಯತೋಪಚಾರಾನುಪಪತ್ತೇಃ।

ಅಥ ದೇಹಧರ್ಮಃ ಪ್ರಾದೇಶಿಕತ್ವಮಾತ್ಮನ್ಯುಪಚರ್ಯೇತ ತದಾ ದೇಹಾತ್ಮನೋರ್ಭೇದೇನ ಭವಿತವ್ಯಮ್। ಪ್ರಸಿದ್ಧಭೇದೇ ಮಾಣವಕೇ ಸಿಂಹಶಬ್ದವತ್ ಸಾಮ್ಪ್ರತಿಕಗೌಣತ್ವೇ, ತಿರೋಹಿತಭೇದೇನ ಸಾರ್ಷಪಾದೌ ರಸೇ ತೈಲಶಬ್ದವನ್ನಿರೂಢಗೌಣತ್ವೇನಾ ಗೌಣಮುಖ್ಯಯೋರ್ಭೇದಾಧ್ಯವಸಾಯಸ್ಯ ನಿಯತತ್ವಾತ್।

ಅಥ ಮಮಶರೀರಮಿತಿ ಭೇದಭಾನಸಮ್ಭವಾದ್ಗೌಣತ್ವಂ ಮನ್ಯೇಥಾಸ್ತದಯುಕ್ತಮ್। ಅಹಂಶಬ್ದಾರ್ಥಸ್ಯ ದೇಹಾದಿಭ್ಯೋ ನಿಷ್ಕೃಷ್ಯಾಸಾಧಾರಣಧರ್ಮವತ್ತ್ವೇನ ಪ್ರತಿಭಾಸಮಾನತ್ವಾಭಾವಾತ್। ಅಪರಥಾ ಲೋಕಾಯತಿಕಮತಂ ನೋದಯಮಾಸಾದಯೇತ್। ಮಮಶರೀರಮಿತ್ಯುಕ್ತಿಸ್ತು ರಾಹೋಃ ಶಿರ ಇತಿವದೌಪಚಾರಿಕೀ। ಮಮಶರೀರಮಿತಿ ಬ್ರುವಾಣೇನಾಪಿ ಕಸ್ತ್ವಮಿತಿ ಪೃಷ್ಟೇನ ವಕ್ಷಸ್ಥಲನ್ಯಸ್ತಹಸ್ತೇನ ಶೃಙ್ಗಗ್ರಾಹಿಕಯಾಯಮಹಮಿತಿ ಪ್ರತಿವಚನಸ್ಯ ದೀಯಮಾನತ್ವೇನ ದೇಹಾತ್ಮಪ್ರತ್ಯಯಸ್ಯ ಸಕಲಾನುಭವಸಿದ್ಧತ್ವಾತ್। ತದುಕ್ತಮ್:—

"ದೇಹಾತ್ಮಪ್ರತ್ಯಯೋ ಯದ್ವತ್ ಪ್ರಮಾಣತ್ವೇನ ಕಲ್ಪಿತಃ ।
ಲೌಕಿಕಂ ತದ್ವದೇವೇದಂ ಪ್ರಮಾಣಂ ತ್ವಾತ್ಮನಿಶ್ಚಯಾತ್ ॥" ಇತಿ।

ತಥಾಚ ವ್ಯಾಪಕಸ್ಯ ಭೇದಭಾನಸ್ಯ ನಿವೃತ್ತೇರ್ವ್ಯಾಪ್ಯಸ್ಯ ಗೌಣತ್ವಸ್ಯ ನಿವೃತ್ತಿರಿತಿ ನಿರವದ್ಯಮ್।

ನನ್ವಭಿಜ್ಞಯಾ ಭೇದಸಿದ್ಧಿರ್ಮಾಸಮ್ಭೂನ್ನಾಮ। ಪ್ರತ್ಯಭಿಜ್ಞಯಾತು ಸೋಽಹಮಿತ್ಯೇವಂರೂಪಯಾ ತತ್ಸಿದ್ಧಿಃ ಸಮ್ಭವಿಷ್ಯತೀತಿ ಚೇನ್ನ। ವಿಕಲ್ಪಾಸಹತ್ವಾತ್। ಕಿಮಿಯಂ ಪ್ರತ್ಯಭಿಜ್ಞಾ ಪಾಮರಾಣಾಂ ಸ್ವಾತ್ಮಪರೀಕ್ಷಕಾಣಾಂ ವಾ?

ನಾದ್ಯಃ। ದೇಹವ್ಯತಿರಿಕ್ತಾತ್ಮೈಕ್ಯಮವಗಾಹಮಾನಾಯಾಃ ಪ್ರತ್ಯಭಿಜ್ಞಾಯಾ ಅನುದಯಾತ್। ಪ್ರತ್ಯುತ ಶ್ಯಾಮಸ್ಯ ಲೌಹಿತ್ಯವತ್ ಕಾರಣವಿಶೇಷಾದಲ್ಪಸ್ಯಾಪಿ ಮಹಾಪರಿಮಾಣತ್ವಮವಿರುದ್ಧಮನುಭವತಾಂ ತದ್ದೇಹ ಏವ ತಸ್ಯಾಃ ಸಮ್ಭವಾಚ್ಚ।

ನ ದ್ವಿತೀಯಃ। ವ್ಯವಹಾರಸಮಯೇ ಪಾಮರಸಾಮ್ಯಾನತಿರೇಕಾತ್। ಅಪರೋಕ್ಷಭ್ರಮಸ್ಯ ಪರೋಕ್ಷಜ್ಞಾನವಿನಾಶ್ಯತ್ವಾನುಪಪತ್ತೇಶ್ಚ। ಯದುಕ್ತಂ ಭಗವತಾ ಭಾಷ್ಯಕಾರೇಣ:— "ಪಶ್ವಾದಿಭಿಶ್ಚಾವಿಶೇಷಾತ್" (ಬ್ರ. ಸೂ. 1-1-1. ಭಾ.) ಇತಿ। ಭಾಮತೀಕಾರೈರಪ್ಯುಕ್ತಮ್:— ಶಾಸ್ತ್ರಚಿನ್ತಕಾಃ ಖಲ್ವೇವಂ ವಿಚಾರಯನ್ತಿ ನ ಪ್ರತಿಪತ್ತಾರ ಇತಿ। ತಥಾಚಾತ್ಮಗೋಚರಸ್ಯಾಧ್ಯಾಸಾತ್ಮರೂಪತ್ವಂ ಸುಸ್ಥಮ್।

ವೈಶೇಷಿಕ ಮತ್ತು ನ್ಯಾಯಮತಗಳ ನಿರಾಕರಣೆ

ಕಣಾದ,[14] ಗೌತಮ ಮೊದಲಾದವರಿಂದ ಅಂಗೀಕರಿಸಲ್ಪಟ್ಟಿರುವ ಆತ್ಮವು ತೋರುವುದಿಲ್ಲವಾದ್ದರಿಂದ "ಅಹಮ್" ಎನ್ನುವ ಅನುಭವಕ್ಕೆ ಆರೋಪಿತವಾದ ಆತ್ಮವೇ

ವಿಷಯವು. "ನಾನು" ಎನ್ನುವ ಅನುಭವವು ಆತ್ಮನ ವಿಭುತ್ವವನ್ನು ತೋರಿಸಿಕೊಡಲಾರದಷ್ಟೆ. ಏಕೆಂದರೆ, "ನಾನು ಇಲ್ಲಿ ಮನೆಯಲ್ಲಿ ತಿಳಿಯುವವನಾಗಿದ್ದೇನೆ" ಎನ್ನುವಾಗ ಪ್ರಾದೇಶಿಕತ್ವವೇ ತೋರುತ್ತದೆ. ಇಲ್ಲಿ ದೇಹದ ಪ್ರಾದೇಶಿಕತ್ವವೇ ತೋರುತ್ತದೆ ಎಂದು ತಿಳಿಯಕೂಡದು. ಏಕೆಂದರೆ "ನಾನು" ಎಂದು ಉತ್ಕೀರ್ತನೆ ಮಾಡುವುದು ಸರಿಹೋಗುವುದಿಲ್ಲ.

ರಾಜನ ಎಲ್ಲ ಪ್ರಯೋಜನಗಳನ್ನೂ ಸಾಧಿಸುವ ಸೇವಕನನ್ನು "ಭದ್ರಸೇನನು ನನ್ನ ಆತ್ಮ" ಎಂಬುದಾಗಿ ಉಪಚಾರಮಾಡುವಂತೆ, ಆತ್ಮನನ್ನು ತಿಳಿಸುವ ನಾನು ಎಂಬ ಶಬ್ದಕ್ಕೆ "ದೇಹ" ಎಂಬ ಅರ್ಥದಲ್ಲಿ ಉಪಚಾರ ಎಂಬುದಾಗಿಯೂ ಹೇಳಕೂಡದು. ಏಕೆಂದರೆ, ಉಪಚರಿತವಾದ ಆತ್ಮಭಾವವುಳ್ಳ ದೇಹಾದಿಗಳಿಗೆ ತನಗೆ ಸಮಾನವಾದ ಆಕಾರವುಳ್ಳ ಶಿಲಾಪ್ರತಿಮೆಯಂತೆ ಜ್ಞಾತೃತ್ವವು ಹೊಂದುವುದಿಲ್ಲ. ಜ್ಞಾತೃತ್ವವೂ ಉಪಚರಿತವೆಂದು ಹೇಳಕೂಡದು. ಏಕೆಂದರೆ, ತನ್ನ ಜ್ಞಾನವನ್ನು ಪ್ರಕಾಶಪಡಿಸುವ ವಾಕ್ಯಪ್ರಯೋಗದಲ್ಲಿ ಪ್ರಯೋಕ್ತೃವಾದವನಿಗೆ ಜ್ಞಾತೃತ್ವವನ್ನು ಉಪಚಾರಮಾಡುವುದು ಸರಿಯಲ್ಲ. ಮತ್ತು ದೇಹಧರ್ಮವಾದ ಪ್ರಾದೇಶಿಕತ್ವವು ಆತ್ಮನಲ್ಲಿ ಉಪಚಾರ ಮಾಡಲ್ಪಡುತ್ತದೆ ಎನ್ನುವುದಾದರೆ ದೇಹ ಮತ್ತು ಆತ್ಮಗಳಿಗೆ ಭೇದವಿರಬೇಕಾಗುತ್ತದೆ. ಏಕೆಂದರೆ ಭೇದವು ಸ್ಪಷ್ಟವಾಗಿರುವ ಹುಡುಗನಲ್ಲಿ "ಸಿಂಹ" ಎಂಬ ಶಬ್ದದಂತೆ ಆಧುನಿಕಗೌಣವೃತ್ತಿಯಲ್ಲಾಗಲಿ[15] ಅಥವಾ ಮರೆಯಾಗಿರುವ ಭೇದವುಳ್ಳ ಸಾಸುವೆಯ ರಸದಲ್ಲಿ "ತೈಲ" ಶಬ್ದದಂತೆ ನಿರೂಢಗೌಣವೃತ್ತಿಯಲ್ಲಾಗಲಿ ಗೌಣ–ಮುಖ್ಯಗಳಿಗೆ ಭೇದನಿಶ್ಚಯವು ನಿಯತವಾಗಿರುತ್ತದೆ.

ಮತ್ತು, "ನನ್ನ ಶರೀರ" ಎಂಬುವಾಗ ಭೇದವು ತೋರುವುದರಿಂದ ಗೌಣವೃತ್ತಿಯೆಂಬುದಾಗಿ ತಿಳಿಯುವುದು ಸರಿಯಲ್ಲ. ಏಕೆಂದರೆ, "ಅಹಮ್" ಎಂಬ ಶಬ್ದಕ್ಕೆ ದೇಹಾದಿಗಳಿಗಿಂತ ಪೃಥಕ್ಕಾಗಿ ಅಸಾಧಾರಣ ಧರ್ಮವುಳ್ಳ (ತನ್ನದೇ ಆದಸ್ವರೂಪವುಳ್ಳ) ಅರ್ಥವು ತೋರುವುದಿಲ್ಲ. ಹಾಗೆ ತೋರುವುದಾದರೆ ಚಾರ್ವಾಕಮತವು ಆವಿರ್ಭವಿಸಲೇ ಆರದು. "ನನ್ನ ಶರೀರ" ಎಂಬ ಮಾತು "ರಾಹುವಿನ ತಲೆ" ಎಂಬಂತೆ ಔಪಚಾರಿಕವಾದುದು. "ನನ್ನ ಶರೀರ" ಎಂದು ಹೇಳುವವನೂ ಕೂಡ "ನೀನು ಯಾರು?" ಎಂದು ಕೇಳಿದರೆ ಎದೆಯ ಜಾಗದಲ್ಲಿ ಕೈಯನ್ನಿಟ್ಟು ಶೃಂಗಗ್ರಾಹಿಕಾನ್ಯಾಯದಿಂದ[16] "ಇದೇ ನಾನು" ಎಂದು ಉತ್ತರ ಕೊಡುವುದರಿಂದ ದೇಹಾತ್ಮಜ್ಞಾನವು ಸಕಲಾನುಭವಸಿದ್ಧವಾಗಿದೆ. ಆದುದರಿಂದಲೇ "ದೇಹಾತ್ಮಜ್ಞಾನವು ಪ್ರಮಾಣವೆಂಬುದಾಗಿ ಕಲ್ಪಿತವಾಗಿರುವಂತೆ ಈ ಲೌಕಿಕಪ್ರಮಾಣವು ಆತ್ಮಸಾಕ್ಷಾತ್ಕಾರವುಂಟಾಗುವವರೆಗೂ ಪ್ರಮಾಣಭೂತವಾದುದು" ಎಂದು ಹೇಳುತ್ತಾರೆ.

ಈರೀತಿಯಾಗಿ ವ್ಯಾಪಕವಾದ ಭೇದಜ್ಞಾನವು ನಿವೃತ್ತವಾಗುವುದರಿಂದ ವ್ಯಾಪ್ಯವಾದ ಗೌಣವ್ಯವಹಾರವೂ ನಿವೃತ್ತವಾಗುತ್ತದೆ.

"ಸ್ಥೂಲನಾದ ನಾನು" ಎಂಬ ಪ್ರತೀತಿಗೆ ವಿರುದ್ಧವಾಗುವುದರಿಂದ "ಇದು ನನ್ನ ಶರೀರ" ಎಂಬ ಅಭಿಜ್ಞೆ(ಜ್ಞಾನ)ಯಿಂದ ಭೇದವು ಸಿದ್ಧಿಸುವುದು ಬೇಡ; ಆದರೆ, "ಸೋಽಹಮ್" (ಅವನೇ ನಾನು) ಎಂಬ ಪ್ರತ್ಯಭಿಜ್ಞೆಯಿಂದ (ಹಿಂದೆ ನೋಡಿದ ವಸ್ತು

ವನ್ನೇ ಪ್ರತ್ಯಕ್ಷವಾಗಿ ಕಂಡಾಗ ಗುರುತಿಸುವುದು) ಭೇದಸಿದ್ಧಿಯು ಸಂಭವವಿದೆ ಎಂದು ಹೇಳುವುದಾದರೆ, ಅದೂ ಸರಿಯಲ್ಲ. ಏಕೆಂದರೆ ಇಲ್ಲಿ ಏಳುವ ವಿಕಲ್ಪಗಳಿಗೆ ಸಮಾಧಾನ ವಿಲ್ಲ. ಹೇಗೆಂದರೆ:—ಈ ಪ್ರತ್ಯಭಿಜ್ಞೆಯುಂಟಾಗುವುದು ಪಾಮರರಿಗೋ? ಅಥವಾ ಪರೀಕ್ಷಕರಿಗೋ?

ಮೊದಲನೆಯ ಪಕ್ಷವು ಯುಕ್ತವಾಗುವುದಿಲ್ಲ. ಏಕೆಂದರೆ, ದೇಹಕ್ಕಿಂತಲೂ ಬೇರೆ ಯಾದ ಜೀವಾತ್ಮನಿಗೆ ಪರಮಾತ್ಮನೊಡನೆ ಏಕತ್ವವನ್ನು ತಿಳಿಸುವಂತಹ ಪ್ರತ್ಯಭಿಜ್ಞೆಯೇ ಉಂಟಾಗುವುದಿಲ್ಲ. ಇದಕ್ಕೆ ವಿಪರೀತವಾಗಿ ಕಪ್ಪಾದ ವಸ್ತುವು ಬೆಂಕಿಯ ಸಂಬಂಧದಿಂದ (ತೇಜಃಸಂಯೋಗದಿಂದ) ಕೆಂಪಾಗುವಂತೆ, ವಿಶೇಷವಾದ ಕಾರಣದಿಂದ ಅಲ್ಪಪರಿಮಾಣ ವುಳ್ಳ ವಸ್ತುವಿಗೂ ಮಹತ್ಪರಿಮಾಣವುಂಟಾಗುವುದನ್ನು ಅಬಾಧಿತವಾಗಿ ಕಾಣುತ್ತಿರು ವವರಿಗೆ ಅದೇ ದೇಹದಲ್ಲಿಯೇ ಅಂತಹ ಪ್ರತ್ಯಭಿಜ್ಞೆಯು (ಸೋಽಹಮ್ ಎಂಬುದಾಗಿ) ಉಂಟಾಗಬಹುದು.

ಎರಡನೆಯ ಪಕ್ಷವೂ ಸರಿಯಿಲ್ಲ. ಏಕೆಂದರೆ, ವ್ಯವಹಾರಕಾಲದಲ್ಲಿ ಪರೀಕ್ಷಕರು ಪಾಮರರಿಗೆ ಸಮಾನರೇ ಹೊರತು ಬೇರೆಯಲ್ಲ. ಪ್ರತ್ಯಕ್ಷಭ್ರಮೆಯು ಪರೋಕ್ಷಜ್ಞಾನ ದಿಂದ ನಾಶಹೊಂದುತ್ತದೆ ಎನ್ನುವುದು ಸರಿಹೊಂದುವುದಿಲ್ಲ. ಏಕೆಂದರೆ ಪೂಜ್ಯರಾದ ಭಾಷ್ಯಕಾರರು "ಪಶ್ವಾದಿಭಿಶ್ಚಾವಿಶೇಷಾತ್" (ಬ್ರ.ಸೂ.ಭಾ.1-1-1.) (ಪಶು ಮೊದ ಲಾದುವುಗಳಿಗಿಂತ ವೈಲಕ್ಷಣ್ಯವಿಲ್ಲದಿರುವುದರಿಂದ) ಎಂದು ಹೇಳಿದ್ದಾರೆ. ಭಾಮತೀ ಕಾರರೂ ಕೂಡ "(ಆತ್ಮಸಾಕ್ಷಾತ್ಕಾರವಾಗದ) ಶಾಸ್ತ್ರಚಿಂತಕರು ತಾನೇ ಈ ರೀತಿಯಾಗಿ ವಿಚಾರಮಾಡುತ್ತಾರೆ; ಜ್ಞಾನಿಗಳಾದವರಲ್ಲ" ಎಂದು ಹೇಳಿದ್ದಾರೆ. ಆದುದರಿಂದ "ನಾನು" ಎನ್ನುವಾಗ ತೋರುವ ವಿಷಯವು ಅಧ್ಯಸ್ತಾತ್ಮರೂಪವಾದುದೇ ಎಂಬುದಾಗಿ ನಿಶ್ಚಿತವಾಗುತ್ತದೆ.

ಜೈನಮತನಿರಾಕರಣಮ್

ನ ಚಾರ್ವಾಕಮತಾನುಸಾರೇಣಾಹಮ್ಪ್ರತ್ಯಯಪ್ರಾಮಾಣ್ಯಾದಾತ್ಮನೋ ದೇಹಪರಿ ಮಾಣತ್ವಮಙ್ಗೀಕರಣೀಯಮಿತಿ ಸಾಮ್ಪ್ರತಮ್। ಮಧ್ಯಮಪರಿಮಾಣಸ್ಯ ಸಾವಯವತ್ವೇನ ದೇಹಾದಿವದನಿತ್ಯತ್ವೇ ಕೃತಹಾನಾಕೃತಾಭ್ಯಾಗಮಪ್ರಸಙ್ಗಾತ್। ಅಥೈತದ್ದೋಷಪರಿಜಿಹೀರ್ಷ ಯಾವಯವಸಮುದಾಯ ಆತ್ಮೇತ್ಯಭ್ಯುಪಗಮ್ಯೇತ, ತದಾವಕ್ತವ್ಯಮ್। ಕಿಂ ಪ್ರತ್ಯೇಕಮವ ಯವಾನಾಂ ಚೈತನ್ಯಂ ಸಙ್ಘಾತಸ್ಯ ವಾ?

ನಾದ್ಯಃ। ಬಹೂನಾಂ ಚೇತನಾನಾಮಹಮಹಮಿಕಯಾ ಪ್ರಧಾನಭಾವಮನುಭವತಾ ಮೈಕಮತ್ಯಾಭಾವೇನ ಸಮಸಮಯಂ ವಿರುದ್ಧದಿಕ್ಕ್ರಿಯತಯಾ ಶರೀರಸ್ಯಾಪಿ ವಿಶರಣನಿಷ್ಕ್ರಿ ಯತ್ವಯೋರನ್ಯತರಾಪಾತಾತ್।

ದ್ವಿತೀಯೇಽಪಿ ಸಙ್ಘಾತಾಪತ್ತಿಃ ಕಿಂ ಶರೀರೋಪಾಧಿಕೀ, ಸ್ವಾಭಾವಿಕೀ, ಯಾದೃಚ್ಛಿಕೀ ವಾ?

ನಾದ್ಯಃ। ಏಕಸ್ಮಿನ್ನವಯವೇ ಭಿನ್ನೇ ಚಿದಾತ್ಮನೋಽಪ್ಯವಯವಚ್ಛಿನ್ನ ಇತ್ಯಚೇತನತ್ವಾಪಾತಾತ್।

ನ ದ್ವಿತೀಯಃ। ಅನೇಕೇಷಾಮವಯವಾನಾಮನ್ಯೋನ್ಯಸಾಹಿತ್ಯನಿಯಮಾದರ್ಶನಾತ್।

ನ ತೃತೀಯಃ। ಸಂಶ್ಲೇಷವದ್ವಿಶ್ಲೇಷಸ್ಯಾಪಿ ಯಾದೃಚ್ಛಿಕತ್ವೇನ ಸುಖೇನ ವಸತಾಮಕಸ್ಮಾದಚೇತನತ್ವಪ್ರಸಜ್ಗಾತ್।

ನಚಾಣುಪರಿಮಾಣತ್ವಮಾತ್ಮನಃ ಶಙ್ಕನೀಯಮ್। ಸ್ಥೂಲೋಽಹಂ, ದೀರ್ಘೋಽಹಮಿತಿ ಪ್ರತ್ಯಯಾನುಪಪತ್ತೇಃ।

ಜೈನಮತದ ನಿರಾಕರಣೆ

"ಅಹಮ್" ಎನ್ನುವ ಪ್ರತೀತಿಯ ಪ್ರಾಮಾಣ್ಯಕ್ಕಾಗಿ ಆರ್ಹತ[17]ಮತವನ್ನನುಸರಿಸಿ ಆತ್ಮನಿಗೆ ದೇಹಕ್ಕೆ ಸಮಾನವಾದ ಪರಿಮಾಣವನ್ನು ಅಂಗೀಕರಿಸಬೇಕೆಂದು ಹೇಳುವುದು ಯುಕ್ತವಾಗುವುದಿಲ್ಲ. ಮಧ್ಯಮ ಪರಿಮಾಣವುಳ್ಳ (ಅಣುವೂ ಅಲ್ಲದ, ಮಹತ್ತಾದುದೂ ಅಲ್ಲದ) ಆತ್ಮವಸ್ತುವು ಅವಯವವುಳ್ಳದ್ದಾಗಿರಬೇಕಾಗುವುದರಿಂದ ದೇಹಾದಿಗಳಂತೆ ಅನಿತ್ಯವಾದುದಾಗಿರಲಾಗಿ ಕೃತಪ್ರಣಾಶ–ಅಕೃತಾಭ್ಯಾಗಮ[18] ಎಂಬ ದೋಷವು ಪ್ರಸಕ್ತವಾಗುತ್ತದೆ. ಮತ್ತು, ಈ ದೋಷವನ್ನು ಹೋಗಲಾಡಿಸುವ ಇಚ್ಛೆಯಿಂದ ಅವಯವ ಸಮುದಾಯವೇ ಆತ್ಮ ಎಂದು ಅಂಗೀಕರಿಸುವುದಾದರೆ, ಆಗ ಹೇಳಬೇಕಾಗುತ್ತದೆ; ಏನೆಂದರೆ, ಪ್ರತಿಯೊಂದು ಅವಯವವೂ ಆತ್ಮವೋ?ಅಥವಾ ಅವಯವ ಸಮುದಾಯವೋ?

ಮೊದಲನೆಯ ಪಕ್ಷ ಸರಿಹೋಗುವುದಿಲ್ಲ. ಏಕೆಂದರೆ, ಅನೇಕ ಆತ್ಮಗಳು ಒಂದೆಡೆ (ದೇಹದಲ್ಲಿ) ಅಹಮಹಮಿಕೆಯಿಂದ ಪ್ರಾಧಾನ್ಯವನ್ನು ಹೊಂದುವುದರಿಂದ ಮತ್ತು ಐಕಮತ್ಯವಿಲ್ಲದೆ, ಒಂದೇಕಾಲದಲ್ಲಿ ಪರಸ್ಪರ ವಿರುದ್ಧವಾದ ದಿಕ್ ಮತ್ತು ಕೆಲಸಗಳನುಳ್ಳದ್ದಾಗುವುದರಿಂದ ಶರೀರವು ಒಡೆದುಹೋಗಬೇಕಾಗುತ್ತದೆ ಅಥವಾ ನಿಷ್ಕ್ರಿಯವಾಗಿರಬೇಕಾಗುತ್ತದೆ.

ಅವಯವ ಸಮುದಾಯವೇ ಆತ್ಮವೆಂಬ ಎರಡನೆಯ ಪಕ್ಷವೂ ಸರಿಹೋಗುವುದಿಲ್ಲ. ಏಕೆಂದರೆ, ಆತ್ಮನ ಈ ಸಮುದಾಯಭಾವವು ಶರೀರ(ಉಪಾಧಿ) ಪ್ರಯುಕ್ತವಾಗಿ ಉಂಟಾಗುತ್ತದೆಯೋ? ಅಥವಾ ಸ್ವಾಭಾವಿಕವಾಗಿಯೋ? ಅಥವಾ ಯಾದೃಚ್ಛಿಕವಾಗಿಯೋ? ಎಂದು ವಿಚಾರ ಮಾಡಬೇಕಾಗುತ್ತದೆ.

ಈ ಪೈಕಿ ಮೊದಲನೆಯ ಪಕ್ಷವು ಸರಿಹೋಗುವುದಿಲ್ಲ. ಏಕೆಂದರೆ, ಶರೀರದ ಯಾವುದಾದರೂ ಒಂದು ಅವಯವವು ಕಡಿದುಹೋದರೆ ಚಿದಾತ್ಮನ ಅವಯವವೂ ಕಡಿದುಹೋಗಿ ಅಚೇತನತ್ವವುಂಟಾಗಬೇಕಾಗುತ್ತದೆ.

ಎರಡನೆಯ ಪಕ್ಷವೂ ಸರಿಯಿಲ್ಲ. ಏಕೆಂದರೆ, ಬಾಲ್ಯ–ಮೊದಲಾದ ಬೇರೆಬೇರೆ ಅವಸ್ಥೆಗಳಲ್ಲಿ ಮತ್ತು ಬೇರೆಬೇರೆ ಜನ್ಮಗಳಲ್ಲಿ ಬೇರೆಬೇರೆಯಾದ ಶರೀರವಿರುವುದರಿಂದ ಅನೇಕ ಅವಯವಗಳು ಪರಸ್ಪರವಾಗಿ ಒಟ್ಟಿಗೆ ಇರಲೇಬೇಕೆಂಬ ನಿಯಮವಿಲ್ಲ.

ಮೂರನೆಯ ಪಕ್ಷವೂ ಸರಿಹೋಗುವುದಿಲ್ಲ. ಏಕೆಂದರೆ, ಸಂಶ್ಲೇಷದಂತೆ ವಿಶ್ಲೇಷವೂ ಯಾದೃಚ್ಛಿಕವಾಗಿರುವುದರಿಂದ ಸುಖವಾಗಿ ಇರುವವರು (ಚೇತನಗಳು) ಅಕಸ್ಮಾತ್ತಾಗಿಯೇ ಅಚೇತನವಾಗಿ ಆಗಬೇಕಾದ ಪ್ರಸಂಗ ಬಂದೀತು.

ಆತ್ಮನಿಗೆ ಅಣುಪರಿಮಾಣತ್ವವನ್ನೂ ಸಂಭಾವಿಸಬಾರದು. ಏಕೆಂದರೆ, "ಸ್ಥೂಲನಾದ ನಾನು" "ಉದ್ದನಾದ ನಾನು" ಎಂಬ ಅನುಭವವು ವಿರುದ್ಧವಾಗುತ್ತದೆ.

ವಿಜ್ಞಾನಾತ್ಮವಾದಖಣ್ಡನಮ್

ನಚ ವಿಜ್ಞಾನಾತ್ಮಭಾಷಿಣಾಂ ನೈಷ ದೋಷಃ। ವಿಶುದ್ಧಸಾವಯವತ್ವಾಭಾವಾದಿತಿ ಗಣನೀಯಮ್। ಯಃ ಸುಷುಪ್ತಃ ಸೋಽಹಂ ಜಾಗರ್ಮೀತಿ ಸ್ಥಿರಗೋಚರಸ್ಯಾಹಮುಲ್ಲೇಖಸ್ಯ ಕ್ಷಣಭಙ್ಗಿವಿಜ್ಞಾನಗೋಚರತ್ವೇ ಅತಸ್ಮಿಂಸ್ತದ್ಬುದ್ಧಿರೂಪಮಿಥ್ಯಾಧ್ಯಾಸಸ್ಯ ತದವಸ್ಥಾನಾತ್।

ತದನೇನ ಕೃಶೋಽಹಂ ಕೃಷ್ಣೋಽಹಮಿತ್ಯಾದೀನಾಂ ಪ್ರಖ್ಯಾನಾನಾಂ ಬುದ್ಧ್ಯಾ ಸರೂಪತಾಖ್ಯಾನೇನೌಪಚಾರಿಕತ್ವಂ ಪ್ರತ್ಯಾಖ್ಯಾತಮ್। ತದ್ವ್ಯಾಪಕಭೇದಭಾನಾಸಮ್ಭವಸ್ಯ ಪ್ರಾಗೇವ ಪ್ರಪಞ್ಚಿತತ್ವಾತ್।

ವಿಜ್ಞಾನವಾದದ ಖಂಡನೆ

ವಿಜ್ಞಾನಾತ್ಮ[19]ವಾದಿಗಳಿಗೆ ಈ ದೋಷವು ಒದಗುವುದಿಲ್ಲ; ಏಕೆಂದರೆ, ವಿಶುದ್ಧವಾದ ಅಂದರೆ ನಿರುಪಾಧಿಕವಾದ ಸಾವಯವತ್ವವು ವಿಜ್ಞಾನಾತ್ಮನಿಗೆ ಇಲ್ಲ.—ಎಂಬುದಾಗಿಯೂ ಪರಿಗಣಿಸಬಾರದು. ಏಕೆಂದರೆ, "ಯಾವ ನಾನು ನಿದ್ರೆಮಾಡಿದೆನೋ, ಅದೇ ನಾನು ಎಚ್ಚರವಾಗಿದ್ದೇನೆ" ಎಂಬುದಾಗಿ ಸ್ಥಿರವಾಗಿ ತೋರುವ "ನಾನು" ಎಂಬುದೇ ಕ್ಷಣಿಕ ವಿಜ್ಞಾನಕ್ಕೆ ಗೋಚರವಾಗುವುದಾದರೆ, "ಅದಲ್ಲದುದರಲ್ಲಿ ಅದು ಎಂಬ ಬುದ್ಧಿ" ರೂಪವಾದ ಮಿಥ್ಯಾಧ್ಯಾಸವು ಅಲ್ಲಿ ಇದ್ದೇ ಇರಬೇಕಾಗುತ್ತದೆ.

ಈ ರೀತಿಯಾಗಿ "ಕೃಶನಾದ ನಾನು" "ಕಪ್ಪಾದ ನಾನು" ಎಂದು ಮುಂತಾದ ಪ್ರತೀತಿಗಳು ಆಂತರಿಕ ವಿಜ್ಞಾನಕ್ಕೆ ಸಮಾನಾಕಾರವುಳ್ಳವುಗಳು ಎಂದು ಹೇಳುವುದರಿಂದ ಔಪಚಾರಿಕತ್ವವು ನಿರಾಕೃತವಾಗುತ್ತದೆ. ಔಪಚಾರಿಕತ್ವ ಪ್ರತೀತಿಗೆ ವ್ಯಾಪಕವಾದ ಭೇದಪ್ರತೀತಿಯು ಈ ಮತದಲ್ಲಿ ಅಸಂಭವ ಎಂಬುದನ್ನು ಹಿಂದೆಯೇ ವಿಸ್ತರವಾಗಿ ನಿರೂಪಿಸಲಾಗಿದೆ.

ವೇದಾನ್ತಶಾಸ್ತ್ರಾರಮ್ಭಸಮರ್ಥನಮ್

ತಥಾ ಚ ಪ್ರಯೋಗಃ:— ವಿಮತಂ ಶಾಸ್ತ್ರಂ ವಿಷಯಪ್ರಯೋಜನಸಹಿತಮಾವಿದ್ಯಕಬಂಧನಿವರ್ತಕತ್ವಾತ್; ಸುಪ್ತೋತ್ಥಿತಬೋಧವತ್।

ಯಥಾ ಸ್ವಪ್ನಾವಸ್ಥಾಯಾಂ ಮಾಯಾಪರಿಕಲ್ಪಿತಯೋಷಾದಿಕೃತಬಂಧನಿವರ್ತಕಸ್ಯ ಸುಪ್ತೋತ್ಥಿತಬೋಧಸ್ಯ ಮಂದಿರಮಧ್ಯೇ ಸುಖೇನ ಶಯ್ಯಾಯಾಮವತಿಷ್ಠಮಾನೋ ದೇಹೋ ವಿಷಯಃ

ತಸ್ಯ ಸುಪ್ತಬೋಧೇನಾನಿಶ್ಚಯಾತ್। ಸ್ವಪ್ನಮಾಯಾವಿಜೃಮ್ಭಿತಾನರ್ಥನಿವೃತ್ತಿಃ ಪ್ರಯೋಜನಮ್। ಏವಂ ಮನನಾದಿಜನ್ಯಪರೋಕ್ಷಜ್ಞಾನದ್ವಾರೇಣಾಧ್ಯಾಸಿಕಕರ್ತೃತ್ವಭೋಕ್ತೃತ್ವಾದ್ಯನರ್ಥನಿಷೇಧಕಸ್ಯ ಶಾಸ್ತ್ರಸ್ಯ ಸಚ್ಚಿದಾನಂದೈಕರಸಂ ಪ್ರತ್ಯಗಾತ್ಮಭೂತಂ ಬ್ರಹ್ಮ ವಿಷಯಃ। ತಸ್ಯಾಹಮನುಭವೇನಾನಿಶ್ಚಯಾತ್। ಅಧ್ಯಾಸನಿವೃತ್ತಿಃ ಪ್ರಯೋಜನಮ್। ತಥಾಚಾಫಲತ್ವಾದಿತಿ ಹೇತುರಸಿದ್ಧ ಇತಿ ಸಿದ್ಧಮ್। ತದುಕ್ತಮ್ :–

"ಶ್ರುತಿಗಮ್ಯಾತ್ಮತತ್ತ್ವಂತು ನಾಽಹಂಬುದ್ಧ್ಯಾಽವಗಮ್ಯತೇ।
ಅಪಿ ಖೇ ಕಾಮತೋ ಮೋಹಾ ನಾತ್ಮನ್ಯಸ್ತವಿಪರ್ಯಯೇ॥" ಇತಿ।

ಇತೋಽಪ್ಯಮಸನ್ದಿಗ್ಧತ್ವಾದಿತಿ ಹೇತುರಪ್ಯಸಿದ್ಧ ಇತಿ ಸಿದ್ಧಮ್।

ವೇದಾಂತಶಾಸ್ತ್ರಾರಂಭ ಸಮರ್ಥನೆ

ಈ ಪ್ರಕಾರ, ಅನುಮಾನ ಪ್ರಯೋಗವು ಹೀಗೆ ಆಗುತ್ತದೆ:—"ವಿವಾದವಿಷಯವಾದ (ವೇದಾಂತ) ಶಾಸ್ತ್ರವು ವಿಷಯ–ಪ್ರಯೋಜನ ಸಹಿತವಾದುದು; ಅವಿದ್ಯಾಕಲ್ಪಿತವಾದ ಬಂಧನನ್ನು ಹೋಗಲಾಡಿಸುವುದರಿಂದ; ನಿದ್ರೆಮಾಡಿ ಎದ್ದವನ ಜ್ಞಾನದಂತೆ.

ಹೇಗೆಂದರೆ, ಸ್ವಪ್ನಾವಸ್ಥೆಯಲ್ಲಿ ಮಾಯೆಯಿಂದ ಕಲ್ಪಿತವಾದ ಹೆಂಗಸಿನಿಂದ ಉಂಟಾದ ಬಂಧನನ್ನು ಹೋಗಲಾಡಿಸುವ ನಿದ್ರೆಯಿಂದೆಚ್ಚರಗೊಂಡವನ ಜ್ಞಾನಕ್ಕೆ ಮನೆಯ ಒಳಗಡೆ ಹಾಸಿಗೆಯಲ್ಲಿ ಸುಖವಾಗಿರುವ ದೇಹವೇ ವಿಷಯವು. ಇದು ನಿದ್ರೆ ಮಾಡುತ್ತಿರುವಾಗ ತಿಳಿಯಲ್ಪಡುವುದಿಲ್ಲ. ಸ್ವಪ್ನಮಾಯೆಯಿಂದ ವಿಜೃಂಭಿಸುವ ಅನರ್ಥದ ಪರಿಹಾರವೇ ಪ್ರಯೋಜನ. ಹೀಗೆಯೇ ಮನನ ಮುಂತಾದುದರಿಂದ ಉಂಟಾಗುವ ಪರೋಕ್ಷಜ್ಞಾನದ ಮೂಲಕವಾಗಿ, ಆರೋಪಿತವಾದ ಕರ್ತೃತ್ವ–ಭೋಕ್ತೃತ್ವ ಮುಂತಾದ ಅನರ್ಥವನ್ನು ಹೋಗಲಾಡಿಸುವ ವೇದಾಂತಶಾಸ್ತ್ರಕ್ಕೆ ಸಚ್ಚಿದಾನಂದರಸವೂ ಪ್ರತ್ಯಗಾತ್ಮವೂ ಆದ ಬ್ರಹ್ಮವೇ ವಿಷಯವು. "ಅಹಮ್" (ನಾನು) ಎನ್ನುವ ಅನುಭವದಿಂದ ಅದರ (ಬ್ರಹ್ಮದ) ನಿಶ್ಚಯವಾಗುವುದಿಲ್ಲ. ಅಧ್ಯಾಸನಿವೃತ್ತಿಯೇ ಪ್ರಯೋಜನವು. ಆದುದರಿಂದ ವೇದಾಂತಶಾಸ್ತ್ರವು "ನಿಷ್ಫಲವಾದುದು" ಎಂಬ ಹೇತುವು ಸಿದ್ಧಿಸುವುದಿಲ್ಲ ಎಂದು ನಿಶ್ಚಿತವಾಗುತ್ತದೆ. ಆದುದರಿಂದಲೇ "ಶ್ರುತಿಗಮ್ಯವಾದ ಆತ್ಮತತ್ತ್ವವು "ಅಹಮ್" ಎನ್ನುವ ಅನುಭವದಿಂದ ಗೊತ್ತಾಗುವುದಿಲ್ಲ. ಆಕಾಶದಲ್ಲಿ ಯಾದೃಚ್ಛಿಕವಾಗಿಯೂ (ಕಾಮದಿಂದಲಾದರೂ) ಭ್ರಮೆಗಳು ಉಂಟಾಗುತ್ತವೆ. ಮಿಥ್ಯಾಜ್ಞಾನರಹಿತನಾದ ಆತ್ಮನಲ್ಲಿ ಮೋಹವು ಉಂಟಾಗುವುದಿಲ್ಲ." ಎಂದು ಹೇಳುತ್ತಾರೆ.

ಇದರಿಂದ, "ಅಸಂದಿಗ್ಧವಾದುದರಿಂದ" ಎಂಬ ಈ ಹೇತುವೂ ಕೂಡ ಅಸಿದ್ಧವಾಗುತ್ತದೆಯೆಂದು ಖಚಿತವಾಗುತ್ತದೆ.

ಆತ್ಮಸ್ವರೂಪವಿಷಯೇ ವಿಪ್ರತಿಪತ್ತಯಃ

ಯದ್ಯಪಿ ಸರ್ವೈಃ ಪ್ರಾಣಿಭಿಃ ಪ್ರತ್ಯಗಾತ್ಮಾಸ್ತಿತ್ವಂ ಪ್ರತ್ಯೇತ್ಯಹಮಸ್ಮೀತಿ। ನಹಿ ಕಶ್ಚಿದಪಿ
ನಾಽಹಮಸ್ಮೀತಿ ವಿಪ್ರತಿಪದ್ಯತೇ। ಪ್ರತ್ಯಗಾತ್ಮೈವ ಬ್ರಹ್ಮ "ತತ್ತ್ವಮಸಿ" (ಛಾಂ. 6-8-7)
ಇತಿ ಸಾಮಾನಾಧಿಕರಣ್ಯಾತ್। ತಸ್ಮಾದಾತ್ಮತತ್ತ್ವಮಸನ್ದಿಗ್ಧಂ ಸಿದ್ಧಮ್। ತಥಾಪಿ "ಧರ್ಮಿಂ
ಪ್ರತಿ ವಿಪ್ರತಿಪನ್ನಾ ಬಹುವಿಧಾಃ" ಇತಿ ನ್ಯಾಯೇನ ವಿಶೇಷಪ್ರತಿಪತ್ತಿರುಪಪದ್ಯತ ಏವ।
ತಥಾಹಿ:—ಚೈತನ್ಯವಿಶಿಷ್ಟಂ ದೇಹಮಾತ್ಮೇತಿ ಲೋಕಾಯತಾ ಮನ್ಯನ್ತೇ। ಇನ್ದ್ರಿಯಾಣ್ಯಾತ್ಮೇ
ತ್ಯನ್ಯೇ। ಅನ್ತಃಕರಣಮಾತ್ಮೇತ್ಯಪರೇ। ಕ್ಷಣಭಙ್ಗುರಂ ಸನ್ತನ್ಯಮಾನಂ ವಿಜ್ಞಾನಮಾತ್ಮೇತಿ
ಬೌದ್ಧಾ ಬುದ್ಧ್ಯನ್ತೇ। ದೇಹಪರಿಮಾಣ ಆತ್ಮೇತಿ ಜೈನಾ ಜಿನಾಃ ಪ್ರತಿಜಾನತೇ। ಕರ್ತೃತ್ವಾದಿ
ವಿಶಿಷ್ಟಃ ಪರಮೇಶ್ವರಾದ್ಭಿನ್ನೋ ಜೀವಾತ್ಮೇತಿ ನೈಯಾಯಿಕಾದಯೋ ವರ್ಣಯನ್ತಿ। ದ್ರವ್ಯ
ಬೋಧಸ್ವಭಾವಮಾತ್ಮೇತ್ಯಾಚಾರ್ಯಾಃ ಪರಿಚಕ್ಷತೇ। ಭೋಕ್ತ್ರೈವ ಕೇವಲಂ ನ ಕರ್ತೇತಿ
ಸಾಙ್ಖ್ಯಾಃ ಸಙ್ಗಿರನ್ತೇ। ಚಿದ್ರೂಪಃ ಕರ್ತೃತ್ವಾದಿರಹಿತಃ ಪರಸ್ಮಾದಭಿನ್ನಃ ಪ್ರತ್ಯಗಾತ್ಮೇತ್ಯೌಪ
ನಿಷದಾ ಭಾಷನ್ತೇ।

ಏವಂ ಪ್ರಸಿದ್ಧೇ ಧರ್ಮಿಣಿ ವಿಶೇಷತೋ ವಿಪ್ರತಿಪತ್ತ್ಯಾ ತದ್ವಿಶೇಷಸಂಶಯೋ ಯುಜ್ಯತೇ।
ತಥಾಚ ಸನ್ದೇಹಸಮ್ಭವಾಜ್ಜಿಜ್ಞಾಸ್ಯತ್ವಂ ಬ್ರಹ್ಮಣಃ ಸಿದ್ಧಮ್। ತದಿತ್ಥಂ ಬ್ರಹ್ಮಣೋ
ವಿಚಾರ್ಯತ್ವಸಮ್ಭವೇನ ತದ್ವಿಚಾರಾತ್ಮಕಂ ಬ್ರಹ್ಮಮೀಮಾಂಸಾಶಾಸ್ತ್ರಮಾರಮ್ಭಣೀಯಮಿತಿ
ಯುಕ್ತಮ್। "ಜನ್ಮಾದ್ಯಸ್ಯ ಯತಃ" (ಬ್ರ.ಸೂ. 1-1-2) ಇತ್ಯಾದಿ ಸರ್ವಸ್ಯ ಶಾಸ್ತ್ರಸ್ಯೈತದ್ವಿ
ಚಾರಾಪೇಕ್ಷತ್ವಾಚ್ಛಾಸ್ತ್ರಪ್ರಥಮಾಧ್ಯಾಯಸಙ್ಗತಮಿದಮಧಿಕರಣಮ್।

ಆತ್ಮಸ್ವರೂಪದ ವಿಷಯದಲ್ಲಿ ವಿಪ್ರತಿಪತ್ತಿಗಳು

ಯದ್ಯಪಿ, ಪ್ರತಿಯೊಂದು ಪ್ರಾಣಿಗೂ ಜೀವಾತ್ಮನ ಇರುವಿಕೆಯು "ನಾನು ಇದ್ದೇನೆ"
ಎಂಬುದಾಗಿ ಗೊತ್ತಾಗುತ್ತದೆ; ಯಾರೂ ಕೂಡ "ನಾನು ಇಲ್ಲ" ಎಂಬುದಾಗಿ ವಿಪ್ರತಿಪತ್ತಿ
ಹೊಂದುವುದಿಲ್ಲವಷ್ಟೆ! ಪ್ರತ್ಯಗಾತ್ಮವೇ (ಜೀವಾತ್ಮನೇ) ಬ್ರಹ್ಮವು. ಏಕೆಂದರೆ, "ತತ್ತ್ವ
ಮಸಿ" (ಅದು ನೀನಾಗಿದ್ದೀಯೆ) (ಛಾಂ.6-8-7) ಎಂಬಲ್ಲಿ "ಸಾಮಾನಾಧಿಕರಣ್ಯವು"[20]
(ಅಭೇದವು) ಕಂಡುಬರುತ್ತದೆ. ಆದುದರಿಂದ ಆತ್ಮತತ್ತ್ವವು ಅಸಂದಿಗ್ಧವಾದುದು—
ಎಂದು ಹೇಳಬಹುದು. ಆದರೂ ಕೂಡ, "ಧರ್ಮದ (ಸ್ವರೂಪದ) ಬಗ್ಗೆ ವಿಪ್ರತಿಪನ್ನ
ರಾದವರು ನಾನಾ ವಿಧವಾಗಿದ್ದಾರೆ" ಎಂಬ ನ್ಯಾಯಕ್ಕನುಸಾರವಾಗಿ ವಿಶೇಷ ಪ್ರತಿ
ಪತ್ತಿಯು ಯುಕ್ತವಾಗಿಯೇ ಇದೆ. ಹೇಗೆಂದರೆ:—

ಚೈತನ್ಯವಿಶಿಷ್ಟವಾದ ದೇಹವೇ ಆತ್ಮವೆಂಬುದಾಗಿ ಲೋಕಾಯತಿಕರು (ಚಾರ್ವಾ
ಕರು) ತಿಳಿಯುತ್ತಾರೆ. ಇಂದ್ರಿಯಗಳೇ ಆತ್ಮವೆಂಬುದಾಗಿ ಬೇರೆಯವರು ಹೇಳುತ್ತಾರೆ.
ಅಂತಃಕರಣವೇ ಆತ್ಮವೆಂಬುದಾಗಿ ಮತ್ತೆ ಕೆಲವರು. ಕ್ಷಣಭಂಗುರವೂ ಪ್ರವಾಹ–
ರೂಪವೂ ಆದ ವಿಜ್ಞಾನವೇ ಆತ್ಮವೆಂಬುದಾಗಿ ಬೌದ್ಧರು ತಿಳಿಯುತ್ತಾರೆ. ದೇಹಪರಿ
ಮಾಣವುಳ್ಳವನು ಆತ್ಮವೆಂಬುದಾಗಿ ಜೈನರು ಭಾವಿಸುತ್ತಾರೆ. ಕರ್ತೃತ್ವಾದಿವಿಶಿಷ್ಟ

ನಾಗಿ ಪರಮೇಶ್ವರನಿಗಿಂತ ಬೇರೆಯಾದವನು ಜೀವಾತ್ಮ ಎಂಬುದಾಗಿ ನೈಯಾಯಿಕರೇ ಮೊದಲಾದವರು ಹೇಳುತ್ತಾರೆ. ದ್ರವ್ಯ ಮತ್ತು ಜ್ಞಾನಸ್ವಭಾವವುಳ್ಳವನು ಆತ್ಮನೆಂಬು ದಾಗಿ ಕುಮಾರಿಲಭಟ್ಟಾಚಾರ್ಯರು ಹೇಳುತ್ತಾರೆ. ಕೇವಲ ಭೋಕ್ತೃವೇ ಹೊರತು ಕರ್ತೃವಲ್ಲವೆಂಬುದಾಗಿ ಸಾಂಖ್ಯರು ಹೇಳುತ್ತಾರೆ ಚಿದ್ರೂಪನೂ ಕರ್ತೃತ್ವಾದಿರಹಿತನೂ ಆಗಿದ್ದು ಪರಮಾತ್ಮನಿಗಿಂತಲೂ ಬೇರೆಯಲ್ಲದವನೇ ಪ್ರತ್ಯಗಾತ್ಮ (ಜೀವಾತ್ಮ)ನೆಂಬುದಾಗಿ ಔಪನಿಷದರು (ವೇದಾಂತಿಗಳು) ಹೇಳುತ್ತಾರೆ.

ಈ ರೀತಿಯಾಗಿ ಪ್ರಸಿದ್ಧವಾದ ಧರ್ಮಿಯಲ್ಲಿ ವಿಶೇಷಪ್ರಕಾರವಾಗಿ ವಿಪ್ರತಿಪತ್ತಿಯಿರ ಲಾಗಿ ಆ ವಿಶೇಷಪ್ರಕಾರದ ಬಗ್ಗೆ ಸಂಶಯವು ಯುಕ್ತವಾಗಿಯೇ ಇದೆ. ಹೀಗೆ ಸಂಶಯವು ಇರುವುದರಿಂದ ಬ್ರಹ್ಮನಿಗೆ ಜಿಜ್ಞಾಸ್ಯತ್ವವು ಸಿದ್ಧವಾಗುತ್ತದೆ. ಈ ರೀತಿಯಾಗಿ ಬ್ರಹ್ಮನಿಗೆ ವಿಚಾರ್ಯತ್ವವು ಇರುವುದರಿಂದ ಬ್ರಹ್ಮವಿಚಾರಾತ್ಮಕವಾದ ಬ್ರಹ್ಮಮೀಮಾಂಸಾ ಶಾಸ್ತ್ರವು ಆರಂಭಿಸಲ್ಪಡಬೇಕು ಎಂಬುದು ಯುಕ್ತವಾಗಿಯೇ ಇದೆ.

"ಜನ್ಮಾದ್ಯಸ್ಯ ಯತಃ" (ಬ್ರ.ಸೂ.1-1-2) (ಯಾವುದರಿಂದ ಇದರ (ಜಗತ್ತಿನ) ಜನ್ಮಮೊದಲಾದುದೋ) ಎಂದು ಮೊದಲಾದ ಸಮಸ್ತಶಾಸ್ತ್ರವೂ ಈ ವಿಚಾರಪ್ರಯುಕ್ತ ವಾದುದರಿಂದ ಶಾಸ್ತ್ರದ ಮೊದಲನೆಯ ಅಧ್ಯಾಯಕ್ಕೆ ಸೇರಿದ ಅಧಿಕರಣವಿದು.

ಬ್ರಹ್ಮಣಿ ಆಗಮಃ ಪ್ರಮಾಣಮ್

ನನ್ವಿತ್ಥಮ್ಭೂತೇ ಬ್ರಹ್ಮಣಿ ಕಿಂ ಪ್ರಮಾಣಂ, ಪ್ರತ್ಯಕ್ಷಮನುಮಾನಮಾಗಮೋವಾ? ನ ಕದಾಚಿತ್ತತ್ರ ಪ್ರತ್ಯಕ್ಷಂ ಕ್ರಮತೇ। ಅತೀನ್ದ್ರಿಯತ್ವಾತ್। ನಾಽಪ್ಯನುಮಾನಮ್। ವ್ಯಾಪ್ತಸ್ಯ ಲಿಙ್ಗಸ್ಯಾಭಾವಾತ್। ನಾಽಪ್ಯಾಗಮಃ। "ಯತೋವಾಚೋನಿವರ್ತನ್ತೇ" (ತೈ.2-1-1) ಇತಿ ಶ್ರುತ್ಯೈವಾಗಮಗಮ್ಯತ್ವನಿಷೇಧಾತ್। ಉಪಮಾನಾದಿಕಮಶಕ್ಯಶಙ್ಕಮ್। ನಿಯತವಿಷಯತ್ವಾತ್। ತಸ್ಮಾದ್ಬ್ರಹ್ಮಣಿ ಪ್ರಮಾಣಂ ನ ಸಮ್ಭವತೀತಿಚೇತ್, ನೈವಂ ಮೋಚಃ। ಪ್ರತ್ಯಕ್ಷಾದ್ಯಸಮ್ಭವೇಽಪ್ಯಾಗಮಸ್ಯ ಸತ್ತ್ವಾತ್। "ಯತೋವಾಚೋನಿವರ್ತನ್ತೇ" ಇತಿ ವಾಗ್ಗೋಚರತ್ವನಿಷೇಧಾತ್ ಕಥಮೇತದಿತಿ ಚೇತ್—ಶ್ರುತಿರೇವ ನಿಷೇಧತಿ ವೇದಾನ್ತ ವೇದ್ಯತ್ವಂ ಬ್ರಹ್ಮಣಃ ಶ್ರುತಿರೇವ ವಿಧತ್ತೇ। ನ ಹಿ ವೇದಪ್ರತಿಪಾದಿತೇಽರ್ಥೇಽನುಪಪನ್ನೇ ವೈದಿಕಾನಾಂ ಬುದ್ಧಿಃ ಖಿದ್ಯತೇ। ಅಪಿತು ತದುಪಪಾದನಮಾರ್ಗಮೇವ ವಿಚಾರಯತಿ। ತಸ್ಮಾದುಭಯಮಪಿ ಪ್ರತಿಪಾದನೀಯಮ್।

ವಿಷಯತ್ವನಿಷೇಧಕಾನಿ ವಾಕ್ಯಾನಿ ವಾಕ್ಯಜನ್ಯವೃತ್ತಿವ್ಯಕ್ತಸ್ಫುರಣಲಕ್ಷಣಫಲಾಸಮ್ಭವ ವಿವಕ್ಷಯಾ ಪ್ರವೃತ್ತಾನಿ। ವಿಷಯತ್ವಬೋಧಕಾನಿ ತು ವೃತ್ತಿಜನ್ಯಾವರಣಭಙ್ಗಲಕ್ಷಣಫಲ ಸಮ್ಭವವಿವಕ್ಷಯಾ। ತದುಕ್ತಂ ಭಗವದ್ಭಿಃ:—

"ಅನಾಧೇಯಫಲತ್ವೇನ ಶ್ರುತೇರ್ಬ್ರಹ್ಮ ನ ಗೋಚರಃ।
ಪ್ರಮೇಯಂ ಪ್ರಮಿತೌ ತು ಸ್ಯಾದಾತ್ಮಾಕಾರಸಮರ್ಪಣಾತ್"॥ ಇತಿ।

"ನ ಪ್ರಕಾಶ್ಯಂ ಪ್ರಮಾಣೇನ ಪ್ರಕಾಶೋ ಬ್ರಹ್ಮಣಃ ಸ್ವಯಮ್।
ತಜ್ಜನ್ಯಾವೃತಿಭಙ್ಗತ್ವಾತ್ಪ್ರಮೇಯಮಿತಿ ಗೀಯತೇ॥" ಇತಿ ಚ।

ಬ್ರಹ್ಮವಿಷಯದಲ್ಲಿ ಆಗಮವು ಪ್ರಮಾಣ

ಹಾಗಾದರೆ, ಈ ರೀತಿಯಾಗಿರುವ ಬ್ರಹ್ಮನ ವಿಷಯದಲ್ಲಿ ಪ್ರಮಾಣವೇನು ಪ್ರತ್ಯಕ್ಷವೋ? ಅನುಮಾನವೋ? ಅಥವಾ ಆಗಮವೋ?

ಆ ಬ್ರಹ್ಮನ ವಿಷಯದಲ್ಲಿ ಪ್ರತ್ಯಕ್ಷಪ್ರಮಾಣವು ಎಂದಿಗೂ ಸಮರ್ಥವಾಗುವುದಿಲ್ಲ ಏಕೆಂದರೆ, ಬ್ರಹ್ಮವು ಅತೀಂದ್ರಿಯವಾದುದು. ಅನುಮಾನಪ್ರಮಾಣವೂ ಸಮರ್ಥ ವಾಗುವುದಿಲ್ಲ. ಏಕೆಂದರೆ, ವ್ಯಾಪ್ತವಾದ ಹೇತುವು ಇಲ್ಲ. ಆಗಮವೂ ಪ್ರಮಾಣವಾಗು ವುದಿಲ್ಲ. ಏಕೆಂದರೆ, "ಯತೋ ವಾಚೋ ನಿವರ್ತನ್ತೇ" (ತೈ.2-1-1) (ಮಾತುಗಳ ಯಾವುದರ ದೆಸೆಯಿಂದ ಹಿಂದಿರುಗುತ್ತವೆಯೋ) ಎಂಬುದಾಗಿ ಶ್ರುತಿಯೇ ತಿಳಿಸಲು ಸಾಧ್ಯ ವಿಲ್ಲವೆಂಬುದಾಗಿ ನಿಷೇಧಿಸಿದೆ.

ಉಪಮಾನ ಮೊದಲಾದ ಪ್ರಮಾಣಗಳನ್ನಂತೂ ಸಂಭಾವನೆಮಾಡಲೂ ಆಗುವುದಿಲ್ಲ ಏಕೆಂದರೆ, ಉಪಮಾನ ಮೊದಲಾದ ಪ್ರಮಾಣಗಳು ನಿಯತವಾದ (ಸೀಮಿತ) ವಿಷಯ ಗಳುಳ್ಳವುಗಳು. ಆದುದರಿಂದ ಬ್ರಹ್ಮನ ವಿಷಯದಲ್ಲಿ ಪ್ರಮಾಣದ ಸಂಭವವೇ ಇಲ್ಲ— ಎನ್ನುವುದಾದರೆ, ಹಾಗೆ ಹೇಳಕೂಡದು. ಏಕೆಂದರೆ ಪ್ರತ್ಯಕ್ಷಾದಿ–ಪ್ರಮಾಣಗಳ ಸಂಭವ ವಿಲ್ಲದಿದ್ದರೂ ಆಗಮವು ಪ್ರಮಾಣವಾಗಿದೆ. "ಯತೋವಾಚೋನಿವರ್ತನ್ತೇ" ಎಂಬುದಾಗಿ ವಾಕ್‌ಗೆ ವಿಷಯವಾಗುವುದನ್ನು ನಿಷೇಧಿಸಿರುವುದರಿಂದ ಇದು ಹೇಗಾಗುತ್ತದೆ? ಎಂದು ಕೇಳಬಹುದು. ಆದರೆ, ಶ್ರುತಿಯೇ ಬ್ರಹ್ಮನಿಗೆ ವೇದಾಂತವೇದ್ಯತ್ವವನ್ನು ನಿಷೇಧಿಸುತ್ತದೆ ಮತ್ತು ಶ್ರುತಿಯೇ ವೇದಾಂತವೇದ್ಯತ್ವವನ್ನು ವಿಧಿಸುತ್ತದೆ. ವೇದಪ್ರತಿಪಾದಿತವಾದ ಅರ್ಥಕ್ಕೆ ಅನುಪಪತ್ತಿಯುಂಟಾದರೆ, ವೈದಿಕರ ಬುದ್ಧಿಯು ಖೇದಹೊಂದುವುದಿಲ್ಲ. ಆದರೆ, ಅದನ್ನು ಉಪಪಾದನೆಮಾಡುವ ಮಾರ್ಗವನ್ನೇ ವಿಚಾರಮಾಡುತ್ತದೆ. ಆದುದ ರಿಂದ "ವಿಧಿ–ನಿಷೇಧಗಳೆರಡನ್ನೂ"[21] ಪ್ರತಿಪಾದಿಸಬೇಕು.

ವಿಷಯತ್ವವನ್ನು ನಿಷೇಧಿಸುವ ವಾಕ್ಯಗಳು ವಾಕ್ಯದಿಂದ (ವಾಕ್ಯಶ್ರವಣದಿಂದ) ಉಂಟಾಗುವ ಅಂತಃಕರಣವೃತ್ತಿಯಿಂದ ವ್ಯಕ್ತವಾಗುವ ಸ್ಫುರಣರೂಪವಾದ ಫಲವ ಅಸಂಭವವೆಂದು ತಿಳಿಸುವ ಉದ್ದೇಶದಿಂದ ಹೊರಟಿವೆ. ವಿಷಯತ್ವವನ್ನು ಬೋಧಿಸುವ ವಾಕ್ಯಗಳು ಅಂತಃಕರಣವೃತ್ತಿಯಿಂದುಂಟಾಗುವ ಆವರಣ–ಭಂಗರೂಪವಾದ ಫಲವು ಇರುವುದನ್ನು ತಿಳಿಸುವ ಉದ್ದೇಶದಿಂದ ಹೊರಟಿವೆ. ಇದನ್ನೇ ಪೂಜ್ಯರು "ಉಂಟುಮಾಡ ಬೇಕಾದ ಫಲವಿಲ್ಲದುದರಿಂದ ಶ್ರುತಿಗೆ ಬ್ರಹ್ಮವು ವಿಷಯವಾಗುವುದಿಲ್ಲ. ಬುದ್ಧಿಯಲ್ಲಿ ತನ್ನ ಆಕಾರವನ್ನು ಸಮರ್ಪಿಸುವುದರಿಂದ ಪ್ರಮೇಯವಾಗಬಹುದು. ಬ್ರಹ್ಮವು ಪ್ರಮಾಣ ದಿಂದ ಪ್ರಕಾಶಿಸಲ್ಪಡುವುದಿಲ್ಲ; ಪ್ರಕಾಶವು ಬ್ರಹ್ಮನ ಸ್ವಭಾವವು. ಪ್ರಮಾಣದಿಂದ

ಉಂಟಾಗುವ ಆವರಣಭಂಗದ ಪ್ರಯುಕ್ತವಾಗಿ ಪ್ರಮೇಯವೆಂಬುದಾಗಿ ಕರೆಯಲ್ಪಡುತ್ತದೆ”-ಎಂಬುದಾಗಿ ಹೇಳಿದ್ದಾರೆ.

ಸಿದ್ಧಾರ್ಥಬೋಧಕೋ ವೇದಃ ನ ಪ್ರಮಾಣಮಿತಿ ಪೂರ್ವಪಕ್ಷಃ

ನನು ಸ್ಯಾದೇಷ ಮನೋರಥೋ ಯದಿ ಸಿದ್ಧೇಽರ್ಥೇ ವೇದಸ್ಯ ಪ್ರಾಮಾಣ್ಯಂ ಸಿಧ್ಯೇತ್। ಸಙ್ಗತಿಗ್ರಹಣಾಯತ್ತತ್ವಾತ್ಪ್ರಾಮಾಣ್ಯನಿಶ್ಚಯಸ್ಯ। ಸಙ್ಗತಿಗ್ರಹಣಸ್ಯ ಚ ವೃದ್ಧವ್ಯವಹಾರಾಯತ್ತತ್ವಾತ್। ವೃದ್ಧವ್ಯವಹಾರಸ್ಯ ಚ ಲೋಕೇ ಕಾರ್ಯೈಕನಿಯತತ್ವಾತ್। ನಹ್ಯಸ್ತಿ ಸಮ್ಭವಃ, ಶಬ್ದಾನಾಂ ಕಾರ್ಯೇಽರ್ಥೇ ಸಙ್ಗತಿಗ್ರಹಃ, ಸಿದ್ಧಾರ್ಥಾಭಿಧಾಯಕತ್ವಂ, ತತ್ರ ಪ್ರಾಮಾಣ್ಯಮಿತಿ। ನಹಿ ತುರಙ್ಗತ್ವೇ ಗೃಹೀತಸಙ್ಗತಿಕಂ ತುರಙ್ಗಪದಂ ಗೋತ್ವಮಾಚಷ್ಟೇ, ತತ್ರ ವಾ ಪ್ರಾಮಾಣ್ಯಂ ಭಜತೇ। ತಸ್ಮಾತ್ಕಾರ್ಯೇ ಗೃಹೀತಸಙ್ಗತಿಕಾನಾಂ ಶಬ್ದಾನಾಂ ಕಾರ್ಯ ಏವ ಪ್ರಾಮಾಣ್ಯಮ್।

ನನು ಮುಖವಿಕಾಸಾದಿಲಿಙ್ಗಾದ್ಧರ್ಷಹೇತುಂ ಪ್ರಸಿದ್ಧಾರ್ಥಮನುಮಾಯ ಯತ್ರ ಶಬ್ದಸ್ಯ ಸಙ್ಗತಿಗ್ರಹೋ ಯಥಾ ಪುತ್ರಸ್ತೇ ಜಾತ ಇತ್ಯಾದಿಷು ತತ್ರಾವಶ್ಯಂ ಕಾರ್ಯಮನ್ತರೇಣೈವ ಶಬ್ದಸ್ಯ ಸಿದ್ಧೇಽರ್ಥೇ ಪ್ರಾಮಾಣ್ಯಮಾಶ್ರೀಯತ ಇತಿ ಚೇನ್ನ। ಪುತ್ರಜನ್ಮವದೇವ ಪ್ರಿಯಾಸುಖಪ್ರಸವಾದೇರನೇಕಸ್ಯ ಹರ್ಷಹೇತೋರುಪಸ್ಥಿತೀಯಮಾನತ್ವೇನ ಪರಿಶೇಷಾವಧಾರಣಾನುಪಪತ್ತೇಃ। ಪುತ್ರಸ್ತೇ ಜಾತ ಇತ್ಯಾದಿಷು ಸಿದ್ಧಾರ್ಥಪರೇಷು ಪ್ರಯೋಗೇಷು ದ್ವಾರಂ ದ್ವಾರಮಿತ್ಯಾದಿವತ್ ಕಾರ್ಯಾಧ್ಯಾಹಾರೇಣ ಪ್ರಯೋಗೋಪಪತ್ತೇಶ್ಚ।

ಶಾಸ್ತ್ರತ್ವಪ್ರಸಿದ್ಧ್ಯಾ ಚ ನ ವೇದಾನ್ತಾನಾಂ ಸಿದ್ಧಾರ್ಥಪರತ್ವಮ್। ಪ್ರವೃತ್ತಿನಿವೃತ್ತಿಪರಾಣಾಮೇವ ವಾಕ್ಯಾನಾಂ ಶಾಸ್ತ್ರತ್ವಪ್ರಸಿದ್ಧೇಃ। ತದುಕ್ತಂ ಭಟ್ಟಾಚಾರ್ಯೈಃ :—

“ಪ್ರವೃತ್ತಿರ್ವಾ ನಿವೃತ್ತಿರ್ವಾ ನಿತ್ಯೇನ ಕೃತಕೇನ ವಾ।
ಪುಂಸಾಂ ಯೇನೋಪದಿಶ್ಯೇತ ತಚ್ಛಾಸ್ತ್ರಮಭಿಧೀಯತೇ॥” ಇತಿ

ನಚೈತೇಷಾಂ ಸ್ವರೂಪಪರತ್ವೇ ಪ್ರಯೋಜನಮಸ್ತಿ। ಶ್ರುತವೇದಾನ್ತಾರ್ಥಸ್ಯಾಪಿ ಪುಂಸಃ ಸಾಂಸಾರಿಕಧರ್ಮಾಣಾಮನಿವೃತ್ತೇಃ। ತಸ್ಮಾದ್ವೇದಾನ್ತಾನಾಮಪ್ಯಾತ್ಮಾ ಜ್ಞಾತವ್ಯ ಇತಿ ಸಮಾಮ್ನಾತೇನ ವಿಧಿನೈಕವಾಕ್ಯತಾಮಾಶ್ರಿತ್ಯ ಕಾರ್ಯಪರತ್ವೈವಾಶ್ರಯಣೀಯೇತಿ ಸಿದ್ಧಮ್। ತತಶ್ಚ ಕೇವಲಸಿದ್ಧರೂಪೇ ಬ್ರಹ್ಮಣಿ ವೇದಾನ್ತಾನಾಂ ಪ್ರಾಮಾಣ್ಯಂ ನ ಸಿಧ್ಯತೀತಿ ಚೇತ್—

ಸಿದ್ಧಾರ್ಥಬೋಧಕವೇದವು ಪ್ರಮಾಣವಲ್ಲವೆಂದು ಪೂರ್ವಪಕ್ಷ

“ಸಿದ್ಧವಾದ”[22] (ನಿಷ್ಪನ್ನವಾದ) ಅರ್ಥದಲ್ಲಿ ವೇದಕ್ಕೆ ಪ್ರಾಮಾಣ್ಯವು ಸಿದ್ಧಿಸುವುದಾದರೆ ಆಗ ಈ ಮನೋರಥವು ಫಲಿಸೀತು! ಏಕೆಂದರೆ, ಪ್ರಾಮಾಣ್ಯ ನಿಶ್ಚಯವಾಗಬೇಕಾದರೆ, ಸಂಗತಿಯು (ಶಬ್ದಾರ್ಥಗಳ ಸಂಬಂಧವು) ಗೊತ್ತಿರಬೇಕು. ಸಂಗತಿಯು ಗೊತ್ತಾಗುವುದಾದರೋ ವೃದ್ಧವ್ಯವಹಾರದಿಂದ. ಲೋಕದಲ್ಲಿ ವೃದ್ಧವ್ಯವಹಾರವು ಕಾರ್ಯ ಅಂದರೆ ಕರ್ತವ್ಯರೂಪವಾದ ಅರ್ಥದಲ್ಲಿ ಮಾತ್ರ ನಿಯತವಾಗಿದೆ. ಶಬ್ದಗಳಿಗೆ

ಸಂಗತಿಯಾದರೋ ಕಾರ್ಯರೂಪವಾದ ಅರ್ಥದಲ್ಲಿ; ಶಬ್ದಗಳು ಬೋಧಿಸುವುದಾದರೋ ಸಿದ್ಧವಾದ ಅರ್ಥವನ್ನು; ಆ ಸಿದ್ಧವಾದ ಅರ್ಥದಲ್ಲಿ ಶಬ್ದಗಳಿಗೆ ಪ್ರಾಮಾಣ್ಯವನ್ನು ಹೇಳುವುದು—ಎಂಬುದು ಸರಿಯಲ್ಲ. ಏಕೆಂದರೆ, ತುರಂಗತ್ವರೂಪಾರ್ಥದಲ್ಲಿ ಗೃಹೀತವಾದ ಸಂಗತಿಯುಳ್ಳ ತುರಂಗಪದವು ಗೋತ್ವವನ್ನು ಬೋಧಿಸುವುದಾಗಲಿ ಅಥವಾ ಆ ಗೋತ್ವರೂಪಾರ್ಥದಲ್ಲಿ ಪ್ರಾಮಾಣ್ಯವನ್ನು ಹೊಂದುವುದಾಗಲಿ ಇಲ್ಲವಷ್ಟೆ. ಆದುದರಿಂದ ಕಾರ್ಯದಲ್ಲಿ ಗೃಹೀತವಾದ ಸಂಗತಿಯುಳ್ಳ ಶಬ್ದಗಳಿಗೆ ಕಾರ್ಯರೂಪವಾದ ಅರ್ಥದಲ್ಲಿಯೇ ಪ್ರಾಮಾಣ್ಯವು ಇರುವುದು.

ಮುಖವಿಕಾಸ ಮುಂತಾದ ಕಾರಣಗಳಿಂದ ಸಂತೋಷಕ್ಕೆ ಹೇತುವಾದ ಪ್ರಸಿದ್ಧ ಅರ್ಥವನ್ನು ಅನುಮಾನ ಮಾಡಿ (ಊಹಿಸಿ) ಶಬ್ದಕ್ಕೆ ಸಂಗತಿಯನ್ನು ಗ್ರಹಿಸುವ; ಅಂದರೆ, "ನಿನಗೆ ಗಂಡು ಮಗು ಹುಟ್ಟಿದೆ" ಎಂದು ಮುಂತಾದೆಡೆಗಳಲ್ಲಿ ಕಾರ್ಯವಿಲ್ಲದೆಯೇ ಶಬ್ದಕ್ಕೆ ಸಿದ್ಧವಾದ ಅರ್ಥದಲ್ಲಿ ಅವಶ್ಯವಾಗಿ ಪ್ರಾಮಾಣ್ಯವು ಅಂಗೀಕರಿಸಲ್ಪಡುತ್ತದೆಯಲ್ಲವೆ? ಎಂದು ಹೇಳಕೂಡದು. ಏಕೆಂದರೆ, ಪುತ್ರೋತ್ಪತ್ತಿಯಂತೆಯೇ ಪ್ರಿಯೆಯ ಸುಖಪ್ರಸವ ಮುಂತಾದ ಅನೇಕವಾದ ಹರ್ಷಕಾರಣಗಳು ಇರಬಹುದಾದುದರಿಂದ "ಪರಿಶೇಷವನ್ನು"[23] ನಿಶ್ಚಯಮಾಡುವುದು ಯುಕ್ತವಾಗುವುದಿಲ್ಲ. ಮತ್ತು, "ನಿನಗೆ ಗಂಡುಮಗು ಹುಟ್ಟಿತು" ಎಂದು ಮುಂತಾದ ಸಿದ್ಧಾರ್ಥವನ್ನು ತಿಳಿಸುವ ವಾಕ್ಯಪ್ರಯೋಗಗಳಿಗೆ "ಬಾಗಿಲು, ಬಾಗಿಲು" ಎಂದು ಮುಂತಾದೆಡೆಯಲ್ಲಿರುವಂತೆ ಕಾರ್ಯವನ್ನು ಅಧ್ಯಾಹಾರ ಮಾಡಿಕೊಳ್ಳುವುದರಿಂದ ಉಪಪತ್ತಿಯನ್ನು ಹೇಳಬಹುದು.

ವೇದಾಂತಗಳಿಗೆ ಶಾಸ್ತ್ರತ್ವವು ಪ್ರಸಿದ್ಧವಾಗಿರುವುದರಿಂದ ಅವು ಸಿದ್ಧಾರ್ಥ ಬೋಧಕಗಳಲ್ಲ. ಪ್ರವೃತ್ತಿ ಅಥವಾ ನಿವೃತ್ತಿಯನ್ನು ಬೋಧಿಸುವ ವಾಕ್ಯಗಳಿಗೇ ಶಾಸ್ತ್ರತ್ವವು ಪ್ರಸಿದ್ಧವಾಗಿರುವುದು. ಆದ್ದರಿಂದಲೇ ಕುಮಾರಿಲಭಟ್ಟಾಚಾರ್ಯರು, "ಪುರುಷರಿಗೆ ನಿತ್ಯವಾದ (ಅಪೌರುಷೇಯವಾದ) ಅಥವಾ ಕೃತಕವಾದ ಯಾವ ವಾಕ್ಯದಿಂದ ಪ್ರವೃತ್ತಿ ಅಥವಾ ನಿವೃತ್ತಿಯು ಉಪದೇಶಿಸಲ್ಪಡುತ್ತದೆಯೋ ಅದು ಶಾಸ್ತ್ರವೆಂದು ಕರೆಯಲ್ಪಡುತ್ತದೆ" ಎಂದು ಹೇಳಿದ್ದಾರೆ.

ಸಿದ್ಧವಾದ ವಸ್ತುವಿನ ಸ್ವರೂಪವನ್ನು ತಿಳಿಸುವುದರಿಂದಲಾದರೂ ಈ ವಾಕ್ಯಗಳಿಗೆ ಪ್ರಯೋಜನವೇನೂ ಇಲ್ಲ. ಏಕೆಂದರೆ ವೇದಾಂತಾರ್ಥವನ್ನು ಶ್ರವಣಮಾಡಿದ ಪುರುಷನಿಗೂ ಕೂಡ ಪ್ರಾಪಂಚಿಕ ಧರ್ಮಗಳು ನಿವೃತ್ತವಾಗುವುದಿಲ್ಲ. ಆದುದರಿಂದ ವೇದಾಂತವಾಕ್ಯಗಳಿಗೂ ಕೂಡ "ಆತ್ಮನು ತಿಳಿಯಲ್ಪಡಬೇಕು" ಎಂದು ಹೇಳಿರುವ ವಿಧಿವಾಕ್ಯದೊಡನೆ ಏಕವಾಕ್ಯತೆಯನ್ನು ಇಟ್ಟುಕೊಂಡು ಕಾರ್ಯಬೋಧಕತ್ವವನ್ನೇ ಆಶ್ರಯಿಸಬೇಕು ಎಂದು ಸಿದ್ಧವಾಗುತ್ತದೆ. ಆದ್ದರಿಂದ ಕೇವಲ ಸಿದ್ಧರೂಪವಾದ ಬ್ರಹ್ಮವಸ್ತುವಿನಲ್ಲಿ ವೇದಾಂತಗಳಿಗೆ ಪ್ರಾಮಾಣ್ಯವು ಸಿದ್ಧಿಸುವುದಿಲ್ಲ—ಎಂದು ಹೇಳುವುದಾದರೆ ಇದಕ್ಕೆ ಸಮಾಧಾನವು ಹೇಳಲ್ಪಡುತ್ತದೆ.

ಸಿದ್ಧಾರ್ಥಬೋಧಕೋವೇದಃಪ್ರಮಾಣಮಿತಿ ಸಿದ್ಧಾನ್ತಃ

ಅತ್ರ ಪ್ರತಿವಿಧೀಯತೇ। ನ ತಾವತ್ ಸಿದ್ಧೇ ವ್ಯುತ್ಪತ್ತ್ಯಸಿದ್ಧಿಃ। ಪ್ರಾಗುನ್ನೀತಯಾ ನೀತ್ಯಾ ಪುತ್ರಸ್ತೇಜಾತ ಇತಿ ವಾಕ್ಯಾತ್ಸಿದ್ಧಪರಾದಪಿ ವ್ಯುತ್ಪತ್ತಿಸಿದ್ಧೇಃ। ನ ಚ ಪರಿಶೇಷಾವಧಾರಣಾನುಪಪತ್ತಿಃ। ಪ್ರಿಯಾಸುಖಪ್ರಸವಾದೇರಪಿ ಸಮ್ಭವಾದಿತಿ ಭಣಿತವ್ಯಮ್। ಪುತ್ರಪದಾಙ್ಕಿತಪಟಪ್ರದರ್ಶನವತ್ ಪ್ರಿಯಾಸುಖಪ್ರಸವಾದಿಸೂಚಕಾಭಾವಾತ್। ಪುತ್ರಜನ್ಮೈವ ತತ್ಸೂಚಕಮಿತಿಚೇತ್—ಪ್ರಥಮಪ್ರತೀತಪುತ್ರಜನ್ಮಪರಿತ್ಯಾಗೇ ಕಾರಣಾಭಾವಾತ್। ಪುತ್ರಜನನಸ್ಯೈವಾಧಿಕಾನನ್ದಹೇತುತ್ವಾಚ್ಚ।

"ಪುತ್ರೋತ್ಪತ್ತಿವಿಪತ್ತಿಭ್ಯಾಂ ನಾಪರಂ ಸುಖದುಃಖಯೋಃ।"

ಇತಿ ವಿದ್ಯಮಾನತ್ವಾತ್। ತಥಾಚಾಚಕಥಚ್ಚಿತ್ಸುಖಾಚಾರ್ಯಃ :—

"ದೃಷ್ಟಚೈತ್ರಸುತೋತ್ಪತ್ತೇಸ್ತತ್ಪದಾಙ್ಕಿತವಾಸಸಾ।
ವಾರ್ತಾಹಾರೇಣ ಯಾತಸ್ಯ ಪರಿಶೇಷವಿನಿಶ್ಚಿತೇಃ॥" ಇತಿ। (ಚಿತ್ಸು.ಪೃ.88)

ಯದುಕ್ತಂ ಸಿದ್ಧಾರ್ಥಪರೇಷು ಕಾರ್ಯಾಧ್ಯಾಹಾರ ಇತಿ ತದಯುಕ್ತಮ್। ಮುಖ್ಯಾರ್ಥವಿಷಯತಯಾ ಸಿದ್ಧೇಽಪಿ ಪ್ರಯೋಗಸಿದ್ಧಾವಧ್ಯಾಹಾರಾನುಪಪತ್ತೇಃ।

ಯದುಕ್ತಂ ಶಾಸ್ತ್ರತ್ವಪ್ರಸಿದ್ಧ್ಯೈಚ ನ ಸ್ವರೂಪಪರತ್ವಮಿತಿ ತದಪ್ಯಯುಕ್ತಮ್। ಹಿತಶಾಸನಾದಪಿ ಶಾಸ್ತ್ರತ್ವೋಪಪತ್ತೇಃ।

ನ ಚ ಪ್ರಯೋಜನಾಭಾವಃ। ಶ್ರುತಮತವೇದಾನ್ತಜನ್ಯಾದ್ವಿತೀಯಾತ್ಮವಿಜ್ಞಾನಾಭ್ಯಾಸೇನ ವಿದ್ಯೋದಯೇ ಸಂಸಾರನಿದಾನಾವಿದ್ಯಾನಿವೃತ್ತ್ಯುಪಲಕ್ಷಿತಬ್ರಹ್ಮಾತ್ಮತಾಲಕ್ಷಣಪರಮಪುರುಷಾರ್ಥಸಿದ್ಧೇಃ। ನಚಾತ್ರ ವಿಧಿಃ ಸಮ್ಭವತಿ। ವಿಕಲ್ಪಾಸಹತ್ವಾತ್। ತಥಾಹಿ:—ಕಿಂ ಶಾಬ್ದಜ್ಞಾನಂ ವಿಧೇಯಂ, ಕಿಂ ವಾ ಭಾವನಾತ್ಮಕಮಾಹೋಸ್ವಿತ್ ಸಾಕ್ಷಾತ್ಕಾರರೂಪಮ್?

ನಾದ್ಯಃ। ವಿದಿತಪದಾರ್ಥಸಙ್ಗತಿಕಸ್ಯಾಧೀತಶಬ್ದನ್ಯಾಯತತ್ತ್ವಸ್ಯಾನ್ತರೇಣಾಪಿ ವಿಧಿಂ ಶಬ್ದಾದೇವೋಪಪತ್ತೇಃ।

ನಾಪಿ ದ್ವಿತೀಯಃ। ಭಾವನಾಯಾ ಜ್ಞಾನಪ್ರಕರ್ಷಹೇತುಭಾವಸ್ಯಾನ್ವಯವ್ಯತಿರೇಕಸಿದ್ಧತಯಾ ಪ್ರಾಪ್ತತ್ವೇನಾವಿಧೇಯತ್ವಾತ್। ಅಪ್ರಾಪ್ತಪ್ರಾಪಕಸ್ಯೈವ ವಿಧಿತ್ವಾಙ್ಗೀಕಾರಾತ್।

ತೃತೀಯೇ ಸಾಕ್ಷಾತ್ಕಾರಃ ಕಿಂ ಬ್ರಹ್ಮಸ್ವರೂಪಃ, ಕಿಂ ವಾನ್ತಃಕರಣಪರಿಣಾಮಭೇದಃ?

ನಾದ್ಯಃ। ತಸ್ಯ ನಿತ್ಯತ್ವೇನಾವಿಧೇಯತ್ವಾತ್। ನಾಪಿ ದ್ವಿತೀಯಃ। ಆನನ್ದಸಾಕ್ಷಾತ್ಕಾರರೂಪತಯಾ ಫಲತ್ವೇನಾವಿಧೇಯತ್ವಾತ್।

ತಸ್ಮಾಜ್ "ಜ್ಞಾತವ್ಯ" ಇತ್ಯಾದೀನಾಮವಿಧಾಯಕತ್ವಾತ್ "ಅರ್ಹೇಕೃತ್ಯತೃಚಶ್ಚ" (ಪಾಣಿ.ಸೂ.3-3-169) ಇತಿ ಕೃತ್ಯಪ್ರತ್ಯಯಾನಾಮರ್ಹಾರ್ಥೇ ವಿಧಾನಾದರ್ಹಾರ್ಥತ್ವೈವ ವ್ಯಾಖ್ಯೇಯಾ। ತಥಾ ಚ ಸರ್ವೇಷಾಂ ವೇದಾನ್ತವಾಕ್ಯಾನಾಮುಪಕ್ರಮೋಪಸಂಹಾರಾದಿಷಡ್ವಿಧತಾತ್ಪರ್ಯೋಪೇತತ್ವಾನ್ನಿತ್ಯಶುದ್ಧಬುದ್ಧಮುಕ್ತಸ್ವಭಾವಬ್ರಹ್ಮಾತ್ಮಪರತ್ವಮಾಸ್ಥೇಯಮ್ ।

ಸಿದ್ಧಾರ್ಥಬೋಧಕವೇದವು ಪ್ರಮಾಣವೆಂಬುದಾಗಿ ಸಿದ್ಧಾಂತ

ಮೊದಲನೆಯದಾಗಿ ಸಿದ್ಧರೂಪವಾದ ಅರ್ಥದಲ್ಲಿ ವ್ಯುತ್ಪತ್ತಿಯು (ಶಬ್ದಾರ್ಥ ಸಂಬಂಧಪರಿಜ್ಞಾನವು) ಉಂಟಾಗುವುದಿಲ್ಲವೆಂಬುದು ಸರಿಯಲ್ಲ. ಏಕೆಂದರೆ, ಹಿಂದೆ ಹೇಳಿದ ಪ್ರಕಾರ, "ನಿನಗೆ ಗಂಡುಮಗು ಹುಟ್ಟಿದೆ" ಎಂಬ ವಾಕ್ಯವು ಸಿದ್ಧಾರ್ಥಬೋಧಕ ವಾಕ್ಯವಾಗಿದ್ದರೂ ವ್ಯುತ್ಪತ್ತಿಯು ಉಂಟಾಗುತ್ತದೆ. ಪ್ರಿಯೆಯು ಸುಖಪ್ರಸವ ಮುಂತಾದ ಕಾರಣಗಳೂ ಇರಬಹುದಾದ್ದರಿಂದ ಪರಿಶೇಷವನ್ನು ನಿಶ್ಚಯಮಾಡುವುದು ಸರಿಯಲ್ಲ ವೆಂದು ಹೇಳಕೂಡದು. ಪುತ್ರ ಎಂಬ ಪದವನ್ನು ಬರೆದಿರುವ ಬಟ್ಟೆಯನ್ನು (ಅಥವಾ ಕಾಗದವನ್ನು) ತೋರಿಸಿ ಹೇಳುತ್ತಿರುವಾಗ, ಪ್ರಿಯೆಯು ಸುಖಪ್ರಸವ ಮೊದಲಾದುದನ್ನು ಸೂಚಿಸುವಂತಹುದು ಯಾವುದೂ ಇರುವುದಿಲ್ಲ. ಪುತ್ರಜನನವೇ ಅದಕ್ಕೆ ಸೂಚಕವೆಂದು ಹೇಳುವುದಾದರೆ, ಮೊದಲಿಗೆ ತೋರಿದ ಪುತ್ರಜನನವನ್ನು ಬಿಡಲು ಕಾರಣವೇನು? ಪುತ್ರಜನನವೇ ಹೆಚ್ಚು ಸಂತೋಷಕ್ಕೆ ಕಾರಣವಲ್ಲವೆ? "ಪುತ್ರೋತ್ಪತ್ತಿಗಿಂತಲೂ ಬೇರೆ ಯಾದ ಸುಖವಿಲ್ಲ; ಪುತ್ರವಿಪತ್ತಿ (ನಾಶ) ಗಿಂತಲೂ ಬೇರೆಯಾದ ದುಃಖವಿಲ್ಲ." ಎಂಬ ಲೋಕೋಕ್ತಿಯೇ ಇದೆಯಷ್ಟೆ! ಆದ್ದರಿಂದಲೇ ಚಿತ್ಸುಖಾಚಾರ್ಯರು, "ಚೈತ್ರನಿಗೆ ಪುತ್ರ ಜನನವಾಗಿರುವುದನ್ನು ಕಂಡವನೂ, "ಪುತ್ರ" ಎಂಬ ಪದವನ್ನು ಗುರುತು ಮಾಡಿರುವ ಬಟ್ಟೆಯುಳ್ಳ ಸಂದೇಶವಾಹಕನೊಡನೆ ಇರುವವನೂ ಆದ ಪುರುಷನಿಗೆ ಪರಿಶೇಷ ನಿಶ್ಚಯವಿರುತ್ತದೆ" (ಚಿತ್ಸು. ಪು.88) ಎಂದು ಹೇಳಿದ್ದಾರೆ.

ಮತ್ತು, ಸಿದ್ಧಾರ್ಥಬೋಧಕವಾದ ವಾಕ್ಯಗಳಲ್ಲಿ ಕಾರ್ಯಾಧ್ಯಾಹಾರವನ್ನು ಮಾಡಿ ಕೊಳ್ಳಬೇಕು ಎಂದು ಹೇಳಿದುದು ಸರಿಯಲ್ಲ. ಏಕೆಂದರೆ, ಸಿದ್ಧಾರ್ಥಬೋಧಕ ವಾಕ್ಯ ದಲ್ಲಿಯೂ ಕೂಡ ಮುಖ್ಯಾರ್ಥವಾಚಕತ್ವವು ಇರುವುದರಿಂದ ಪ್ರಯೋಗವು ಸಿದ್ಧಿಸುವ ಕಾರಣ, ಅಧ್ಯಾಹಾರಮಾಡಿಕೊಳ್ಳುವುದು ಸಂಗತವಾಗುವುದಿಲ್ಲ.

ಮತ್ತು ಶಾಸ್ತ್ರತ್ವವು ಪ್ರಸಿದ್ಧವಾಗಿರುವುದರಿಂದ ವೇದಾಂತವಾಕ್ಯಗಳಿಗೆ ಸ್ವರೂಪ ಬೋಧಕತ್ವವಿಲ್ಲ ಎಂದು ಹೇಳುವುದು ಯುಕ್ತವಾಗುವುದಿಲ್ಲ. ಹಿತವಾದುದನ್ನು ಶಾಸನ ಮಾಡುವಿಕೆಯಿಂದಲೂ ಶಾಸ್ತ್ರತ್ವವು ಉಪಪನ್ನವಾಗುತ್ತದೆ.

ಪ್ರಯೋಜನವಿಲ್ಲವೆಂಬುದೂ ಸರಿಯಲ್ಲ. ಏಕೆಂದರೆ, ಶ್ರವಣ-ಮನನ ಮಾಡಿದ ವೇದಾಂತದಿಂದ ಹುಟ್ಟಿದ ಅದ್ವಿತೀಯಾತ್ಮವಿಜ್ಞಾನದ ಅಭ್ಯಾಸದಿಂದ ವಿದ್ಯಾವಿರ್ಭಾವ ವಾಗಲಾಗಿ ಸಂಸಾರಕ್ಕೆ ಮೂಲಕಾರಣವಾದ ಅವಿದ್ಯೆಯು ನಾಶವಾಗಿ ಬ್ರಹ್ಮಾತ್ಮಭಾವ ರೂಪವಾದ ಪರಮಪುರುಷಾರ್ಥವು ಸಿದ್ಧಿಸುತ್ತದೆ. ಈ ವಿಷಯದಲ್ಲಿ ವಿಧಿಯು ಸಂಭವಿಸು ವುದಿಲ್ಲ. ಏಕೆಂದರೆ, ಇಲ್ಲಿ ಉಂಟಾಗುವ ವಿಕಲ್ಪಗಳು ಸರಿಹೊಂದುವುದಿಲ್ಲ. ಹೇಗೆಂದರೆ:— ಶಾಬ್ದಜ್ಞಾನವೇ ವಿಧೇಯವಾದುದೋ? ಅಥವಾ ಭಾವನಾತ್ಮಕವಾದ ಜ್ಞಾನವೋ? ಅಥವಾ ಸಾಕ್ಷಾತ್ಕಾರರೂಪವಾದುದೋ? ಎಂದು ವಿಚಾರಮಾಡಬೇಕು.

ಈ ಪೈಕಿ ಮೊದಲನೆಯ ಪಕ್ಷವು ಸರಿಯಿಲ್ಲ. ಏಕೆಂದರೆ, ಪದ ಮತ್ತು ಅರ್ಥಗಳ ಸಂಗತಿಯನ್ನು ತಿಳಿದವನಾಗಿ ವ್ಯಾಕರಣ-ಮೀಮಾಂಸಾ ಶಾಸ್ತ್ರಗಳನ್ನು ಓದಿರುವವನಿಗೆ ವಿಧಿಯಿಲ್ಲದಿದ್ದರೂ ಶಬ್ದದಿಂದಲೇ ಶಾಬ್ದಜ್ಞಾನವು ಉಂಟಾಗುತ್ತದೆ.

ಎರಡನೆಯ ಪಕ್ಷವೂ ಸರಿಹೊಂದುವುದಿಲ್ಲ. ಏಕೆಂದರೆ, ಭಾವನೆಯು ಜ್ಞಾನ ಪ್ರಕರ್ಷಕ್ಕೆ ಹೇತುವೆಂಬುದು "ಅನ್ವಯ-ವ್ಯತಿರೇಕಗಳಿಂದಲೇ"[24] ಸಿದ್ಧವಾಗುವುದರಿಂದ "ಪ್ರಾಪ್ತ"ವಾದುದೇ ಆಗುತ್ತದೆ. ಆದ್ದರಿಂದ ಭಾವನೆಯು ವಿಧೇಯವಾಗುವುದಿಲ್ಲ. ಅಪ್ರಾಪ್ತವಾಗಿರುವುದರ ಪ್ರಾಪ್ತಿಯನ್ನು ತಿಳಿಸಿಕೊಡುವುದೇ ವಿಧಿಯು ಎಂದು ಅಂಗೀಕರಿಸಲ್ಪಟ್ಟಿದೆ.

ಮೂರನೆಯ ಪಕ್ಷದಲ್ಲಿ, ಸಾಕ್ಷಾತ್ಕಾರವು ಬ್ರಹ್ಮಸ್ವರೂಪವಾದುದೇ? ಅಥವಾ ಅಂತಃಕರಣಪರಿಣಾಮದ ಪ್ರಭೇದವೇ? ಎಂದು ವಿಚಾರಮಾಡೋಣ.

ಅದು ಬ್ರಹ್ಮಸ್ವರೂಪವಾದುದಲ್ಲ. ಏಕೆಂದರೆ, ಬ್ರಹ್ಮವು ನಿತ್ಯವಾದುದಾಗಿರುವುದರಿಂದ ವಿಧೇಯ(ಕರ್ತವ್ಯ)ವಾಗುವುದಿಲ್ಲ.

ಅಂತಃಕರಣಪರಿಣಾಮದ ಪ್ರಭೇದವೂ ಅಲ್ಲ. ಏಕೆಂದರೆ, ಆನಂದಸಾಕ್ಷಾತ್ಕಾರ ರೂಪವಾಗಿರುವುದರಿಂದ ಫಲವಾಗಿರುವ ಕಾರಣ ಅದು ವಿಧೇಯವಾಗುವುದಿಲ್ಲ.

ಆದುದರಿಂದ "ಜ್ಞಾತವ್ಯಃ" (ತಿಳಿಯಲ್ಪಡತಕ್ಕವನು) ಎಂದು ಮುಂತಾದ ವಾಕ್ಯಗಳಿಗೆ ವಿಧಿಬೋಧಕತ್ವವು ಇಲ್ಲವಾದುದರಿಂದ "ಅರ್ಹೇ ಕೃತ್ಯತೃಚಶ್ಚ" (ಪಾ.ಸೂ.3-3-169) (ಯೋಗ್ಯ-ಎನ್ನುವ ಅರ್ಥದಲ್ಲಿ ಕೃತ್ಯ ಮತ್ತು ತೃಚ್ ಪ್ರತ್ಯಯಗಳು) ಎಂದು ಕೃತ್ಯಪ್ರತ್ಯಯಗಳನ್ನು "ಅರ್ಹವಾದ" ಎಂಬ ಅರ್ಥದಲ್ಲಿ ವಿಧಿಸಿರುವುದರಿಂದ "ತಿಳಿಯಲು ಯೋಗ್ಯವಾದುದು" ಎಂಬುದಾಗಿಯೇ ವ್ಯಾಖ್ಯಾನಮಾಡಬೇಕು.

ಈ ರೀತಿಯಾಗಿ ಎಲ್ಲ ವೇದಾಂತವಾಕ್ಯಗಳಿಗೂ ಉಪಕ್ರಮೋಪಸಂಹಾರ ಮೊದಲಾದ ಆರುವಿಧವಾದ ತಾತ್ಪರ್ಯನಿರ್ಣಾಯಕಗಳು ಇರುವುದರಿಂದ ಅವು ನಿತ್ಯವೂ, ಶುದ್ಧವೂ, ಬುದ್ಧವೂ, ಮುಕ್ತವೂ ಆದ ಬ್ರಹ್ಮಾತ್ಮವನ್ನು ಬೋಧಿಸುವವುಗಳು ಎಂಬುದಾಗಿಯೇ ನಿಶ್ಚಯಿಸಬೇಕು.

ಪ್ರಪಞ್ಚೋ ಬ್ರಹ್ಮವಿವರ್ತಃ

ನಿಷ್ಪ್ರದೇಶೇ ಪರಮಾಣೌ ಪ್ರದೇಶವೃತ್ತಿತ್ವೇನಾಭಿಮತಸ್ಯ ಸಂಯೋಗಸ್ಯ ದುರುಪಪಾದನತಯಾ ತನ್ನಿಬನ್ಧನಸ್ಯ ದ್ವ್ಯಣುಕಸ್ಯಾಸಿದ್ಧೌ ದ್ವ್ಯಣುಕಾದಿಕ್ರಮೇಣಾರಮ್ಭವಾದಾಸಮ್ಭವಾದಚೇತನಾಯಾಃ ಪ್ರಕೃತೇರ್ಮಹದಾದಿರೂಪೇಣ ಪರಿಣಾಮವಾದಾಸಮ್ಭವಾಚ್ಚ ಖ್ಯಾತಿಬಾಧಾನ್ಯಥಾನುಪಪತ್ತ್ಯಾಽನಿರ್ವಚನೀಯಃ ಪ್ರಪಞ್ಚಶ್ಚಿದ್ವಿವರ್ತ ಇತಿ ಸಿದ್ಧಮ್।

ಸ್ವರೂಪಾಪರಿತ್ಯಾಗೇನ ರೂಪಾನ್ತರಾಪತ್ತಿರ್ವಿವರ್ತ ಇತಿ ಸತ್ಯಮಿಥ್ಯಾಖ್ಯಾವಭಾಸ ಇತಿ। ಅವಭಾಸೋಽಧ್ಯಾಸ ಇತಿ ಪರ್ಯಾಯಃ।

ಪ್ರಪಂಚವು ಬ್ರಹ್ಮವಿವರ್ತವಾದುದು

"ಅವಯವರಹಿತವಾದ"[25] ಪರಮಾಣುವಿನಲ್ಲಿ ಅವಯವವೃತ್ತಿಯಾದ ಸಂಯೋಗವ ಹೊಂದುವುದಿಲ್ಲವಾದ್ದರಿಂದ ಪರಮಾಣುಸಂಯೋಗಪ್ರಯುಕ್ತವಾದ ದ್ವ್ಯಣುಕವ ಸಿದ್ಧಿಸುವುದಿಲ್ಲವಾದ್ದರಿಂದ ದ್ವ್ಯಣುಕ ಮೊದಲಾದ ಕ್ರಮದಿಂದ ಜಗತ್ತು ಹುಟ್ಟುತ್ತ ಯೆಂಬ ವಾದವೇ ಅಸಂಭವವಾಗುತ್ತದೆ. ಮತ್ತು ಹಾಗೆಯೇ ಅಚೇತನವಾದ ಪ್ರಕೃತಿಯು ಮಹತ್–ಮೊದಲಾದ ಕ್ರಮದಿಂದ ಪರಿಣಾಮ ಹೊಂದುತ್ತದೆಯೆಂಬ ವಾದವೂ ಅಸಂಭವವಾಗುತ್ತದೆ. ಹೀಗಿದ್ದರೂ ಪ್ರಪಂಚವು ಅಜ್ಞಾನಿಯ ದೃಷ್ಟಿಗೆ ತೋರುತ್ತಿರು ವುದರಿಂದಲೂ, ಜ್ಞಾನಿಯ ದೃಷ್ಟಿಯಲ್ಲಿ ಬಾಧಿತವಾಗುವುದರಿಂದಲೂ ಈ ಖ್ಯಾತಿ ಮತ್ತು ಬಾಧೆಗಳು ಸಮಂಜಸವಾಗಬೇಕಾದರೆ, ಈ ಪ್ರಪಂಚವು ಅನಿರ್ವಚನೀಯವೂ, ಬ್ರಹ್ ವಿವರ್ತರೂಪವೂ ಆಗಿದೆಯೆಂಬುದು ಸಿದ್ಧವಾಗುತ್ತದೆ.

ತನ್ನ ಸ್ವರೂಪವನ್ನು ಬಿಡದೆ ಬೇರೆ ರೂಪದಿಂದ ತೋರುವುದೇ ವಿವರ್ತವು. ಇದೆ ಸತ್ಯಮಿಥ್ಯಾ ಎಂಬ ಅವಭಾಸವು; ಅವಭಾಸ, ಅಧ್ಯಾಸ ಎಂಬುವು ಪರ್ಯಾಯಪದಗಳು (ಒಂದೇ ಅರ್ಥವನ್ನು ತಿಳಿಸುವ ಪದಗಳು.)

ಅಧ್ಯಾಸಪ್ರಭೇದನಿರೂಪಣಮ್

ಸಚಾಧ್ಯಾಸೋ ದ್ವಿವಿಧಃ। ಅರ್ಥಾಧ್ಯಾಸೋ ಜ್ಞಾನಾಧ್ಯಾಸಶ್ಚೇತಿ। ತದುಕ್ತಮ್:—

"ಪ್ರಮಾಣದೋಷಸಂಸ್ಕಾರಜನ್ಮಾನ್ಯಸ್ಯ ಪರಾತ್ಮತಾ।
ತದ್ಧೀಶ್ಚಾಧ್ಯಾಸ ಇತಿ ಹಿ ದ್ವಯಮಿಷ್ಟಂ ಮನೀಷಿಭಿಃ॥" ಇತಿ

ಪುನರಪಿ ದ್ವಿವಿಧೋಽಧ್ಯಾಸಃ। ನಿರುಪಾಧಿಕಸೋಪಾಧಿಕಭೇದಾತ್। ತದಪ್ಯುಕ್ತಮ್:—

"ದೋಷೇಣ ಕರ್ಮಣಾವಾಪಿ ಕ್ಷೋಭಿತಾಜ್ಞಾನಸಮ್ಭವಃ।
ತತ್ತ್ವವಿದ್ಯಾವಿರೋಧೀಚ ಭ್ರಮೋಽಯಂ ನಿರುಪಾಧಿಕಃ॥
ಉಪಾಧಿಸನ್ನಿಧಿಪ್ರಾಪ್ತಕ್ಷೋಭಾವಿದ್ಯಾವಿಜೃಮ್ಭಿತಮ್।
ಉಪಾಧ್ಯಪಗಮಾಪೋಹ್ಯಮಾಹುಃ ಸೋಪಾಧಿಕಂ ಭ್ರಮಮ್॥" ಇತಿ

ತತ್ರಸ್ವರೂಪೇಣ ಕಲ್ಪಿತಾಹಮಾದ್ಯಧ್ಯಾಸೋ ನಿರುಪಾಧಿಕಃ। ತದಪ್ಯುಕ್ತಮ್:—

ನೀಲಿಮೇವ ವಿಯತ್ಯೇಷಾ ಭ್ರಾನ್ತ್ಯಾಬ್ರಹ್ಮಣಿ ಸಂಸೃತಿಃ।
ಘಟವ್ಯೋಮೇವ ಭೋಕ್ತಾಽಯಂ ಭ್ರಾನ್ತ್ಯೋಭೇದೇನ ನ ಸ್ವತಃ॥" ಇತಿ

ಅತ ಏವ ಭಾಷ್ಯಕಾರಃ ಶುಕ್ತಿಕಾ ರಜತವದವಭಾಸತಏಕಶ್ಚನ್ದ್ರಃ ಸದ್ವಿತೀಯವದಿತಿ ನಿದರ್ಶನದ್ವಯಮುದಾಜಹಾರ। ಶಿಷ್ಟಂ ಶಾಸ್ತ್ರ ಏವ ಸ್ಪಷ್ಟಮಿತಿ ವಿಸ್ತರಭಿಯೋಪರಮ್ಯತೇ।

ಏವಂ ಚ ದೃಗ್ದೃಶ್ಯೌ ದ್ವಾವೇವ ಪದಾರ್ಥಾವಿತಿ ವೇದಾನ್ತಿನಾಂ ಸಿದ್ಧಾನ್ತ ಇತಿ ಸರ್ವ ಮವದಾತಮ್।

ಅಧ್ಯಾಸದ ಪ್ರಭೇದಗಳು

ಈ ಅಧ್ಯಾಸವು ಅರ್ಥಾಧ್ಯಾಸ ಮತ್ತು ಜ್ಞಾನಾಧ್ಯಾಸ ಎಂಬುದಾಗಿ ಎರಡು ವಿಧವಾಗಿದೆ. ಆದುದರಿಂದಲೇ, "ಪ್ರಮಾಣ, ದೋಷ ಮತ್ತು ಸಂಸ್ಕಾರ—ಇವುಗಳಿಂದ ಒಂದು ವಸ್ತುವು ಮತ್ತೊಂದು ವಸ್ತುವಾಗುವಿಕೆ ಮತ್ತು ಆ ರೀತಿಯಾದ ವಸ್ತುವಿನ ಜ್ಞಾನ ಎಂಬುದಾಗಿ ಎರಡುವಿಧವಾದ ಅಧ್ಯಾಸವನ್ನು ವಿದ್ವಾಂಸರು ಅಂಗೀಕರಿಸಿದ್ದಾರೆ" ಎಂದು ಹೇಳಲ್ಪಟ್ಟಿದೆ.

ಅಧ್ಯಾಸವು ಮತ್ತೂ ಎರಡುವಿಧವಾಗಿದೆ. ನಿರುಪಾಧಿಕ ಮತ್ತು ಸೋಪಾಧಿಕ ಎಂಬುದಾಗಿ. ಅದನ್ನೂ ಕೂಡ, "ದೋಷ ಅಥವಾ ಕರ್ಮದಿಂದ ಕ್ಷೋಭಿತವಾದ ಅವಿದ್ಯೆಯಿಂದುಂಟಾದ ಮತ್ತು ತತ್ತ್ವಜ್ಞಾನವಿರೋಧಿಯಾದ ಭ್ರಮವೇ ನಿರುಪಾಧಿಕವಾದ ಅಧ್ಯಾಸ. ಉಪಾಧಿಯ ಸಾನ್ನಿಧ್ಯದಿಂದ ಕ್ಷೋಭೆಗೊಂಡ ಅವಿದ್ಯೆಯಿಂದ ವಿಜೃಂಭಿಸುವ ಮತ್ತು ಉಪಾಧಿಯ ನಿವೃತ್ತಿಯಿಂದ ನಿವೃತ್ತಿಹೊಂದುವ ಭ್ರಮೆಯೇ ಸೋಪಾಧಿಕವಾದ ಅಧ್ಯಾಸ" ಎಂಬುದಾಗಿ ಹೇಳಿದೆ.

ಅವುಗಳ ಪೈಕಿ, ಸ್ವರೂಪತಃ (ಬ್ರಹ್ಮನಲ್ಲಿ) ಕಲ್ಪಿತವಾದ ಅಹಂಕಾರಭ್ರಮೆಯೇ ನಿರುಪಾಧಿಕಾಧ್ಯಾಸ. ಅದೂಕೂಡ, "ಆಕಾಶದಲ್ಲಿ ನೀಲಿಬಣ್ಣದಂತೆ ಬ್ರಹ್ಮನಲ್ಲಿ ಈ ಸಂಸಾರವು ಭ್ರಾಂತಿಯಿಂದ ಉಂಟಾದುದು. ಘಟಾಕಾಶ ಎಂಬುವಂತೆ ಆತ್ಮನು ಭೋಕ್ತೃ ಎಂಬುದು ಭೇದಭ್ರಾಂತಿಯಿಂದಲೇ ಹೊರತು ಸ್ವರೂಪದಿಂದಲ್ಲ" ಎಂಬುದಾಗಿ ಹೇಳಲ್ಪಟ್ಟಿದೆ. ಆದುದರಿಂದಲೇ ಭಾಷ್ಯಕಾರರು (ಶಂಕರಾಚಾರ್ಯರು) ಕಪ್ಪೆಚಿಪ್ಪು (ಶುಕ್ತಿಯು) ಬೆಳ್ಳಿಯಂತೆ (ರಜತ) ತೋರುತ್ತದೆ. ಒಬ್ಬನೇ ಚಂದ್ರನು ಇಬ್ಬರಂತೆ ತೋರುತ್ತಾನೆ ಎಂದು ಎರಡು ದೃಷ್ಟಾಂತಗಳನ್ನು ಉದಾಹರಿಸಿದ್ದಾರೆ. ಉಳಿದ ವಿಚಾರವೆಲ್ಲವೂ ವೇದಾಂತ ಶಾಸ್ತ್ರದಲ್ಲಿಯೇ ಸ್ಪಷ್ಟವಾಗಿರುವುದರಿಂದ ಇಲ್ಲಿ ವಿಸ್ತರಿಸುವುದು ಬೇಡ.

ಈ ರೀತಿಯಾಗಿ "ದೃಕ್[26] ಮತ್ತು ದೃಶ್ಯ" ಎಂಬುದಾಗಿ ಎರಡೇ ಪದಾರ್ಥಗಳು ಎಂಬುದು ವೇದಾಂತಿಗಳ ಸಿದ್ಧಾಂತ.

ಅಧ್ಯಾಸಖಣ್ಡನಾಯ ಮೀಮಾಂಸಕಪೂರ್ವಪಕ್ಷಃ

ಅತ್ರಪ್ರಭಾಕರಃ:—ಶುಕ್ತಿಕಾ ರಜತವದವಭಾಸತ ಇತಿ ದೃಷ್ಟಾನ್ತೋ ನೇಷ್ಟಃ। ರಜತಪ್ರತ್ಯಯಸ್ಯ ಶುಕ್ತಿಕಾಲಮ್ಬನತ್ವಾನುಪಪತ್ತೇಃ। ತಥಾಹಿ:—ಇದಂ ರಜತಮಿತಿ ಪ್ರತೀತೌ ಶುಕ್ತೇರಾಲಮ್ಬನತ್ವಂ ಪುರೋದೇಶಸತ್ತಾಮಾತ್ರೇಣಾವಲಮ್ಬ್ಯತೇ, ಕಾರಣತ್ವೇನ, ಭಾಸಮಾನತ್ವೇನ ವಾ?

ನಾದ್ಯಃ। ಪುರೋವರ್ತಿನಾಂ ಲೋಷ್ಟಾದೀನಾಮಪ್ಯಾಲಮ್ಬನತ್ವಪ್ರಸಙ್ಗಾತ್। ಅಥ ಕಲಧೌತಬೋಧಕರಣಸಂಸ್ಕಾರೋದ್ಬೋಧಕಾರಣತ್ವೇನ ತದ್ದ್ವಾರಾ ರಜತಜ್ಞಾನಕಾರಣತ್ವಾ

ದಾಲಮ್ಬನತ್ವಂ ಮನ್ಯಸೇ—ತದಪಿ ನ ಸಙ್ಗಚ್ಛತೇ। ಚಕ್ಷುರಾದೀನಾಮಪಿ ಕಾರಣತ್ವೇನ ವಿಷಯ
ತ್ವಾಪಾತಾತ್।

ಅಥ ಭಾಸಮಾನತಯಾ ವಿಷಯತ್ವಮಿಷ್ಯತೇ—ತದಪ್ಯಶ್ಲಿಷ್ಟಮ್। ರಜತನಿರ್ಭಾಸಸ್ಯ
ಶುಕ್ತಿಕಾಲಮ್ಬನತ್ವಾನುಪಪತ್ತೇಃ। ಯಸ್ಮಿನ್ ವಿಜ್ಞಾನೇ ಯದವಭಾಸತೇ ತತ್ತದಾಲಮ್ಬ
ನಮ್। ಅತ್ರ ಚ ಕಲಧೌತಾನುಭವಃ ಶುಕ್ತಿಕಾಲಮ್ಬನತ್ವಕಲ್ಪನಾಯಾಂ ವಿರುಧ್ಯತೇ। ತಥಾ
ಚಾಚಕಥನ್ನ್ಯಾಯವೀಥ್ಯಾಂ ಶಾಲಿಕನಾಥಃ:—

ಅತ್ರಬ್ರೂಮೋ ಯ ಏವಾರ್ಥೋ ಯಸ್ಯಾಂ ಸಂವಿದಿ ಭಾಸತೇ।
ವೇದ್ಯಃ ಸ ಏವ ನಾನ್ಯದ್ಧಿ ವೇದ್ಯಾವೇದ್ಯತ್ವಲಕ್ಷಣಮ್॥
ಇದಂ ರಜತಮಿತ್ಯತ್ರ ರಜತಂ ತ್ವವಭಾಸತೇ।
ತದೇವ ತೇನ ವೇದ್ಯಂಸ್ಯಾನ್ನ ತು ಶುಕ್ತಿರವೇದನಾತ್॥
ತೇನಾನ್ಯಸ್ಯಾನ್ಯಥಾ ಭಾಸಃ ಪ್ರತೀತ್ಯೈವ ಪರಾಹತಃ।
ಅನ್ಯಸ್ಮಿನ್ ಭಾಸಮಾನೇಹಿ ನ ಪರಂ ಭಾಸತೇ ಯತಃ॥" ಇತಿ।

(ಪ್ರಕ.ಪಂ.4-23,24,25)

ಅಧ್ಯಾಸದ ಖಂಡನೆಗಾಗಿ ಮೀಮಾಂಸಕರ ಪೂರ್ವಪಕ್ಷ

ಈ ವಿಷಯದಲ್ಲಿ ಪ್ರಭಾಕರರು ಹೇಳುವುದೇನೆಂದರೆ:—ಕಪ್ಪೆಚಿಪ್ಪು ಬೆಳ್ಳಿಯಂತೆ ತೋರುತ್ತದೆ ಎಂಬ ದೃಷ್ಟಾಂತವು ಸಮಂಜಸವಾಗಿಲ್ಲ. ಏಕೆಂದರೆ, ಬೆಳ್ಳಿಯ ಜ್ಞಾನವು ಕಪ್ಪೆಚಿಪ್ಪನ್ನು ಅವಲಂಬಿಸಿಲ್ಲ. ಏಕೆಂದರೆ, "ಇದು ರಜತ" ಎಂಬ ಪ್ರತೀತಿಯಲ್ಲಿ ಶುಕ್ತಿಗೆ ಆಲಂಬನತ್ವವು ಹೇಗೆ ಉಂಟಾಗುತ್ತದೆ? ಎಂದು ವಿಚಾರ ಮಾಡಬೇಕು. ಕೇವಲ ಎದುರಿಗೆ ಇರುವಿಕೆ ಮಾತ್ರದಿಂದಲೋ? ಕಾರಣವಾಗಿರುವುದರಿಂದಲೋ? ಅಥವಾ ತೋರುತ್ತಿರುವುದರಿಂದಲೋ?

ಎದುರಿಗೆ ಇರುವಿಕೆ ಮಾತ್ರದಿಂದಲೇ ಶುಕ್ತಿಯು ಆಲಂಬನವಾಗುವುದಿಲ್ಲ. ಹಾಗಿದ್ದರೆ, ಎದುರಿಗಿರುವ ಮಣ್ಣು ಹೆಂಟೆ ಮುಂತಾದವುಗಳೂ ಆಲಂಬನವಾಗಬೇಕಾಗುತ್ತದೆ. ಹಾಗಲ್ಲ, ರಜತಜ್ಞಾನವನ್ನುಂಟುಮಾಡುವ ಸಂಸ್ಕಾರದ ಉದ್ಬೋಧಕ್ಕೆ ಕಾರಣವಾಗುವುದರಿಂದ ಆ ಮೂಲಕ ರಜತಜ್ಞಾನಕ್ಕೆ ಕಾರಣವಾಗುವುದರಿಂದ ಶುಕ್ತಿಯು ಆಲಂಬನವಾಗುತ್ತದೆ ಎಂದು ಭಾವಿಸುವುದಾದರೆ, ಅದೂ ಸರಿಹೊಂದುವುದಿಲ್ಲ. ಏಕೆಂದರೆ ಕಣ್ಣು ಮೊದಲಾದವುಗಳೂ ಕೂಡ ಆ ಜ್ಞಾನಕ್ಕೆ ಕಾರಣವಾಗಿರುವುದರಿಂದ ಅವುಗಳಿಗೂ ಆಲಂಬನತ್ವವುಂಟಾಗಬೇಕಾಗುತ್ತದೆ.

ಹೀಗೆ, ತೋರುತ್ತಿರುವುದರಿಂದ ಶುಕ್ತಿಯು ಆಲಂಬನವಾಗುತ್ತದೆಯೆಂದು ಹೇಳುವುದೂ ಸರಿಯಲ್ಲ. ಏಕೆಂದರೆ, ರಜತಪ್ರತೀತಿಗೆ ಶುಕ್ತಿಯನ್ನು ಆಲಂಬನವಾಗಿ ಹೇಳುವುದು ಉಪಪನ್ನವಾಗುವುದಿಲ್ಲ. ಯಾವ ಪ್ರತೀತಿಯಲ್ಲಿ ಯಾವುದು ತೋರುತ್ತದೆಯೋ ಅದೇ ಆ

ಪ್ರತೀತಿಗೆ ಆಲಂಬನ. ಇಲ್ಲಿ ಶುಕ್ತಿಗೆ ಆಲಂಬನತ್ವವನ್ನು ಹೇಳುವುದಾದರೆ, ರಜತಪ್ರತೀತಿಯೆಂಬುದು ವಿರುದ್ಧವಾಗುತ್ತದೆ. ಆದುದರಿಂದಲೇ ಶಾಲಿಕನಾಥನು "ನ್ಯಾಯವೀಥೀ" ಪ್ರಕರಣದಲ್ಲಿ ಹೇಳಿದ್ದಾನೆ:–

"ಇಲ್ಲಿ ಹೇಳುತ್ತೇವೆ. ಯಾವ ಪ್ರತೀತಿಯಲ್ಲಿ ಯಾವ ಅರ್ಥವು ತೋರುತ್ತದೆಯೋ ಅದೇ ವೇದ್ಯವು (ಪ್ರತೀತಿಗೆ ಆಲಂಬನ). ವೇದ್ಯಾವೇದ್ಯತ್ವಸ್ವರೂಪವುಳ್ಳದ್ದು ಬೇರೆ ಯಾವುದೂ ಇಲ್ಲ. "ಇದು ರಜತ" ಎಂಬಲ್ಲಿ ರಜತವೇ ತೋರುತ್ತದೆ. ಆದ್ದರಿಂದ ಅದೇ ಆ ಪ್ರತೀತಿಗೆ ವೇದ್ಯ(ಆಲಂಬನ)ವಾಗುತ್ತದೆಯೇ ಹೊರತು ಶುಕ್ತಿಯಲ್ಲ. ಏಕೆಂದರೆ, ಶುಕ್ತಿ ಪ್ರತೀತಿಯಿಲ್ಲ. ಆದುದರಿಂದ ಒಂದು ವಸ್ತುವು ಬೇರೆವಸ್ತುವಾಗಿ ತೋರುತ್ತದೆಯೆಂಬುದು ಪ್ರತೀತಿಯಿಂದಲೇ ವಿರುದ್ಧವಾಗುತ್ತದೆ. ಏಕೆಂದರೆ ಬೇರೆಯದು ತೋರುತ್ತಿರುವಾಗ ಮತ್ತೊಂದು ತೋರುವುದಿಲ್ಲ". (ಪ್ರ.ಕ.ಪಂ.4-23,24,25)

ಮಿಥ್ಯಾಜ್ಞಾನೋತ್ಪತ್ತೌ ಸಾಮಗ್ರೀ ನಾಸ್ತೀತಿ ಪೂರ್ವಪಕ್ಷಃ

ಕಿಂಚ ಮಿಥ್ಯಾಜ್ಞಾನೋತ್ಪತ್ತೌ ಸಾಮಗ್ರೀ ನ ಸಮಸ್ತಿ। ಕಿಂ ಕೇವಲಾನೀನ್ದ್ರಿಯಾದೀನಿ ಕಾರಣಾನಿ, ದೋಷದೂಷಿತಾನಿ ವಾ?

ನಾದ್ಯಃ। ತೇಷಾಂ ಸಮೀಚೀನಜ್ಞಾನಜನನಸಾಮರ್ಥ್ಯೋಪಲಮ್ಭಾತ್। ಅನ್ಯಥಾ ಸಮೀಚೀನಂ ರಜತಜ್ಞಾನಂ ನ ಕದಾಚಿದುದಯಮಾಸಾದಯೇತ್।

ನದ್ವಿತೀಯಃ। ದೋಷಾಣಾಮೌತ್ಸರ್ಗಿಕಕಾರ್ಯಪ್ರಸವಶಕ್ತಿಪ್ರತಿಬನ್ಧಮಾತ್ರಪ್ರಭಾವತ್ವಾತ್। ನ ಹಿ ದುಷ್ಟಂ ಕುಟಜಬೀಜಂ ವಟಾಙ್ಕುರಂ ಜನಯಿತುಮೀಷ್ಟೇ। ನ ವಾ ತೈಲಕಲುಷಿತಂ ಶಾಲಿಬೀಜಮಶಾಲ್ಯಙ್ಕುರಜನನಾಯಾಲಮ್। ಕಿಂತು ಸ್ವಕಾರ್ಯಂ ನ ಕರೋತಿ। ನನು ದಾವದಹನದಗ್ಧಸ್ಯ ವೇತ್ರಬೀಜಸ್ಯ ಕದಲೀಕಾಣ್ಡಜನಕತ್ವಂ ದೃಷ್ಟಮಿತಿಚೇತ್—ತನ್ನ ಸ್ಥಾನೇ। ದಗ್ಧಸ್ಯಾವೇತ್ರಬೀಜತ್ವೇನ ದೋಷಾಣಾಂ ವಿಪರೀತಕಾರ್ಯಕಾರಿತ್ವಂ ಪ್ರತ್ಯನುದಾಹರಣಾತ್। ನಚ ಭಸ್ಮಕದೋಷದೂಷಿತಸ್ಯ ಕೌಕ್ಷೇಯಸ್ಯಾಶುಶುಕ್ಷಣೇರ್ಬಹ್ವನ್ನಪಚನಸಾಮರ್ಥ್ಯಂ ದೃಷ್ಟಮಿತ್ಯೇಷ್ಟವ್ಯಮ್। ಅಶಿತಪೀತಾದ್ಯಾಹಾರಪರಿಣತೌ ಜಾಠರಸ್ಯ ಜಾತವೇದಸಃ ಶಕ್ತತ್ವಾತ್। ತದುಕ್ತಮ್:—

"ಅಯಥಾರ್ಥಸ್ಯ ಬೋಧಸ್ಯ ನೋತ್ಪತ್ತಾವಸ್ತಿ ಕಾರಣಮ್।
ದೋಷಾಶ್ಚೇನ್ನಹಿ ದೋಷಾಣಾಂ ಕಾರ್ಯಶಕ್ತಿವಿಘಾತತಾ॥
ಭಸ್ಮಕಾದಿಷು ಕಾರ್ಯಸ್ಯ ವಿಘಾತಾದೇವ ದೋಷತಾ।
ಅಗ್ನೇರ್ಹಿ ರಸನಿಷ್ಪತ್ತಿಃ ಕಾರ್ಯಂ ಜಠರವರ್ತಿನಃ॥" ಇತಿ।

(ಪ್ರ.ಕ.ಪಂ.4.73-74)

ಅಪಿಚಾಸತ್ಯಪ್ಯರ್ಥೇ ಜ್ಞಾನಪ್ರಾದುರ್ಭಾವಾಭ್ಯುಪಗಮೇ ಸಮೀಚೀನಸ್ಥಲೇಽಪಿ ಜ್ಞಾನಾನಾಂ ಸ್ವಗೋಚರವ್ಯಭಿಚಾರಶಙ್ಕಾಙ್ಕುರಸಮ್ಭವೇನ ನಿರಙ್ಕುಶೋ ವ್ಯವಹಾರೋ ಲುಪ್ಯತೇ। ತದಾಹ:–

"ಯದಿಚಾರ್ಥಂ ಪರಿತ್ಯಜ್ಯ ಕಾಚಿದ್ಬುದ್ಧಿಃ ಪ್ರಕಾಶತೇ।
ವ್ಯಭಿಚಾರವತಿ ಸ್ವಾರ್ಥೇ ಕಥಂ ವಿಶ್ವಾಸಕಾರಣಮ್॥" ಇತಿ।

(ಪ್ರ.ಕ.ಪಂ.4-66)

ಮಿಥ್ಯಾಜ್ಞಾನವುಂಟಾಗಲು ಕಾರಣಸಾಮಗ್ರಿಯಿಲ್ಲವೆಂದು ಪೂರ್ವಪಕ್ಷ

ಮತ್ತು ಮಿಥ್ಯಾಜ್ಞಾನವುಂಟಾಗಲು ಸಾಮಗ್ರಿಯೇ ಇಲ್ಲ. ಏಕೆಂದರೆ, ಕೇವಲ ಇಂದ್ರಿಯಗಳೇ ಕಾರಣಗಳೋ? ಅಥವಾ, ದೋಷಯುಕ್ತವಾದ ಇಂದ್ರಿಯಗಳೋ?

ಕೇವಲ ಇಂದ್ರಿಯಗಳು ಕಾರಣಗಳಲ್ಲ. ಏಕೆಂದರೆ, ಅವು ಸಮೀಚೀನವಾದ ಜ್ಞಾನವನ್ನು (ಯಥಾರ್ಥಜ್ಞಾನ) ಉಂಟುಮಾಡುವ ಸಾಮರ್ಥ್ಯವುಳ್ಳವುಗಳಾಗಿವೆ. ಹಾಗಿಲ್ಲದೆ ಹೋದರೆ, ಯಥಾರ್ಥವಾದ ರಜತಜ್ಞಾನವು ಎಂದಿಗೂ ಉಂಟಾಗದಿರಬೇಕಾದೀತು.

(ದೋಷಯುಕ್ತವಾದ ಇಂದ್ರಿಯಗಳು ಕಾರಣಗಳೆಂದು ಹೇಳುವ) ಎರಡನೆಯ ಪಕ್ಷವೂ ಸರಿಯಲ್ಲ. ಏಕೆಂದರೆ, ದೋಷಗಳು ಸ್ವಾಭಾವಿಕವಾದ ಕಾರ್ಯಜನನಶಕ್ತಿಯನ್ನು ತಡೆಗಟ್ಟುವ ಸಾಮರ್ಥ್ಯವನ್ನು ಮಾತ್ರ ಹೊಂದಿರುತ್ತವೆ. ದುಷ್ಟವಾದ ಕುಟಜಬೀಜವು ವಟಾಂಕುರವನ್ನು ಹುಟ್ಟಿಸಲಾರದಷ್ಟೆ! ಮತ್ತು, ತೈಲದಿಂದ ಕಲುಷಿತವಾದ ಶಾಲಿಬೀಜವು ಶಾಲಿಯಲ್ಲದ ಅಂಕುರವನ್ನು ಹುಟ್ಟಿಸಲಾರದಷ್ಟೆ! ಆದರೆ ತನ್ನ ಕಾರ್ಯವನ್ನು ಮಾಡುವುದಿಲ್ಲ. ಹಾಗಾದರೆ, ಕಾಡುಗಿಚ್ಚಿನಿಂದ ಸುಟ್ಟ ಬಿದಿರುಬೀಜವು ಕದಲೀಕಾಂಡವನ್ನು ಉಂಟುಮಾಡುವುದನ್ನು ಕಂಡಿದ್ದೇವೆ—ಎಂದು ಹೇಳುವುದು ಸರಿಯಲ್ಲ. ಸುಟ್ಟುಹೋದ ಮೇಲೆ ಅದು ಬಿದಿರುಬೀಜವಾಗಿರುವುದಿಲ್ಲವಾದ್ದರಿಂದ ದೋಷಗಳು ವಿಪರೀತವಾದ ಕಾರ್ಯವನ್ನುಂಟುಮಾಡುತ್ತವೆಯೆಂಬುದಕ್ಕೆ ಉದಾಹರಣೆಯಾಗುವುದಿಲ್ಲ. ಭಸ್ಮಕದೋಷ (ರೋಗ)ದಿಂದ ದೂಷಿತವಾದ ಜಠರಾಗ್ನಿಗೆ ಹೆಚ್ಚು ಅನ್ನವನ್ನು ಜೀರ್ಣಿಸುವ ಸಾಮರ್ಥ್ಯವಿದೆಯಲ್ಲವೆ ಎಂದು ಹೇಳಬಾರದು. ತಿಂದುಕುಡಿದ ಆಹಾರದ ಪರಿಪಾಕಮಾಡುವುದರಲ್ಲಿ ಮಾತ್ರ ಜಠರಾಗ್ನಿಗೆ ಶಕ್ತಿಯಿರುವುದು. ಆದ್ದರಿಂದಲೇ, "ಅಯಥಾರ್ಥ ಜ್ಞಾನವುಂಟಾಗಲು ಕಾರಣವೇ ಇಲ್ಲ. ದೋಷಗಳು ಕಾರಣವೆಂಬುದಾಗಿ ಹೇಳಲಾಗುವುದಿಲ್ಲ. ಏಕೆಂದರೆ, ದೋಷಗಳು ಕಾರ್ಯಜನನಶಕ್ತಿಯನ್ನು ಮಾತ್ರ ತಡೆಗಟ್ಟುತ್ತವೆ. ಕಾರ್ಯಶಕ್ತಿಯನ್ನು ತಡೆಗಟ್ಟುವುದರಿಂದಲೇ ಭಸ್ಮಕ ಮೊದಲಾದುವು ದೋಷವಾಗುವುದು. ಏಕೆಂದರೆ, ಜಠರವರ್ತಿಯಾದ ಅಗ್ನಿಗೆ ರಸನಿಷ್ಪತ್ತಿಯೇ ಕಾರ್ಯವು"(ಪ್ರಕ.ಪಂ.4–73,74) ಎಂದು ಹೇಳಿದ್ದಾರೆ.

ಮತ್ತು ವಸ್ತುವು ಇಲ್ಲದಿದ್ದರೂ ಜ್ಞಾನವು ಉಂಟಾಗುತ್ತದೆಯೆಂದು ಅಂಗೀಕರಿಸಿದರೆ, ಯಥಾರ್ಥಾನುಭವಸ್ಥಳದಲ್ಲಿಯೂ ಜ್ಞಾನಗಳು ತಮ್ಮ ವಿಷಯಗಳನ್ನು ಬಿಟ್ಟಿರಬಹುದೆಂಬ ಸಂದೇಹಕ್ಕೆ ಸಂಭವವಿರುವುದರಿಂದ ಲೋಕದಲ್ಲಿ ಅಕುಂಠಿತವಾದ ವ್ಯವಹಾರವೆ ಲೋಪಹೊಂದಬೇಕಾದೀತು. ಅದನ್ನೇ ಹೇಳುತ್ತಾರೆ:—"ಒಂದುವೇಳೆ ಅರ್ಥವನ್ನು ಬಿಟ್ಟು ಜ್ಞಾನವುಂಟಾಗುವುದಾದರೆ, ತನ್ನ ಅರ್ಥ(ವಿಷಯ)ವನ್ನೇ ಹೊಂದದಿರುವ ಅಂತಹ

ಜ್ಞಾನವು ವಸ್ತುಪ್ರತಿಪಾದಕವೆಂಬುದಾಗಿ ನಂಬಿಕೆ ಹುಟ್ಟುವುದಾದರೂ ಹೇಗೆ?"(ಪ್ರಕ. ಪಂ.4–66)

ಗ್ರಹಣ–ಸ್ಮರಣಾತ್ಮಕಜ್ಞಾನದ್ವಯಂ ವ್ಯವಹಾರಕಾರಣಮ್

ನನು ರಜತಗೋಚರೈಕವಿಶಿಷ್ಟಜ್ಞಾನಾನಙ್ಗೀಕಾರೇ ವಿಶಿಷ್ಟವ್ಯವಹಾರೋ ನಸಿಧ್ಯೇತ್। ಅತಸ್ತತ್ಸಿದ್ಧಯೇಽಪಿ ವಿಪರ್ಯಯೋಽಙ್ಗೀಕಾರ್ಯ ಇತಿ ಚೇನ್ನ। ಇದಂರಜತ ಮಿತಿ ಗ್ರಹಣ-ಸ್ಮರಣಾಭಿಧಸ್ಯ ಬೋಧದ್ವಯಸ್ಯ ವ್ಯವಹಾರಕಾರಣತ್ವಾಙ್ಗೀಕಾರಾತ್। ಯದ್ಯೇವ ಮಿದಂ ಶುಕ್ತಿಕಾಶಕಲಂ ತದ್ರಜತಮಿತ್ಯತೋಽಪಿ ವಿಶಿಷ್ಟವ್ಯವಹಾರಃಸ್ಯಾದಿತಿ। ತನ್ನ। ತತ್ರೇದಮಿತಿ ಪುರೋವರ್ತಿದ್ರವ್ಯಮಾತ್ರಗ್ರಹಣಸ್ಯ ದೋಷದೂಷಿತಚಕ್ಷುರ್ಜನ್ಯತ್ವೇನಾನಾಕಲಿತ ಶುಕ್ತಿತ್ವಾದಿವಿಶೇಷಿತಸ್ಯ ಸಾಮಾನ್ಯಮಾತ್ರಗ್ರಹಣರೂಪತ್ವಾದ್ರಜತಮಿತಿ ಜ್ಞಾನಸ್ಯಾಸನ್ನಿಹಿತ ವಿಷಯಸ್ಯ ಸಮ್ಪ್ರಯೋಗಲಿಙ್ಗಾದ್ಯಪ್ರಸೂತತಯಾ ಸದೃಶಾವಬೋಧಿತಸಂಸ್ಕಾರಮಾತ್ರ ಪ್ರಭವತ್ವೇನ ಪರಿಶೇಷಪ್ರಾಪ್ತಸ್ಮೃತಿಭಾವಸ್ಯ ದೋಷಹೇತುಕತಯಾ ಗೃಹೀತತತ್ತಾಂಶ ಪ್ರಮೋಷಾದ್ಗ್ರಹಣಮಾತ್ರತ್ವೋಪಪತ್ತೇಃ। ತದಪ್ಯುಕ್ತಮ್:–

"ನನ್ವತ್ರ ರಜತಾಭಾಸಃ ಕಥಮೇಷ ಘಟಿಷ್ಯತೇ।
ಉಚ್ಯತೇ ಶುಕ್ತಿಶಕಲಂ ಗೃಹೀತಂ ಭೇದವರ್ಜಿತಮ್॥
ಶುಕ್ತಿಕಾಯಾ ವಿಶೇಷಾ ಯೇ ರಜತಾದ್ಭೇದಹೇತವಃ।
ತೇ ನ ಜ್ಞಾತಾ ಅಭಿಭವಾಜ್ಜ್ಞಾತಾ ಸಾಮಾನ್ಯರೂಪತಾ॥
ಅನನ್ತರಂ ಚ ರಜತಸ್ಮೃತಿರ್ಜಾತಾ ತಯಾಪಿ ಚ।
ಮನೋದೋಷಾತ್ತದಿತ್ಯಂಶಪರಾಮರ್ಶವಿವರ್ಜಿತಮ್॥
ರಜತಂ ವಿಷಯೀಕೃತ್ಯ ನೈವ ಶುಕ್ತೇರ್ವಿವೇಚಿತಮ್।
ಸ್ಮೃತ್ಯಾತೋ ರಜತಾಭಾಸ ಉಪಪನ್ನೋ ಭವಿಷ್ಯತಿ॥" (ಪ್ರಕ.ಪಂ. 4-26-29)

"ನಹ್ಯಸನ್ನಿಹಿತಂ ತಾವತ್ಪ್ರತ್ಯಕ್ಷಂ ರಜತಂಭವೇತ್।
ಲಿಙ್ಗಾದ್ಯಭಾವಾಚ್ಚಾನ್ಯಸ್ಯ ಪ್ರಮಾಣಸ್ಯ ನ ಗೋಚರಃ॥
ಪರಿಶೇಷಾತ್ ಸ್ಮೃತಿರಿತಿ ನಿಶ್ಚಯೋ ಜಾಯತೇ ಪುನಃ॥" ಇತಿ।

(ಪ್ರಕ.ಪಂ. 4-31-32)

ಗ್ರಹಣ-ಸ್ಮರಣರೂಪವಾದ ಎರಡು ಜ್ಞಾನಗಳು ವ್ಯವಹಾರಕ್ಕೆ ಕಾರಣ

ರಜತವಿಷಯಕವಾದ ಒಂದು ವಿಶಿಷ್ಟಜ್ಞಾನವನ್ನು ಅಂಗೀಕರಿಸದಿದ್ದರೆ ವಿಶಿಷ್ಟ ವ್ಯವಹಾರವು ಸಿದ್ಧಿಸುವುದಿಲ್ಲ; ಆದ್ದರಿಂದ ಅದರ ಸಿದ್ಧಿಗೋಸ್ಕರ ಮಿಥ್ಯಾಜ್ಞಾನವನ್ನು ಒಪ್ಪಬೇಕು ಎಂಬುದಾಗಿ ಹೇಳುವುದಾದರೆ, ಅದು ಸರಿಯಲ್ಲ. ಏಕೆಂದರೆ " ಇದು ರಜತ " ಎನ್ನುವಾಗ ಗ್ರಹಣ ಮತ್ತು ಸ್ಮರಣ ಎಂಬ ಎರಡು ಜ್ಞಾನಗಳು ಕಾರಣವಾಗಿವೆ.

ಹಾಗಿದ್ದರೆ, "ಇದು ಕಪ್ಪೆಚಿಪ್ಪಿನಚೂರು, ಅದು ಬೆಳ್ಳಿ" ಎಂಬ ಕಡೆಯಲ್ಲಿಯೂ ವಿಶಿಷ್ಟ ವ್ಯವಹಾರವುಂಟಾಗಲಿ ಎಂದು ಕೇಳುವುದಾದರೆ, ಅದು ಯುಕ್ತವಾಗುವುದಿಲ್ಲ. ಏಕೆಂದರೆ. "ಇದು ಬೆಳ್ಳಿ" ಎನ್ನುವಾಗ "ಇದು" ಎಂಬುದಾಗಿ ಎದುರಿಗಿರುವ ವಸ್ತುವನ್ನು ಮಾತ್ರ ಗ್ರಹಿಸುವ ಗ್ರಹಣರೂಪವಾದ ಜ್ಞಾನವು ದೋಷದೂಷಿತವಾದ ಚಕ್ಷುರಿಂದ್ರಿಯದಿಂದ ಹುಟ್ಟಿರುವುದರಿಂದ ಶುಕ್ತಿತ್ವ ಮೊದಲಾದ ವಿಶೇಷ ಧರ್ಮವನ್ನು ಗ್ರಹಿಸದೆ ಸಾಮಾನ್ಯ ವಸ್ತುಮಾತ್ರಗ್ರಹಣರೂಪವಾಗಿರುತ್ತದೆ. "ಬೆಳ್ಳಿ" ಎಂಬ ಜ್ಞಾನವು ವಿಷಯ ಸಾನ್ನಿಧ್ಯ ವಿಲ್ಲದುದರಿಂದ ಇಂದ್ರಿಯಸಂನಿಕರ್ಷ ಅಥವಾ ಅನುಮಾನ(ಹೇತು)ದಿಂದ ಉಂಟಾದುದಲ್ಲ; ಸದೃಶವಾದ ವಸ್ತುವಿನ ದರ್ಶನದಿಂದ ಉದ್ಬೋಧಿತವಾದ ಸಂಸ್ಕಾರ ಮಾತ್ರದಿಂದ ಹುಟ್ಟಿರುವ ಕಾರಣ, ಪರಿಶೇಷವಶದಿಂದ ಸ್ಮೃತಿರೂಪವಾದ ಜ್ಞಾನವಾಗುತ್ತದೆ. ದೋಷ ಪ್ರಯುಕ್ತವಾಗಿರುವುದರಿಂದ "ಅದು" ಎಂಬ ಅಂಶವನ್ನು ಕಳೆದುಕೊಂಡಿರುತ್ತದೆಯಾದ ಕಾರಣ, ಗ್ರಹಣಮಾತ್ರರೂಪವಾಗಿರುತ್ತದೆಯೆಂಬುದು ಸಮಂಜಸವಾಗುತ್ತದೆ. ಅದನ್ನೇ ಹೇಳಿದ್ದಾರೆ:—"ಇಲ್ಲಿ ಈ ರಜತಪ್ರತೀತಿಯು ಹೇಗೆ ಉಂಟಾಗುತ್ತದೆ ಎಂದು ಕೇಳು ವುದಾದರೆ, (ಸಮಾಧಾನವನ್ನು) ಹೇಳುತ್ತೇವೆ:—ಭೇದರಹಿತವಾಗಿ ಶುಕ್ತಿಕಾಶಕಲವು ಗ್ರಹಿಸಲ್ಪಡುತ್ತದೆ. ಅಂದರೆ, ಶುಕ್ತಿಯು ರಜತಕ್ಕಿಂತ ಬೇರೆಯಾದುದು ಎಂಬುದಕ್ಕೆ ಕಾರಣವಾದ (ಶುಕ್ತಿತ್ವ ಮೊದಲಾದ) ವಿಶೇಷಾಂಶಗಳು ಅಭಿಭೂತವಾಗುವುದರಿಂದ (ಮರೆ ಯಾಗುವುದರಿಂದ) ಗೊತ್ತಾಗುವುದಿಲ್ಲ. ಸಾಮಾನ್ಯವಾಗಿ ವಸ್ತು ಎಂಬುದಾಗಿ ಮಾತ್ರ ಗೊತ್ತಾಗುತ್ತದೆ. ಅದಾದಮೇಲೆ ರಜತಸ್ಮರಣೆಯು ಉಂಟಾಗುತ್ತದೆ. ಆ ಸ್ಮರಣೆಯಾದರೋ ಮನಸ್ಸಿನ ದೋಷವಶದಿಂದ "ಅದು" ಎಂಬ ಅಂಶದ ಪರಾಮರ್ಶವಿಲ್ಲದೆಯೇ ಶುಕ್ತಿಗಿಂತ ಬೇರೆಯಾದುದು ಎಂಬುದಾಗಿ ವಿವೇಚಿಸಲ್ಪಡದಿರುವ ರಜತವನ್ನು ವಿಷಯೀಕರಿಸುತ್ತದೆ. ಆದುದರಿಂದ ರಜತಪ್ರತೀತಿಯು ಉಪಪನ್ನವಾಗುತ್ತದೆ." (ಪ್ರಕ. ಪಂ. 4–26-29) "ಸಂನಿಹಿತವಾಗಿಲ್ಲದಿರುವ ರಜತವು ಪ್ರತ್ಯಕ್ಷವಾಗಲಾರದಷ್ಟೆ. ಲಿಂಗ (ಹೇತು) ಮೊದಲಾ ದುದು ಇಲ್ಲವಾದ್ದರಿಂದ ಬೇರೆ ಪ್ರಮಾಣಕ್ಕೂ ಗೋಚರವಾಗುವುದಿಲ್ಲ. ಪರಿಶೇಷದಿಂದ ಸ್ಮೃತಿ ಎಂಬುದಾಗಿ ನಿಶ್ಚಿತವಾಗುತ್ತದೆ."(ಪ್ರಕ.ಪಂ.4–31,32)

ಗ್ರಹಣ–ಸ್ಮರಣಯೋರ್ಭೇದೋ ನ ಗೃಹ್ಯತೇ

ನನು ಕಿಮಿದಮೇಕೈಕಂ ವ್ಯವಹಾರಕಾರಣಮುತ ಸಮುಚ್ಚಯ? ನಪ್ರಥಮಃ। ದೇಶ ಭೇದೇನ ಪ್ರವೃತ್ತಿಪ್ರಸಜ್ಗಾತ್। ನಚರಮಃ। "ಪ್ರಯತ್ನಾಯೌಗಪದ್ಯಾಜ್ ಜ್ಞಾನಾಯೌಗ ಪದ್ಯಾತ್" (ವೈ.ಸೂ. 3-2-3) ಇತ್ಯಾದಿನಾ ಜ್ಞಾನಯೌಗಪದ್ಯನಿಷೇಧಾತ್। ಅತೋ ಜ್ಞಾನ ದ್ವಯಂ ಹೇತುರಿತ್ಯಯುಕ್ತಂವಚ ಇತಿ ಚೇತ್—ಮೈವಂವೋಚಃ। ಅವಿನಶ್ಯತೋಃ ಸಹಾ ವಸ್ಥಾನನಿಷೇಧೇಽಪಿ ವಿನಶ್ಯದವಿನಶ್ಯತೋಃ ಸಹಾವಸ್ಥಾನಸ್ಯಾನಿಷಿದ್ಧತ್ವೇನ ನಿರನ್ತರೋತ್ಪನ್ನ ಯೋಸ್ತದುಪಪತ್ತೇಃ। ನನು ರಜತಜ್ಞಾನಾದ್ರಜತಾರ್ಥೀ ರಜತೇ ಪ್ರವರ್ತತಾಂನಾಮ। ಪೌರಸ್ತ್ಯೇ ವಸ್ತುನಿಕಥಂ ಪ್ರವೃತ್ತಿಃ ಸ್ಯಾದಿತಿ ಚೇನ್ನ। ಸ್ವರೂಪತೋ ವಿಷಯತಶ್ಚಾಗೃಹೀತಭೇದಯೋ

ಗ್ರಹಣಸ್ಮರಣಯೋಃ ಸನ್ನಿಹಿತರಜತಗೋಚರಜ್ಞಾನಸಾರೂಪ್ಯೇಣ ವಸ್ತುತಃ ಪರಸ್ಪರಂ ವಿಭಿನ್ನಯೋರಪ್ಯಭೇದೋಚಿತಸಾಮಾನಾಧಿಕರಣ್ಯವ್ಯಪದೇಶಹೇತುತ್ವೋಪಪತ್ತೇಃ। ಗ್ರಹಣಸ್ಮರಣಯೋಃ ಸನ್ನಿಹಿತರಜತಜ್ಞಾನಸಾರೂಪ್ಯಂ ಕಥಮ್? ಯಥಾಚೈತತ್ತಥಾ ನಿಶಮ್ಯತಾಮ್।

ಸನ್ನಿಹಿತರಜತಗೋಚರಂ ಹಿ ವಿಜ್ಞಾನಮಿದಮಂಶರಜತಾಂಶಯೋರಸಂಸರ್ಗಂ ನಾವಗಾಹತೇ। ತಯೋಃ ಸಂಸೃಷ್ಟತ್ವೇನಾಸಂಸರ್ಗಸ್ಯೈವಾಭಾವಾತ್। ನಾಪಿ ಸ್ವಗತಂ ಭೇದಮ್। ಏಕಜ್ಞಾನತ್ವಾತ್। ಏವಂ ಗ್ರಹಣಸ್ಮರಣೇ ಅಪಿ ದೋಷವಶಾದ್ವಿದ್ಯಮಾನಮಪೀದಮಂಶರಜತಾಂಶಯೋರಸಂಸರ್ಗಂ ಭೇದಂ ನಾವಗಾಹತ ಇತಿ। ಭೇದಾಗ್ರಹಣಮೇವ ಸಾರೂಪ್ಯಮ್। ತದುಕ್ತಂ ಗುರುಮತಾನುಸಾರಿಭಿಃ :—

"ಗ್ರಹಣಸ್ಮರಣೇ ಚೇಮೇ ವಿವೇಕಾನವಭಾಸಿನೀ।
ಸಮ್ಯಗ್ರಜತಬೋಧಾಚ್ಚ ಭಿನ್ನೇ ಯದ್ಯಪಿ ತತ್ತ್ವತಃ॥
ತಥಾಪಿ ಭಿನ್ನೇ ನಾಭಾತೇ ಭೇದಾಗ್ರಹಸಮತ್ವತಃ।
ಸಮ್ಯಗ್ರಜತಬೋಧಸ್ತು ಸಮುಕ್ತ್ಯೈಕಾರ್ಥಗೋಚರಃ॥
ತತೋಭಿನ್ನೇ ಅಬುದ್ಧ್ವಾಚ ಗ್ರಹಣ-ಸ್ಮರಣೇ ಇಮೇ।
ಸಮಾನೇನೈವ ರೂಪೇಣ ಕೇವಲಂ ಮನ್ಯತೇ ಜನಃ॥
ಅಪರೋಕ್ಷಾವಭಾಸೇನ ಸಮಾನಾರ್ಥಗ್ರಹೇಣ ಚ।
ಅನ್ಯೈಲಕ್ಷಣ್ಯಸಂವಿತ್ತಿರಿತಿ ತಾವತ್ಸಮರ್ಥಿತಾ॥
ವ್ಯವಹಾರೋಽಪಿ ತತ್ತುಲ್ಯಸ್ತತ ಏವ ಪ್ರವರ್ತತೇ" (ಪ್ರಕ.ಪಂ. 4.33-37)

ಏವಮಗೃಹೀತವಿವೇಕಮಾಪನ್ನಸನ್ನಿಹಿತರೂಪ್ಯಜ್ಞಾನಸಾರೂಪ್ಯಂ ಗ್ರಹಣಸ್ಮರಣದ್ವಯಮಯಥಾವ್ಯವಹಾರಹೇತುರಿತಿ ಸಿದ್ಧಮ್।

ಗ್ರಹಣ-ಸ್ಮರಣೆಗಳ ಪರಸ್ಪರಭೇದವು ಗೊತ್ತಾಗುವುದಿಲ್ಲ

ಹಾಗಾದರೆ, ಇದು (ಇದು ರಜತವೆನ್ನುವ ಗ್ರಹಣಸ್ಮರಣರೂಪವಾದ ಜ್ಞಾನ) ಒಂದೊಂದೇ ಪ್ರತ್ಯೇಕವಾಗಿ ವ್ಯವಹಾರಕ್ಕೆ ಕಾರಣವಾಗುತ್ತದೆಯೋ? ಅಥವಾ ಒಟ್ಟುಗೂಡಿಯೋ?

ಒಂದೊಂದೇ ಪ್ರತ್ಯೇಕವಾಗಿ ಕಾರಣವಾಗುವಂತಿಲ್ಲ. ಏಕೆಂದರೆ, ಬೇರೆಬೇರೆ ಸ್ಥಳದ ಕಡೆಗೆ ಪ್ರವೃತ್ತಿಯುಂಟಾಗಬೇಕಾಗುತ್ತದೆ.

ಒಟ್ಟುಗೂಡಿಯೂ ಕಾರಣವಾಗುವುದಿಲ್ಲ. ಏಕೆಂದರೆ, "ಪ್ರಯತ್ನಾಯೌಗಪದ್ಯಾದ್ ಜ್ಞಾನಾಯೌಗಪದ್ಯಾಚ್ಚೈಕಮ್[27]" (ವೈ.ಸೂ.3-2-3) (ಒಂದೇಬಾರಿಗೆ ಅನೇಕಪ್ರಯತ್ನಗಳೂ, ಅನೇಕ ಜ್ಞಾನಗಳೂ ಉಂಟಾಗುವುದಿಲ್ಲವಾದ್ದರಿಂದ (ಮನಸ್ಸು) ಒಂದೇ ಇರುವುದು.) ಎಂದು ಮುಂತಾಗಿ ಒಂದೇ ಬಾರಿಗೆ ಅನೇಕ ಜ್ಞಾನಗಳುಂಟಾಗುವುದನ್ನು ನಿಷೇಧಿಸಿದ್ದಾರೆ. ಆದುದರಿಂದ ಎರಡು ಜ್ಞಾನಗಳು (ಗ್ರಹಣ-ಸ್ಮರಣ)

ವ್ಯವಹಾರಕ್ಕೆ ಕಾರಣವೆಂಬ ಮಾತು ಯುಕ್ತವಾಗುವುದಿಲ್ಲ ಎಂದು ಕೇಳಬಹುದು. ಆದರೆ, ಆ ರೀತಿ ಕೇಳಬಾರದು. ಏಕೆಂದರೆ, "ವಿನಾಶಾವಸ್ಥೆಯಲ್ಲಿಲ್ಲದಿರುವ[28]" ಎರಡು ಜ್ಞಾನಗಳಿಗೆ ಒಟ್ಟಿಗೆ ಇರುವಿಕೆಯನ್ನು ನಿಷೇಧಿಸಿದ್ದರೂ, ಒಂದು ನಾಶಾವಸ್ಥೆಯಲ್ಲಿರುವ ಮತ್ತು ಮತ್ತೊಂದು ನಾಶಾವಸ್ಥೆಯಲ್ಲಿಲ್ಲದಿರುವಂತಹ ಎರಡು ಜ್ಞಾನಗಳಿಗೆ ಒಟ್ಟಿಗೆ ಇರುವಿಕೆಯನ್ನು ನಿಷೇಧಿಸಿಲ್ಲವಾದ್ದರಿಂದ ಅನ್ಯಪಥಾನದಿಂದ ಉಂಟಾದ ಆ ಎರಡು ಜ್ಞಾನಗಳು (ಗ್ರಹಣ–ಸ್ಮರಣ) ಒಟ್ಟಿಗೆ ಇರಬಹುದು. ಹಾಗಾದರೆ, ರಜತಜ್ಞಾನದಿಂದ ರಜತಬೇಕಾದವನು ರಜತದಲ್ಲಿ ಬೇಕಾದರೆ ಪ್ರವರ್ತಿಸಲಿ, ಆದರೆ, ಮುಂದುಗಡೆಯಿರುವ ವಸ್ತುವಿನಲ್ಲಿ ಪ್ರವೃತ್ತಿಯು ಹೇಗೆ ಉಂಟಾಗುತ್ತದೆ? ಎಂದು ಕೇಳುವುದಾದರೆ, ಅದು ಯುಕ್ತವಲ್ಲ. ಏಕೆಂದರೆ, ಸ್ವರೂಪದಿಂದಲೂ ಮತ್ತು ವಿಷಯರೂಪದಿಂದಲೂ ಭೇದ ತಿಳಿಯದಿರುವ ಗ್ರಹಣ–ಸ್ಮರಣಗಳಿಗೆ ಸಂನಿಹಿತ ರಜತವಿಷಯಕವಾದ[29] ಜ್ಞಾನದ ಸಾರೂಪ್ಯವಿರುವುದರಿಂದ ವಸ್ತುತಃ ಪರಸ್ಪರವಾಗಿ ವಿಭಿನ್ನವಾಗಿದ್ದರೂ ಅಭೇದಕ್ಕೆ ಬೇಕಾದ ಸಾಮಾನಾಧಿಕರಣ್ಯ ವ್ಯವಹಾರವು ಉಪಪನ್ನವಾಗುತ್ತದೆ. ಗ್ರಹಣ–ಸ್ಮರಣೆಗಳಿಗೆ ಸಂನಿಹಿತರಜತಜ್ಞಾನದ ಸಾರೂಪ್ಯವು ಹೇಗೆ? ಎಂದರೆ, ಅದು ಹೇಗೆ ಎಂಬುದನ್ನು ತಿಳಿಸುತ್ತೇವೆ :–

ಸಂನಿಹಿತವಾದ ರಜತವನ್ನು ವಿಷಯವಾಗಿ ಉಳ್ಳ ಜ್ಞಾನವು "ಇದು" ಎಂಬ ಅಂಶ ಮತ್ತು "ರಜತ" ಎಂಬ ಅಂಶಗಳಿಗೆ ಸಂಬಂಧವಿಲ್ಲವೆಂಬುದಾಗಿ ಗ್ರಹಿಸುವುದಿಲ್ಲ. ಏಕೆಂದರೆ, ಆ ಎರಡು ಅಂಶಗಳೂ ಪರಸ್ಪರ ಸೇರಿಕೊಂಡಿರುವುದರಿಂದ ಸಂಸರ್ಗವಿಲ್ಲದಿರಲು ಆಗುವುದಿಲ್ಲ. ಮತ್ತು ತನ್ನಲ್ಲೇ (ಜ್ಞಾನದಲ್ಲೇ) ಇರುವ ಭೇದವನ್ನು ಗ್ರಹಿಸುತ್ತದೆ ಎಂದೂ ಹೇಳಲಾಗುವುದಿಲ್ಲ. ಏಕೆಂದರೆ, ಆ ಜ್ಞಾನವು (ಸಂನಿಹಿತ ರಜತಜ್ಞಾನವು) ಒಂದೇಹೊರತು ಬೇರೆಬೇರೆಯಾದುದಲ್ಲ. ಇದೇ ರೀತಿಯಾಗಿ, ಗ್ರಹಣ–ಸ್ಮರಣಗಳೂ ಕೂಡ "ಇದು" ಎಂಬ ಅಂಶ ಮತ್ತು "ರಜತ" ಎಂಬ ಅಂಶಗಳಿಗೆ ವಸ್ತುತಃ ಸಂಬಂಧವಿಲ್ಲದಿದ್ದರೂ ಮತ್ತು ಭೇದವಿದ್ದರೂ, ದೋಷವಶದಿಂದ ಸಂಬಂಧವಿಲ್ಲವೆಂಬುದಾಗಿಯೂ, ಭೇದವಿದೆಯೆಂಬುದಾಗಿಯೂ ಗ್ರಹಿಸುವುದಿಲ್ಲ. ಆದ್ದರಿಂದ ಭೇದವನ್ನು ಗ್ರಹಿಸದಿರುವಿಕೆಯೇ ಸಾರೂಪ್ಯವು. ಈ ವಿಷಯವನ್ನೇ ಗುರುಮತಾನುಸಾರಿಗಳಾದವರು ಹೇಳಿದ್ದಾರೆ :—"ಭೇದವನ್ನು ಗ್ರಹಿಸದಿರುವ ಈ ಗ್ರಹಣ–ಸ್ಮರಣೆಗಳು ಸತ್ಯರಜತ ಜ್ಞಾನಕ್ಕಿಂತಲೂ ವಸ್ತುತಃ ಭಿನ್ನವಾದುವುಗಳು. ಹಾಗಿದ್ದರೂ, ಭೇದವನ್ನು ಗ್ರಹಿಸದಿರುವಿಕೆಯೆಂಬ ಸಾಮ್ಯವಿರುವುದರಿಂದ ಪರಸ್ಪರ ಭಿನ್ನವಾದವುಗಳಾಗಿ ತೋರುವುದಿಲ್ಲ. ಸತ್ಯರಜತಜ್ಞಾನವಾದರೋ ಎದುರಿಗಿರುವ ವಸ್ತುವನ್ನೇ ವಿಷಯವಾಗಿ ಉಳ್ಳದ್ದಾಗಿರುತ್ತದೆ. ಆದುದರಿಂದ ಈ ಗ್ರಹಣ–ಸ್ಮರಣೆಗಳನ್ನು ಭಿನ್ನವಾದವುಗಳೆಂದು ತಿಳಿಯದೆ, ಲೋಕವು ಕೇವಲ ಸಮಾನವಾಗಿರುವ ರೂಪದಿಂದಲೇ ತಿಳಿಯುತ್ತದೆ. ಅಪರೋಕ್ಷವಾಗಿ ತೋರುವುದರಿಂದಲೂ, ಸಮಾನವಾಗಿರುವ ಅರ್ಥವನ್ನು ಗ್ರಹಿಸುವುದರಿಂದಲೂ ಭೇದವು ತೋರುವುದಿಲ್ಲವೆಂಬುದು ಸಮರ್ಥಿತವಾಗುತ್ತದೆ. ವ್ಯವಹಾರವೂ ಕೂಡ ಅದಕ್ಕೆ ಸದೃಶವಾಗಿಯೇ ಇರುತ್ತದೆ. ಅದರಿಂದಲೇ ಲೋಕವು ಪ್ರವರ್ತಿಸುತ್ತದೆ." (ಪ್ರ.ಪಂ.4-33-37)

ಈ ರೀತಿಯಾಗಿ ಭೇದವನ್ನು ಗ್ರಹಿಸದಿರುವ ಮತ್ತು ಸಂನಿಹಿತರಜತಜ್ಞಾನದ ಸಾಮ್ಯವನ್ನು ಹೊಂದಿರುವ ಗ್ರಹಣ–ಸ್ಮರಣೆಗಳೆಂಬ ಎರಡು ಜ್ಞಾನಗಳು ಮಿಥ್ಯಾವ್ಯವಹಾರಕ್ಕೆ ಕಾರಣವೆಂಬುದಾಗಿ ಸಿದ್ಧವಾಗುತ್ತದೆ.

"ಪೀತಃ ಶಙ್ಖ" ಇತಿ ವ್ಯವಹಾರಸ್ಯ ಸಮರ್ಥನಮ್

ಯದ್ಯೇವಮಯಥಾವ್ಯವಹಾರೋ ಗ್ರಹಣಸ್ಮರಣಜನ್ಯಸ್ತರ್ಹಿ ಪೀತಃಶಙ್ಖ ಇತ್ಯಾದೌ ಸ ನ ಸಿದ್ಧಸ್ತತ್ರ ತಯೋರಭಾವಾದಿತಿ ಚೇನ್ನ। ಅಗೃಹೀತವಿವೇಕಯೋಃ ಪ್ರಾಪ್ತಸಮೀಚೀನಸಂಸರ್ಗಜ್ಞಾನಸಾರೂಪ್ಯತ್ವೇ ಗ್ರಹಣಯೋರೇವ ವ್ಯವಹಾರಸಮ್ಪಾದಕತ್ವೋಪಪತ್ತೇಃ। ನಯನರಶ್ಮಿವರ್ತಿನಃ ಪಿತ್ತದ್ರವ್ಯಸ್ಯ ಪೀತಿಮಾ ದೋಷವಶಾದ್ದ್ರವ್ಯರಹಿತೋ ಗೃಹ್ಯತೇ। ಶಙ್ಖೋಽಪ್ಯಕಲಿತಶುಕ್ಲಗುಣಃ ಸ್ವರೂಪತೋ ಗೃಹ್ಯತೇ। ತದನಯೋರ್ಗುಣಗುಣಿನೋಃ ಸಂಸರ್ಗಯೋಗ್ಯಯೋರಸಂಸರ್ಗಾಗ್ರಹಸಾರೂಪ್ಯಾತ್ಪೀತತಪನೀಯಪಿಣ್ಡಪ್ರತ್ಯಯಾವೈಲಕ್ಷಣ್ಯಾದ್ವ್ಯವಹಾರ ಉಪಪದ್ಯತೇ। ಯಥೋಕ್ತಮ್ :—

"ಪೀತಶಙ್ಖಾವಬೋಧೇ ಹಿ ಪಿತ್ತಸ್ಯೇನ್ದ್ರಿಯವರ್ತಿನಃ।
ಪೀತಿಮಾ ಗೃಹ್ಯತೇ ದ್ರವ್ಯರಹಿತೋ ದೋಷತಸ್ತಥಾ॥
ಶಙ್ಖಸ್ಯೇನ್ದ್ರಿಯದೋಷೇಣ ಶುಕ್ಲಿಮಾ ನಚ ಗೃಹ್ಯತೇ।
ಕೇವಲಂ ದ್ರವ್ಯಮಾತ್ರಂ ತು ಪ್ರಥತೇ ರೂಪವರ್ಜಿತಮ್
ಗುಣೇ ದ್ರವ್ಯವ್ಯಪೇಕ್ಷೇಚ ದ್ರವ್ಯೇಚ ಗುಣಕಾಙ್ಕ್ಷಿಣಿ।
ಭಾಸಮಾನೇ ತಯೋರ್ಬುದ್ಧಿರಸಮ್ಬನ್ಧಂ ನ ಬುಧ್ಯತೇ॥
ಸತ್ಯಪೀತಾವಭಾಸೇನ ಸಮೇ ಭಾತೇ ಮತೀ ಇಮೇ।
ವ್ಯವಹಾರೋಽಪಿ ತತ್ತುಲ್ಯ ಏವಮತ್ರಾಪಿ ಯುಜ್ಯತೇ॥" ಇತಿ। (ಪ್ರಕ.ಪಂ.4-48-51)

"ಹಳದಿಯಾದ ಶಂಖ"ವೆಂಬ ವ್ಯವಹಾರದ ಸಮರ್ಥನೆ

ಹಾಗಾದರೆ, ಮಿಥ್ಯಾವ್ಯವಹಾರವು ಗ್ರಹಣ–ಸ್ಮರಣೆಗಳಿಂದುಂಟಾಗುವುದಾದರೆ "ಹಳದಿಯಾದ ಶಂಖ" ಎಂದು ಮುಂತಾದೆಡೆಯಲ್ಲಿ ಮಿಥ್ಯಾವ್ಯವಹಾರವು ಸಿದ್ಧಿಸುವುದಿಲ್ಲ; ಏಕೆಂದರೆ, ಅಲ್ಲಿ "ಗ್ರಹಣ–ಸ್ಮರಣೆಗಳು[30] ಇಲ್ಲ—ಎಂದು ಹೇಳುವುದಾದರೆ, ಅದು ಯುಕ್ತವಾಗುವುದಿಲ್ಲ. ಏಕೆಂದರೆ, ಭೇದವನ್ನು ಗ್ರಹಿಸದಿರುವ ಎರಡು ಗ್ರಹಣಾತ್ಮಕ ಜ್ಞಾನಗಳಿಗೇ ಸಮೀಚೀನಸಂಸರ್ಗಜ್ಞಾನದ ಸಾಮ್ಯವಿರುವುದರಿಂದ ಆ ಗ್ರಹಣರೂಪವಾದ ಜ್ಞಾನಗಳೇ ವ್ಯವಹಾರಕ್ಕೆ ಕಾರಣವಾಗುತ್ತವೆಯೆಂಬುದು ಉಪಪನ್ನವಾಗುತ್ತದೆ. ಕಣ್ಣಿನ ಕಿರಣಗಳಲ್ಲಿರುವ ಪಿತ್ತದ್ರವ್ಯದ ಹಳದಿಬಣ್ಣವು ದೋಷವಶದಿಂದ ದ್ರವ್ಯಭಾಗವನ್ನು ಬಿಟ್ಟು ಗ್ರಹಿಸಲ್ಪಡುತ್ತದೆ. ಶಂಖವೂ ಕೂಡ ಗ್ರಹಿಸಲ್ಪಡದಿರುವ ಬಿಳಿಬಣ್ಣವುಳ್ಳದ್ದಾಗಿ ಸ್ವರೂಪತಃ ಗ್ರಹಿಸಲ್ಪಡುತ್ತದೆ. ಆದುದರಿಂದ ಈ ಗುಣ ಮತ್ತು ಗುಣಿಗಳು ಸಂಸರ್ಗಯೋಗ್ಯಗಳಾ

ಗಿರಲಾಗಿ, ಸಂಸರ್ಗವಿಲ್ಲದಿರುವುದನ್ನು ಗ್ರಹಿಸದಿರುವ ಸಾಮ್ಯವಿರುವುದರಿಂದ "ಹಳದಿಯಾ ಚಿನ್ನದಗಟ್ಟಿ" ಎಂಬ ಜ್ಞಾನಕ್ಕಿಂತ ವಿಲಕ್ಷಣವಾಗಿಲ್ಲದಿರುವುದರಿಂದ ವ್ಯವಹಾರವು ಉ ಪನ್ನವಾಗುತ್ತದೆ. ಇದನ್ನೇ ಹೇಳಿದ್ದಾರೆ:—"ಹಳದಿಯಾದ ಶಂಖ ಎಂಬ ಜ್ಞಾನದ ಚಕ್ಷುರಿಂದ್ರಿಯದಲ್ಲಿರುವ ಪಿತ್ತದ್ರವ್ಯದ ಹಳದಿಬಣ್ಣವು ದೋಷವಶದಿಂದ ದ್ರವ್ಯಬಿಟ್ ಗ್ರಹಿಸಲ್ಪಡುತ್ತದೆ. ಹಾಗೆಯೇ ಇಂದ್ರಿಯದೋಷದಿಂದ ಶಂಖದ ಬಿಳುಪು ಗ್ರಹಿಸಲ್ಪಡ ವುದಿಲ್ಲ. ರೂಪರಹಿತವಾಗಿ ಕೇವಲ ದ್ರವ್ಯಮಾತ್ರ ತೋರುತ್ತದೆ. ಗುಣವು ತನಗೆ ಆಶ್ರ ವಾದ ದ್ರವ್ಯವನ್ನು ಅಪೇಕ್ಷಿಸುತ್ತದೆ; ದ್ರವ್ಯವು ತನ್ನಲ್ಲಿ ಗುಣವನ್ನು ಅಪೇಕ್ಷಿಸುತ್ತ ಆದರೆ, ಇಲ್ಲಿ ತೋರುತ್ತಿರುವ ದ್ರವ್ಯ ಮತ್ತು ಗುಣಗಳಿಗೆ ಸಂಬಂಧವಿಲ್ಲದಿರುವುದನ್ನು ದೋ ವಶದಿಂದ ಬುದ್ಧಿಯು ಗ್ರಹಿಸುವುದಿಲ್ಲ. ಈ ಗುಣ–ದ್ರವ್ಯಜ್ಞಾನಗಳು (ದೋಷವಶದಿಂ ನಿಜವಾಗಿ ಹಳದಿಯಾಗಿರುವ ವಸ್ತುವಿನ ಜ್ಞಾನಕ್ಕೆ ಸಮಾನವಾಗಿಯೇ ತೋರುತ್ತವೆ ಆದುದರಿಂದ ಇಲ್ಲಿ ವ್ಯವಹಾರವೂ ಕೂಡ ಅದಕ್ಕೆ ಸದೃಶವಾಗಿಯೇ ಯುಕ್ತವಾಗುತ್ತದೆ. (ಪ್ರಕ.ಪಂ.4-84-51)

ನೇದಂರಜತಮಿತಿ ಬಾಧಕಜ್ಞಾನಸ್ಯೋಪಪತ್ತಿಃ

ನನ್ವಿದಂ ರಜತಮಿತಿ ಭ್ರಾನ್ತಿಜ್ಞಾನಾನಭ್ಯುಪಗಮೇ ರಜತಪ್ರಸಕ್ತೇರಸತ್ತ್ವಾನ್ನೇದ ರಜತಮಿತಿ ನಿಷೇಧಃ ಕಥಂ ಕಲಧೌತಾಭಾವಂ ಬೋಧಯತೀತಿ ಚೇತ್ ನೈಷ ದೋಷ ಭೇದಾಗ್ರಹಪ್ರಸಞ್ಜಿತಸ್ಯ ಶುಕ್ತೌ ರಜತವ್ಯವಹಾರಸ್ಯ ನಿಷೇಧಸ್ವೀಕಾರೇಣ ಕಲ್ಪನಾಲಾಘ ಸದ್ಭಾವಾತ್। ತದುಕ್ತಂ ಪಞ್ಚಿಕಾಪ್ರಕರಣೇ :—

"ಮಿಥ್ಯಾಭಾವೋಽಪಿ ತತ್ತುಲ್ಯವ್ಯವಹಾರಪ್ರವರ್ತನಾತ್।
ರಜತವ್ಯವಹಾರಾಂಶೇ ವಿಸಂವಾದಯತೋ ನರಾತ್॥

ಬಾಧಕಪ್ರತ್ಯಯಸ್ಯಾಪಿ ಬಾಧಕತ್ವಮತೋಮತಮ್।
ಪ್ರಸಜ್ಯಮಾನರಜತವ್ಯವಹಾರನಿವಾರಣಾತ್॥" ಇತಿ। (ಪ್ರಕ.ಪಂ.4.38-39)

ತದನೇನ ಪ್ರಾಚೀನಯೋಃ ಜ್ಞಾನಯೋಃ ಸತ್ಯತ್ವೇ ಕಥಂ ಭ್ರಮತ್ವಪ್ರಸಿದ್ಧಿ ಶಙ್ಕಾ ಪರಾಕೃತಾ। ಅಯಥಾವ್ಯವಹಾರಪ್ರವರ್ತಕತ್ವೇನ ತದುಪಪತ್ತೇಃ।

"ಇದು ರಜತವಲ್ಲ" ಎಂಬ ಬಾಧಕಜ್ಞಾನಕ್ಕೆ ಉಪಪತ್ತಿ

ಹಾಗಾದರೆ "ಇದು ರಜತ"ವೆಂಬ ಭ್ರಮಾತ್ಮಕ ಜ್ಞಾನವನ್ನು ಅಂಗೀಕರಿಸದಿದ್ದ ರಜತಕ್ಕೆ ಪ್ರಸಕ್ತಿಯೇ ಇಲ್ಲವಾದ್ದರಿಂದ "ಇದು ರಜತವಲ್ಲ" ಎಂಬ ನಿಷೇಧವು (ಬಾಧ ಜ್ಞಾನವು) ರಜತದ ಅಭಾವವನ್ನು ಹೇಗೆ ತಿಳಿಸುತ್ತದೆ? ಎಂದು ಕೇಳಬಹುದು. ಆದ ಇದೇನೂ ದೋಷವಲ್ಲ. ಭೇದವನ್ನು ಗ್ರಹಿಸದಿರುವುದರಿಂದ ಪ್ರಸಕ್ತವಾದ ಶುಕ್ತಿಯ ರಜತವೆಂಬ ವ್ಯವಹಾರಕ್ಕೆ ನಿಷೇಧವನ್ನು ಅಂಗೀಕರಿಸುವುದರಿಂದ ಕಲ್ಪನಾಲಾಘವ

ಇರುತ್ತದೆ. ಇದನ್ನೇ ಪ್ರಕರಣಪಂಚಿಕೆಯಲ್ಲಿ, "ಯಥಾರ್ಥಜ್ಞಾನದಿಂದ ಉಂಟಾಗುವ ವ್ಯವಹಾರಕ್ಕೆ ಸದೃಶವಾದ ವ್ಯವಹಾರದಲ್ಲಿ ಪ್ರವೃತ್ತಿಯನ್ನುಂಟುಮಾಡುವುದರಿಂದಲೂ, ವ್ಯವಹಾರಕಾಲದಲ್ಲಿ ವಿಸಂವಾದಿ(ನಿಷ್ಫಲ)ಯಾಗುವುದರಿಂದಲೂ ಮಿಥ್ಯಾತ್ವವು ರಜತ ವ್ಯವಹಾರಾಂಶದಲ್ಲಿ ಮಾತ್ರ. ಆದುದರಿಂದಲೇ ಪ್ರಸಕ್ತವಾಗಿರುವ ರಜತವ್ಯವಹಾರವನ್ನು ನಿಷೇಧಿಸುವುದರಿಂದ ಬಾಧಕಜ್ಞಾನಕ್ಕೂ ಕೂಡ ಬಾಧಕತ್ವವು ಸರಿಹೊಂದುತ್ತದೆ." (ಪ್ರಕ.ಪಂ.4–38,39)

ಆದುದರಿಂದ ಪ್ರಾಚೀನವಾದ ಜ್ಞಾನಗಳು (ಗ್ರಹಣ-ಸ್ಮರಣಗಳು) ಸತ್ಯವಾಗಿರುವಾಗ ಭ್ರಮತ್ವವೆಂಬುದು ಹೇಗೆ ಪ್ರಸಿದ್ಧವಾಗುತ್ತದೆ? ಎಂಬ ಶಂಕೆಯೂ ನಿರಾಕೃತವಾಗುತ್ತದೆ. ಏಕೆಂದರೆ ಅಯಥಾಭೂತವಾದ ವ್ಯವಹಾರಪ್ರವೃತ್ತಿಯನ್ನುಂಟುಮಾಡುವುದರಿಂದ ಭ್ರಮೆಯೆಂಬುದಾಗಿ ಉಪಪನ್ನವಾಗುತ್ತದೆ.

ಪ್ರಾಭಾಕರಮತಾನುಸಾರೇಣ ಅಭಾವಸ್ಯನಿರಾಕರಣಮ್-ನಕಾರಾರ್ಥೋಪಪಾದನಞ್ಚ

ಕಿಂಚ ನೇದಂ ರಜತಮಿತಿ ಬಾಧಕಾವಬೋಧೋ ನಾಭಾವಮವಗಾಹತೇ। ಭಾವವ್ಯತಿರೇಕೇಣಾಭಾವಸ್ಯ ದುರ್ಗ್ರಹಣತ್ವಾತ್। ಯದ್ಯೇವಮಙ್ಗ! ನಾಸ್ತೀತಿಪ್ರತ್ಯಯಸ್ಯ ಕಿಮಾಲಮ್ಬನಮ್? ಅಪರಥಾ ಮಾಹಾಭಾನಿಕಪಕ್ಷಾನುಪ್ರವೇಶ ಇತಿ ಚೇತ್—ಮೈವಂ ಭಾಷಿಷ್ಠಾಃ। ಅಭಾವಸ್ಯ ಧರ್ಮಿಪ್ರತಿಯೋಗಿನಿರೂಪಣಾಧೀನನಿರೂಪ್ಯತ್ವೇವಾವಶ್ಯಾಭ್ಯುಪಗಮನೀಯೇ ದೃಶ್ಯೇ ಪ್ರತಿಯೋಗಿನ್ಯದೃಶ್ಯೇವಾ ಸ್ಮರ್ಯಮಾಣೇಽಧಿಕರಣಮಾತ್ರಬುದ್ಧೇರೇವ ನಾಸ್ತೀತಿ ವ್ಯವಹಾರೋಪಪತ್ತಾವತಿರಿಕ್ತಾಭಾವಕಲ್ಪನಾಯಾಂ ಪ್ರಮಾಣಾಭಾವಾತ್। ತದುಕ್ತಮುಮೃತಕಲಾಯಾಮ್ :–

"ಅತ್ರೋಚ್ಯತೇ ದ್ವಯೀ ಸಂವಿದ್ವಸ್ತುನೋ ಭೂತಲಾದಿನಃ।
ಏಕಾ ಸಂಸೃಷ್ಟವಿಷಯಾ ತನ್ಮಾತ್ರವಿಷಯಾ ಪರಾ॥
ತನ್ಮಾತ್ರವಿಷಯಾ ವಾಪಿ ದ್ವಯೀ ಸಾಽಥ ನಿಗದ್ಯತೇ।
ಪ್ರತಿಯೋಗಿನ್ಯದೃಶ್ಯೇಚ ದೃಶ್ಯೇಚ ಪ್ರತಿಯೋಗಿನಿ॥
ತತ್ರತನ್ಮಾತ್ರಧೀರ್ಯೇಯಂ ಸ್ಮೃತೇಚ ಪ್ರತಿಯೋಗಿನಿ।
ನಾಸ್ತಿತ್ವಂ ಸೈವ ಭೂಭಾಗೇ ಘಟಾದಿಪ್ರತಿಯೋಗಿನಃ॥" ಇತಿ। (ಪ್ರಕ.ಪಂ.63.7-39)

ಅತಏವಚ ಪ್ರಾಭಾಕರಮತಾನುಸಾರಿಭಿಃ ಪ್ರಮಾಣಪಾರಾಯಣೇ ಪ್ರತ್ಯಕ್ಷಾದೀನಿ ಪಞ್ಚೈವ ಪ್ರಮಾಣಾನಿ ಪ್ರಪಞ್ಚಿತಾನಿ।

ನನ್ವೇವಮಭಾವಸ್ಯಾಭಾವೇ ನಕಾರಸ್ಯ ವೈಯರ್ಥ್ಯಮಾಪದ್ಯೇತ। ಅನುಶಾಸನವಿರೋಧಶ್ಚಾಪತೇದಿತಿ ಚೇತ್– ತದೇತದ್ವಾರ್ತಮ್। ಏಕೋನ ಪಞ್ಚಾಶದ್ವರ್ಣಾನಾಂ ಮಧ್ಯೇ ಕಸ್ಯಾಪಿ ವರ್ಣಸ್ಯಾಭಾವಾರ್ಥತ್ವಾದರ್ಶನೇನ ವರ್ಣಸ್ಯಸತೋ ನಕಾರಸ್ಯ ತದರ್ಥತ್ವಾನು

ಪಪತ್ತೇಃ। ನ ಚೈವಮನುಶಾಸನವಿರೋಧಃ। ತದನ್ಯತದಭಾವತದ್ವಿರುದ್ಧೇಷ್ವರ್ಥೇಷ್ವ ಶಾಸನಸ್ಯೈವಮರ್ಥಃಸ್ಯಾತ್। ತಥಾಹಿ :—ಚೇತನಾನಾಂ ಮಧ್ಯೇ ಕಶ್ಚನ ಕಸ್ಯಚಿಚ್ಛತ್ರು ಕಶ್ಚನ ಕಸ್ಯಚಿನ್ಮಿತ್ರಂ ಕಶ್ಚನ ಕಸ್ಯಚಿದುದಾಸೀನಸ್ತಥೈವಾಚೇತನಾನಾಮಪಿ। ತದನ್ಯಪದೇ ತದುದಾಸೀನೋ ನಕಾರಾರ್ಥಃ। ವಿರುದ್ಧಪದೇನ ಶತ್ರುರ್ನಕಾರಾರ್ಥಃ। ತದಭಾವಪದೇ ಮಿತ್ರಂ ನಕಾರಾರ್ಥಃ। ತಥಾಚಾಬ್ರಾಹ್ಮಣಪದ ಏವೈತತ್ತ್ರಯಂ ಪ್ರತೀಯತೇ ಶೂದ್ರ ಇತ ದಾಸೀನೋ, ಯವನ ಇತಿ ಶತ್ರುಃ, ಕ್ಷತ್ರಿಯ ಇತಿ ಮಿತ್ರಮ್। ಏವಂ ಸರ್ವತ್ರ ನಞ ಪ್ರಯೋಗಸ್ಥಲೇ ದ್ರಷ್ಟವ್ಯಮಿತಿ ನ ಕಶ್ಚಿದಭಾವೋ ಭಾವವ್ಯತಿರಿಕ್ತಃ ಸಮ್ಭವತಿ।

ತಸ್ಮಾದುಕ್ತಯಾ ರೀತ್ಯಾ ಭ್ರಮಪ್ರಸಿದ್ಧ್ಯೈ ವಿವಾದಾಧ್ಯಾಸಿತಾಃ ಪ್ರತ್ಯಯ ಯಥಾರ್ಥಾಃ ಪ್ರತ್ಯಯತ್ವಾತ್, ದಣ್ಡೀತಿಪ್ರತ್ಯಯವದಿತಿ ಸಿದ್ಧಮ್।

ಪ್ರಾಭಾಕರಮತದಂತೆ ಅಭಾವದ ಖಂಡನೆ ಮತ್ತು ನಕಾರದ ಅರ್ಥ

ಮತ್ತು, "ಇದು ರಜತವಲ್ಲ"ವೆಂಬ ಬಾಧಕಜ್ಞಾನವು ಅಭಾವವನ್ನು ವಿಷಯಿ ಕರಿಸುವುದಿಲ್ಲ ಏಕೆಂದರೆ, ಭಾವಕ್ಕಿಂತಲೂ ಬೇರೆಯಾದ ಅಭಾವವನ್ನು ಗ್ರಹಿಸಲ ಸಾಧ್ಯವಿಲ್ಲ. ಅಯ್ಯೋ! ಹಾಗಾದರೆ, "ಇಲ್ಲ" ಎಂಬ ಜ್ಞಾನಕ್ಕೆ ಆಲಂಬನವೇನು ಆಲಂಬನವೇ ಇಲ್ಲದೆಹೋದರೆ, "ಮಾಧ್ಯಮಿಕ ಬೌದ್ಧರಪಕ್ಷವನ್ನು"[31] ಪ್ರವೇಶಮಾಡಿದಂ ಯಾಗುತ್ತದೆ—ಎನ್ನುವುದಾದರೆ, ಹಾಗೆ ಹೇಳಕೂಡದು. ಅಭಾವದ ಜ್ಞಾನ (ಆಶ್ರಯವಾದ) ಧರ್ಮಿ ಮತ್ತು ಪ್ರತಿಯೋಗಿಗಳ ಜ್ಞಾನವು ಇದ್ದರೆ ಮಾತ್ರ ಉಂಟಾಗ ವುದರಿಂದ ದೃಶ್ಯವಾದ ಅಥವಾ ದೃಶ್ಯವಾಗಿಲ್ಲದಿದ್ದರೆ ಸ್ಮರಿಸಲ್ಪಡುವ ಪ್ರತಿಯೋಗಿಯನ ಅವಶ್ಯವಾಗಿ ಅಂಗೀಕರಿಸಬೇಕಾಗಿರುವಾಗ, ಕೇವಲ ಅಧಿಕರಣಜ್ಞಾನದಿಂದಲೇ "ಇಲ್ಲ ಎಂಬ ವ್ಯವಹಾರಕ್ಕೆ ಉಪಪತ್ತಿಯಿರುವಾಗ ಬೇರೆಯಾದ ಅಭಾವವನ್ನು ಕಲ್ಪಿಸುವುದಕ ಪ್ರಮಾಣವಿಲ್ಲ. ಇದನ್ನೇ ಪ್ರಕರಣಪಂಚಿಕೆಯ ಅಮೃತಕಲಾಪ್ರಕರಣದಲ್ಲಿ ಹೇಳಿದ್ದಾರೆ:— "ಇಲ್ಲಿ ಹೇಳಲ್ಪಡುತ್ತದೆ; ಭೂತಲ ಮೊದಲಾದ ವಸ್ತುವಿನ ಜ್ಞಾನವು ಎರಡು ವಿ ವಾಗಿರುತ್ತದೆ. ಒಂದು ಸಂಸೃಷ್ಟವಿಷಯಕವಾದ ಜ್ಞಾನ. ಮತ್ತೊಂದು ತನ್ಮಾತ್ರ ವಿಷಯಕವಾದ ಜ್ಞಾನ ತನ್ಮಾತ್ರವಿಷಯಕವಾದ ಜ್ಞಾನವೂಕೂಡ ಎರಡು ವಿಧವಾಗಿ ತ್ತದೆ. ಪ್ರತಿಯೋಗಿಯು ಅದೃಶ್ಯ ವಾಗಿರುವಾಗ ಉಂಟಾಗುವ ಜ್ಞಾನ ಒಂದು. ಪ್ರ ಯೋಗಿಯು ದೃಶ್ಯವಾಗಿರುವಾಗ ಉಂಟಾಗುವ ಜ್ಞಾನ ಮತ್ತೊಂದು. ಆ ಪೈಕಿ ಪ್ರ ಯೋಗಿಯು ಅದೃಶ್ಯವಾಗಿದ್ದು ಸ್ಮರಿಸಲ್ಪಟ್ಟಾಗ ಉಂಟಾಗುವ ತನ್ಮಾತ್ರವಿಷಯಕವಾ ಜ್ಞಾನವೇ ಭೂತಲದಲ್ಲಿ ಘಟ ಮುಂತಾದ ಪ್ರತಿಯೋಗಿಯ ಅಭಾವವೆಂಬ ಜ್ಞಾನವ (ಅಂದರೆ, ಅಭಾವವು ಭೂತಲ ರೂಪವಾಗಿ ಇರುವುದು.) (ಪ್ರಕ.ಪಂ.6.37-39)

ಆದುದರಿಂದಲೇ ಪ್ರಾಭಾಕರಮತಾನುಯಾಯಿಗಳು ಪ್ರಕರಣಪಂಚಿಕೆಯ "ಪ್ರಮಾಣಪಾರಾಯಣ"ವೆಂಬ ಪ್ರಕರಣದಲ್ಲಿ ಪ್ರತ್ಯಕ್ಷ ಮೊದಲಾದ ಐದೇ ಪ್ರಮಾ ಗಳನ್ನು ನಿರೂಪಿಸಿದ್ದಾರೆ.

ಹಾಗಾದರೆ, ಈ ರೀತಿಯಾಗಿ, ಅಭಾವವೆಂಬುದೇ ಇಲ್ಲದಿದ್ದರೆ, "ನಕಾರ"ವು ಅರ್ಥರಹಿತವಾಗಬೇಕಾಗುತ್ತದೆ ಮತ್ತು ನಞ್‌ತತ್ಪುರುಷಸಮಾಸವಿಧಾಯಕವಾದ ಪಾಣಿನಿಯ ಸೂತ್ರಕ್ಕೆ ವಿರೋಧ ಬರುತ್ತದೆ—ಎಂದು ಹೇಳಬಹುದು. ಆದರೆ ಹಾಗೆ ಹೇಳುವುದು ಬರಿ ಸುದ್ದಿಯಷ್ಟೆ! (ಸಾರವಿಲ್ಲದ ಮಾತು) ಏಕೆಂದರೆ, "ನಲವತ್ತೊಂಬತ್ತು"[೩೩] ವರ್ಣಗಳ" ಪೈಕಿ ಯಾವ ವರ್ಣಕ್ಕೂ ಅಭಾವ ಎಂಬ ಅರ್ಥವು ಕಂಡುಬರುವುದಿಲ್ಲವಾದ್ದರಿಂದ ವರ್ಣವಾಗಿರುವ ನಕಾರಕ್ಕೆ ಅಭಾವಾರ್ಥಕತ್ವವು ಉಪಪನ್ನವಾಗುವುದಿಲ್ಲ. ಮತ್ತು, ಈ ರೀತಿಯಾಗಿ ಪಾಣಿನಿಯ ಶಾಸ್ತ್ರಕ್ಕೆ ವಿರೋಧವೂ ಇಲ್ಲ. ಏಕೆಂದರೆ, ಅದಕ್ಕಿಂತ ಬೇರೆಯಾದುದು, ಅದರ ಅಭಾವ ಮತ್ತು ಅದಕ್ಕೆ ವಿರುದ್ಧವಾದುದು—ಎಂಬ ಅರ್ಥಗಳಲ್ಲಿ ಅನುಶಾಸನಕ್ಕೆ (ಪಾಣಿನಿಯ ಸೂತ್ರಕ್ಕೆ) ಹೀಗೆ ಅರ್ಥವು ಇರಬಹುದು. ಹೇಗೆಂದರೆ:— ಚೇತನರ ಪೈಕಿ ಒಬ್ಬನು ಮತ್ತೊಬ್ಬನಿಗೆ ಶತ್ರುವು. ಒಬ್ಬನು ಮತ್ತೊಬ್ಬನಿಗೆ ಮಿತ್ರನು. ಒಬ್ಬನು ಮತ್ತೊಬ್ಬನಿಗೆ ಉದಾಸೀನನು. ಹಾಗೆಯೇ ಅಚೇತನವಾದವುಗಳಲ್ಲಿಯೂ ಇರುತ್ತದೆ. ಅದಕ್ಕಿಂತ ಬೇರೆಯಾದುದು ಎಂಬುವಾಗ ಅದಕ್ಕೆ ಉದಾಸೀನವಾದುದೆಂಬುದೇ ನಕಾರದ ಅರ್ಥ. ವಿರುದ್ಧವಾದುದು ಎನ್ನುವಾಗ ಶತ್ರು ಎಂಬುದಾಗಿ ನಕಾರದ ಅರ್ಥ. ಅದರ ಅಭಾವ ಎಂದರೆ ಮಿತ್ರ ಎಂಬುದಾಗಿ ನಕಾರದ ಅರ್ಥ. ಹಾಗೆಯೇ ಅಬ್ರಾಹ್ಮಣ ಎಂಬ ಪದದಲ್ಲಿಯೇ ಈ ಮೂರು ಅರ್ಥಗಳೂ ತೋರುತ್ತವೆ; ಶೂದ್ರ ಎಂಬುದು ಉದಾಸೀನ; ಯವನ ಎಂಬುದು ಶತ್ರು; ಕ್ಷತ್ರಿಯ ಎಂಬುದು ಮಿತ್ರ. ಇದೇರೀತಿಯಾಗಿ ಎಲ್ಲೆಡೆಯಲ್ಲಿಯೂ ನಕಾರದ ಪ್ರಯೋಗದ ಸ್ಥಳದಲ್ಲಿ ತಿಳಿಯಬೇಕು. ಆದ್ದರಿಂದ ಭಾವಕ್ಕಿಂತಲೂ ಬೇರೆಯಾದ ಅಭಾವವೆಂಬುದು ಸಂಭವಿಸುವುದೇ ಇಲ್ಲ.

ಆದುದರಿಂದ, ಹೀಗೆ ಹೇಳಿದ ರೀತಿಯಲ್ಲಿ ಭ್ರಮವು ಉಪಪನ್ನವಾಗುವುದರಿಂದ,

> "ವಿವಾದವಿಷಯವಾದ ಪ್ರತೀತಿಗಳು ಯಥಾರ್ಥವಾದವುಗಳು; ಪ್ರತೀತಿಯಾಗಿರುವುದರಿಂದ; ದಂಡೀ(ದಂಡವುಳ್ಳವನು) ಎಂಬ ಪ್ರತೀತಿಯಂತೆ

ಸಿದ್ಧವಾಗುತ್ತದೆ."

ವೇದಾನ್ತಸಿದ್ಧಾನ್ತಾನುಸಾರೇಣ ಮಿಥ್ಯಾಜ್ಞಾನಸ್ಯಸಮರ್ಥನಮ್

ತದಪರೇ ನ ಕ್ಷಮನ್ತೇ। ಇಹ ಖಲು ನಿಖಿಲಪ್ರೇಕ್ಷಾವಾನ್ ಸಮೀಹಿತತತ್ಸಾಧನಯೋರನ್ಯತರಪ್ರವೇದನೇ ಪ್ರವರ್ತತೇ। ನಚ ರಜತಮರ್ಥಯಮಾನಸ್ಯ ಶುಕ್ತಿಕಾಶಕಲಜ್ಞಾನಂ ತದ್ರೂಪಮನುಭಾವಯಿತುಂ ಪ್ರಭವತಿ। ಶುಕ್ತಿಕಾಶಕಲಸ್ಯ ಸಮೀಹಿತತತ್ಸಾಧನಯೋರನ್ಯತರಭಾವಾಭಾವಾತ್। ನಾಪಿ ರಜತಸ್ಮರಣಂ ಪುರೋವರ್ತಿನಿ ಪ್ರವೃತ್ತಿಕಾರಣಮ್। ತಸ್ಯಾನುಭವಪಾರತನ್ತ್ರ್ಯತಯಾನುಭವದೇಶ ಏವ ಪ್ರವರ್ತಕತ್ವಾತ್। ನಾಪಿ ಭೇದಾಗ್ರಹೋ ವ್ಯವಹಾರಕಾರಣಮ್। ಗ್ರಹಣನಿಬನ್ಧನತ್ವಾಚ್ಚೇತನವ್ಯವಹಾರಸ್ಯ।

ವೇದಾಂತಸಿದ್ಧಾಂತದಪ್ರಕಾರ ಮಿಥ್ಯಾಜ್ಞಾನದ ಸಮರ್ಥನೆ

ಅದನ್ನು (ಅಯಥಾರ್ಥವಾದ ಜ್ಞಾನವಿಲ್ಲವೆಂಬುದನ್ನು) “ ಬೇರೆಯವರು ”[3]
ಸಹಿಸುವುದಿಲ್ಲ. (ಒಪ್ಪುವುದಿಲ್ಲ) :–

ಈ ಲೋಕದಲ್ಲಿ ಪರೀಕ್ಷಕರೆಲ್ಲರೂ (ವಿಚಾರಕಾರಿಗಳಾದವರೆಲ್ಲರೂ) ಅಭಿಲಷಿತವಾದ
ವಸ್ತು ಅಥವಾ ಅದರ ಸಾಧನಗಳನ್ನು ತಿಳಿಯುವುದರಲ್ಲಿ ಪ್ರವರ್ತಿಸುತ್ತಾರೆ. ರಜತವನ್ನು
ಅಪೇಕ್ಷಿಸುವವನಿಗೆ ಶುಕ್ತಿಯಜ್ಞಾನವು ಆರೂಪವಾದ (ಅಭಿಲಷಿತವಸ್ತುರೂಪವಾದ ಅಥವಾ
ಅದರ ಸಾಧನ ರೂಪವಾದ) ಅನುಭವವನ್ನು ಉಂಟುಮಾಡಲು ಸಮರ್ಥವಾಗುವುದಿಲ್ಲ.
ಏಕೆಂದರೆ, ಶುಕ್ತಿಯು ಅಭಿಲಷಿತವಾದ ವಸ್ತುವೂ ಅಲ್ಲ ಅದರ ಸಾಧನವೂ ಅಲ್ಲ. ರಜತದ
ಸ್ಮರಣೆಯೂ ಕೂಡ ಎದುರಿಗಿರುವ ವಸ್ತುವಿನಲ್ಲಿ ಪ್ರವರ್ತಿಸಲು ಕಾರಣವಾಗುವುದಿಲ್ಲ.
ಏಕೆಂದರೆ, ಸ್ಮರಣೆಯು ಅನುಭವಾಧೀನವಾದುದರಿಂದ ಅನುಭವವುಂಟಾದ ಸ್ಥಳದಲ್ಲಿ
ಮಾತ್ರ ಪ್ರವೃತ್ತಿಯನ್ನುಂಟುಮಾಡಲು ಕಾರಣವಾಗುತ್ತದೆ. ಭೇದವನ್ನು ಗ್ರಹಿಸದಿರು
ವಿಕೆಯೂ ವ್ಯವಹಾರಕ್ಕೆ ಕಾರಣವಾಗುವುದಿಲ್ಲ. ಏಕೆಂದರೆ, ಚೇತನರ ವ್ಯವಹಾರವೆಲ್ಲವೂ
ಗ್ರಹಿಸುವಿಕೆಯ ಮೂಲಕವೇ ಉಂಟಾಗುತ್ತದೆ.

ಗ್ರಹಣ-ಸ್ಮರಣಯೋಃ ಸಮೀಚೀನಜ್ಞಾನಸಾರೂಪ್ಯಂನಾಸ್ತಿ

ನನು ನ ವಯಮೇಕೈಕಸ್ಯ ಕಾರಣತ್ವಂ ಬ್ರೂಮಹೇ ಯೇನೈವಮುಪಾಲಭ್ಯೇಮಹಿ।
ಕಿಂತ್ವಗೃಹೀತವಿವೇಕಸ್ಯ ಜ್ಞಾನದ್ವಯಸ್ಯ ಪ್ರಾಪ್ತಸಮೀಚೀನಪುರಃಸ್ಥಿತರಜತಜ್ಞಾನಸಾರೂಪ್ಯ
ಸ್ಯೇತ್ಯನುಕ್ತೋಪಾಲಮ್ಭೋಽಯಮಿತಿ ಚೇತ್— ತದಪ್ಯಯುಕ್ತಮ್। ವಿಕಲ್ಪಾಸಹತ್ವಾತ್।
ತಥಾಹಿ :— ಸಮೀಚೀನರಜತಾವಭಾಸಸಾರೂಪ್ಯಂ ಭಾಸಮಾನಂ ಪ್ರವರ್ತಕಂ, ಸತ್ತಾಮಾ
ತ್ರೇಣ ವಾ?

ಆದ್ಯೇ ವಿಕಲ್ಪೇ ಭೇದಾಗ್ರಹಾಪರಪರ್ಯಾಯಸ್ಯ ಸಾರೂಪ್ಯಸ್ಯ ಸಮೀಚೀನಸನ್ನಿಭೇ ಇಮೇ
ಜ್ಞಾನೇ ಇತಿ ವಿಶೇಷಾಕಾರೇಣ ಗೃಹ್ಯಮಾಣಸ್ಯ ಪ್ರವೃತ್ತಿಕಾರಣತ್ವಂ, ಕಿಂ ವಾನಯೋರೇವ
ಸ್ವರೂಪತೋ ವಿಷಯತಶ್ಚ ಮಿಥೋ ಭೇದಾಗ್ರಹೋ ವಿದ್ಯತ ಇತಿ ಸಾಮಾನ್ಯಾಕಾರೇಣ ಗೃಹ್ಯ
ಮಾಣಸ್ಯ ಸಾರೂಪ್ಯಸ್ಯ?

ನಾದ್ಯಃ। ಸಮೀಚೀನಜ್ಞಾನವತ್ತತ್ಸನ್ನಿಭಜ್ಞಾನಸ್ಯ ತದುಚಿತವ್ಯವಹಾರಪ್ರವರ್ತಕ
ತ್ವಾನುಪಪತ್ತೇಃ। ನ ಖಲು ಗೋಸನ್ನಿಭೋ ಗವಯ ಇತ್ಯವಭಾಸೋ ಗವಾರ್ಥಿನಂ ಗವಯೇ
ಪ್ರವರ್ತಯತಿ।

ನ ದ್ವಿತೀಯಃ। ವ್ಯಾಹತತ್ವಾತ್। ನ ಖಲ್ವನಾಕಲಿತಭೇದಸ್ಯಾನಯೋರಿತಿ, ಅನ
ಯೋರಿತಿ ಗ್ರಹೇ ಭೇದಾಗ್ರಹ ಇತಿ ಚ, ಪ್ರತಿಪತ್ತಿರ್ಭವತಿ।

ಅತಃ ಪರಿಶೇಷಾತ್ ಸತ್ತಾಮಾತ್ರೇಣ ಭೇದಾಗ್ರಹರೂಪಸ್ಯ ಸಾರೂಪ್ಯಸ್ಯ ವ್ಯವಹಾರ
ಕಾರಣತ್ವಮಙ್ಗೀಕರ್ತವ್ಯಮ್। ಏವಮೇವಾಸ್ತ್ವಿತಿ ಚೇತ್— ತರ್ಹೀದಮಿಹ ಸಮ್ಪ್ರ

ಥಾರ್ಥ್ಯಮ್ :— ಕಿಮಯಂ ಭೇದಾಗ್ರಹಃ ಸಮಾರೋಪೋತ್ಪಾದನಕ್ರಮೇಣ ವ್ಯವಹಾರಕಾರಣ ಮಸ್ತೂತಾನುತ್ಪಾದಿತಾರೋಪ ಏವ ಸ್ವಯಮಿತಿ?

ನಚ ದ್ವಿತೀಯಃ ಪಕ್ಷ ಏವ ಶ್ರೇಯಾನ್। ತಾವತೈವ ವ್ಯವಹಾರೋತ್ಪತ್ತಾವಾರೋಪಸ್ಯ ಗೌರವದೋಷದುಷ್ಟತ್ವಾದಿತಿ ಮನ್ತವ್ಯಮ್। ವಿಶಿಷ್ಟವ್ಯವಹಾರಸ್ಯ ವಿಶಿಷ್ಟಜ್ಞಾನಪೂರ್ವಕತ್ವನಿಯಮೇನಾಜ್ಞಾನಪೂರ್ವಕತ್ವಾನುಪಪತ್ತೇಃ।

ಗ್ರಹಣ-ಸ್ಮರಣೆಗಳಿಗೆ ಸಮೀಚೀನಜ್ಞಾನದ ಸಾರೂಪ್ಯವಿಲ್ಲ

ನಾವು (ಮೀಮಾಂಸಕರು) ಒಂದೊಂದಕ್ಕೆ (ಪ್ರತ್ಯೇಕವಾಗಿ) ಕಾರಣತ್ವವನ್ನು ಹೇಳಿದರೆ ತಾನೇ ನಿಂದೆಗೊಳಗಾಗುವುದು; ಆದರೆ, ಯಥಾರ್ಥವಾದ ಎದುರಿಗಿರುವ ರಜತದ ಜ್ಞಾನದ ಸಾಮ್ಯವನ್ನು ಹೊಂದಿರುವ ಮತ್ತು ಬೇರೆಬೇರೆಯಾಗಿ ಗ್ರಹಿಸಲ್ಪಡದಿರುವ ಎರಡು ಜ್ಞಾನ (ಗ್ರಹಣ-ಸ್ಮರಣೆ)ಗಳಿಗೆ ಕಾರಣತ್ವವನ್ನು ಹೇಳುವುದರಿಂದ ಈರೀತಿಯಾದ ದೂಷಣೆಗೆ ಅವಕಾಶವಿಲ್ಲವೆಂದು ಹೇಳುವುದಾದರೆ, ಅದೂ ಕೂಡ ಯುಕ್ತವಾಗುವುದಿಲ್ಲ. ಏಕೆಂದರೆ, ಇಲ್ಲಿ ಉಂಟಾಗುವ ವಿಕಲ್ಪಗಳು ಸರಿಹೊಂದುವುದಿಲ್ಲ. ಹೇಗೆಂದರೆ:— ಸಮೀಚೀನ ರಜತಜ್ಞಾನದ ಸಾರೂಪ್ಯವು ತೋರುತ್ತಿರುವುದಾಗಿ (ಜ್ಞಾತವಾಗಿ) ಪ್ರವರ್ತಕವಾಗುತ್ತದೆಯೋ? ಅಥವಾ ಸ್ವರೂಪತಃ ಇರುವುದರಿಂದಲೋ?

ಮೊದಲನೆಯಪಕ್ಷದಲ್ಲಿ, ಭೇದವನ್ನು ಗ್ರಹಿಸದಿರುವಿಕೆ ಎಂಬುದಾಗಿರುವ ಸಾರೂಪ್ಯವು "ಈ ಎರಡು ಜ್ಞಾನಗಳು ಸಮೀಚೀನ ಜ್ಞಾನಕ್ಕೆ ಸದೃಶವಾದವುಗಳು" ಎಂಬುದಾಗಿ ವಿಶೇಷರೂಪವಾಗಿ ತಿಳಿಯಲ್ಪಟ್ಟದ್ದಾಗಿ ಪ್ರವೃತ್ತಿಗೆ ಕಾರಣವಾಗುತ್ತದೆಯೋ? ಅಥವಾ "ಈ ಜ್ಞಾನಗಳಿಗೆ ಸ್ವರೂಪದಿಂದ ಮತ್ತು ವಿಷಯರೂಪದಿಂದ ಪರಸ್ಪರ ಭೇದವನ್ನು ಗ್ರಹಿಸದಿರುವಿಕೆಯುಂಟು" ಎಂಬುದಾಗಿ ಸಾಮಾನ್ಯರೂಪವಾಗಿ ತಿಳಿಯಲ್ಪಡುವ ಸಾರೂಪ್ಯವು ಪ್ರವೃತ್ತಿಗೆ ಕಾರಣವಾಗುತ್ತದೆಯೋ?

ಮೊದಲನೆಯ ಪ್ರಕಾರವು ಸರಿಯಿಲ್ಲ. ಏಕೆಂದರೆ, ಸಮೀಚೀನಜ್ಞಾನದಂತೆ ಅದಕ್ಕೆ ಸದೃಶವಾದ ಜ್ಞಾನವು ಸಮೀಚೀನಜ್ಞಾನಕ್ಕೆ ಉಚಿತವಾದ ವ್ಯವಹಾರದಲ್ಲಿ ಪ್ರವೃತ್ತಿಯನ್ನುಂಟುಮಾಡುವುದಿಲ್ಲ. ಗೋಸದೃಶವಾದದ್ದು ಗವಯ ಎಂಬ ಜ್ಞಾನವು ಗೋವು ಬೇಕೆಂಬುವವನನ್ನು ಗವಯದಲ್ಲಿ ಪ್ರವರ್ತಿಸುವಂತೆ ಮಾಡುವುದಿಲ್ಲ.

ಎರಡನೆಯ ಪ್ರಕಾರವೂ ಸರಿಯಿಲ್ಲ. ಏಕೆಂದರೆ, ವ್ಯಾಘಾತದೋಷ (ತಾನು ಆಡಿದ ಮಾತೇ ತನಗೆ ವಿರೋಧವಾಗುವಿಕೆ)ವುಂಟಾಗುತ್ತದೆ. ಹೇಗೆಂದರೆ :— ಭೇದವನ್ನು ತಿಳಿಯದಿರುವವನಿಗೆ "ಇವುಗಳಿಗೆ" ಎಂಬುದಾಗಿಯೂ ಮತ್ತು "ಇವುಗಳಿಗೆ" ಎಂಬುದಾಗಿ ಜ್ಞಾನವುಂಟಾಗಲು ಭೇದವು ತಿಳಿಯಲಿಲ್ಲ ಎಂಬುದಾಗಿಯೂ ಪರಿಜ್ಞಾನವುಂಟಾಗುವುದಿಲ್ಲವಷ್ಟೆ.

ಆದುದರಿಂದ ಪರಿಶೇಷವಾಗಿ, ಭೇದಾಗ್ರಹರೂಪವಾದ ಸಾರೂಪ್ಯವು ಇರುವಿಕೆ ಮಾತ್ರದಿಂದಲೇ ವ್ಯವಹಾರಕ್ಕೆ ಕಾರಣವಾಗುತ್ತದೆಯೆಂದು ಅಂಗೀಕರಿಸಬೇಕು. ಹಾಗೆಯೇ

ಆಗಲಿ ಎಂದು ಹೇಳಬಹುದು; ಆದರೆ ಇಲ್ಲಿ ಇದನ್ನು ನಿಶ್ಚಯಮಾಡಬೇಕಾಗಿದೆ. ಏಕೆಂದರೆ, ಭೇದದ ಈ ಅಪರಿಜ್ಞಾನವು (ಗ್ರಹಿಸದಿರುವಿಕೆಯು) ಸಮಾರೋಪವನ್ನು ಉಂಟುಮಾಡುವುದರ ಮೂಲಕ ವ್ಯವಹಾರಕ್ಕೆ ಕಾರಣವಾಗುತ್ತದೆಯೋ? ಅಥವಾ ಆರೋಪವನ್ನುಂಟುಮಾಡದೆಯೇ ತಾನಾಗಿಯೇ ಕಾರಣವಾಗುತ್ತದೆಯೋ?

ಅಷ್ಟರಿಂದಲೇ ವ್ಯವಹಾರವುಂಟಾಗುತ್ತಿರಲಾಗಿ ಆರೋಪವು "ಗೌರವದೋಷ"[34] ದೂಷಿತವಾಗುವುದರಿಂದ ಎರಡನೆಯ ಪಕ್ಷವೇ ಯುಕ್ತತರವಾದುದೆಂದು ಭಾವಿಸಕೂಡದು. ಏಕೆಂದರೆ, "ವಿಶಿಷ್ಟವಾದ ವ್ಯವಹಾರವು"[35] ವಿಶಿಷ್ಟವಾದ ಜ್ಞಾನಪೂರ್ವಕವಾಗಿಯೇ ಆಗಬೇಕು ಎಂಬ ನಿಯಮವಿರುವುದರಿಂದ ಆರೋಪಪೂರ್ವಕವಾಗಿ ಅಲ್ಲವೆಂಬುದು ಉಪಪನ್ನವಾಗುವುದಿಲ್ಲ.

ರಜತಜ್ಞಾನಸ್ಯ ಪುರೋವರ್ತಿವಸ್ತುವಿಷಯಕತ್ವಮ್— ಆರೋಪಸ್ಯ ಸಮರ್ಥನಮ್

ನನ್ವಯಂ ವ್ಯವಹಾರೋ ನಾಜ್ಞಾನಪೂರ್ವಕ ಇತ್ಯನಾಕಲಿತಪರಾಭಿಸನ್ಧಿಃ ಸ್ವಸಿದ್ಧಾನ್ತಸಿದ್ಧ್ಯರ್ಥಾದ್ಯದಿ ಕಶ್ಚಿಚ್ಛಙ್ಕೇತ, ಸ ಪ್ರತಿವಕ್ತವ್ಯಃ। ಶುಕ್ತಿಕಾವಿಷಯಸ್ಯ ಗ್ರಹಣಸ್ಯಾಸಮೀಹಿತವಿಷಯತ್ವೇನ ರಜತಾರ್ಥಿಪ್ರವೃತ್ತಿಹೇತುತ್ವಾಸಮ್ಭವಾದನ್ವಯವ್ಯತಿರೇಕಾಭ್ಯಾಂ ರಜತಜ್ಞಾನಸ್ಯ ಸಮೀಹಿತವಿಷಯತ್ವೇನ ಪ್ರವೃತ್ತಿಹೇತುತ್ವಸಮ್ಭವಾಚ್ಚೇದಮರ್ಥಾಭಿಸಮ್ಭಿನ್ನಗ್ರಹವಿವಿಕ್ತಸ್ಯಾಪಿ ರಜತಸ್ಮರಣಸ್ಯ ಕಾರಣತ್ವಂ ವಕ್ತವ್ಯಮ್। ತಚ್ಚ ವಕ್ತುಂ ನ ಶಕ್ಯತೇ। ಜಾನಾತಿ ಇಚ್ಛತಿ ತತಃ ಪ್ರವರ್ತತ ಇತಿ ನ್ಯಾಯೇನ ಜ್ಞಾನೇಚ್ಛಾಪ್ರವೃತ್ತೀನಾಂ ಸಮಾನವಿಷಯತ್ವೇನ ಭಾವ್ಯಮ್। ತಥಾ ಚೇದಙ್ಕಾರಾಸ್ಪದಾಭಿಮುಖಪ್ರವೃತ್ತಸ್ಯ ರಜತಾರ್ಥಿನಸ್ತದಿಚ್ಛಾ ನಿಬನ್ಧನಮ್। ಅನ್ಯಥಾನ್ಯದಿಚ್ಛನ್ನನ್ಯದ್ವ್ಯವಹರತೀತಿ ವ್ಯಾಹನ್ಯೇತ। ತಥಾ ಚ ಯದೀದಙ್ಕಾರಾಸ್ಪದಂ ರಜತಾವಭಾಸಗೋಚರತಾಂ ನಾಚರೇತ್ಕಥಂ ರಜತಾರ್ಥೀ ತದಿಚ್ಛೇತ್? ಯದ್ಯರಜತತ್ವಾಗ್ರಹಣಾದಿತಿ ಬ್ರೂಯಾತ್ ರಜತತ್ವಾಗ್ರಹಾತ್ ಕಸ್ಮಾದಯಂ ನೋಪೇಕ್ಷೇತೇತಿ। ಯುಗಪತ್ತದ್ಭವಭೇದಾಗ್ರಹಾಭೇದಾಗ್ರಹನಿಬನ್ಧನಾಭ್ಯಾಮುಪಾದಾನೋಪೇಕ್ಷಾಭ್ಯಾಂ ಪುರತಃ ಪೃಷ್ಠತಶ್ಚಾಕೃಷ್ಯಮಾಣಃ ಪುರುಷೋ ದೋಲಾಯಮಾನತಯಾ ರೂಪ್ಯಾರೋಪಮನ್ತರೇಣೋಪಾದಾನಪಕ್ಷ ಏವ ನ ವ್ಯವಸ್ಥಾಪ್ಯತ ಇತ್ಯನಿಚ್ಛತಾಪ್ಯಚ್ಛಮತಿನಾ ಸಮಾರೋಪಃ ಸಮಾಶ್ರಯಣೀಯಃ। ಯಥಾಹ :—ಭೇದಾಗ್ರಹಾದಿದಙ್ಕಾರಾಸ್ಪದೇ ರಜತತ್ವಮಾರೋಪ್ಯ ತಜ್ಜಾತೀಯಸ್ಯೋಪಕಾರಹೇತುಭಾವಮನುಸ್ಮೃತ್ಯ ತಜ್ಜಾತೀಯತ್ವೇನಾಸ್ಯಾಪಿ ತದನುಮಾಯ ತದರ್ಥೀ ಪ್ರವರ್ತತ ಇತಿ ಪ್ರಥಮಃ ಪಕ್ಷಃ ಪ್ರಶಸ್ಯಃ।

ನಚ ತಟಸ್ಥರಜತಸ್ಮರಣಪಕ್ಷೇಽಪಿ ಹೇತೋರ್ಗೃಹೀತತ್ವೇನಾಯಂ ಮಾರ್ಗಃ ಸಮಾನ ಇತಿ ವಾಚ್ಯಮ್। ರಜತತ್ವಸ್ಯ ಹೇತೋಃ ಪಕ್ಷಧರ್ಮತ್ವಾಭಾವಾತ್। ನ ಚ ಪಕ್ಷಧರ್ಮತಾಯಾ ಅಭಾವೇಽಪಿ ವ್ಯಾಪ್ತಿಬಲಾದ್ಗಮಕತ್ವಂ ಶಙ್ಕ್ಯಮ್। ವ್ಯಾಪ್ತಿಪಕ್ಷಧರ್ಮತಾವಲ್ಲಿಙ್ಗಸ್ಯೈವ ಗಮಕತ್ವಾಙ್ಗೀಕಾರಾತ್। ತದಾಹುಃ ಶಬರಸ್ವಾಮಿನಃ :—ಜ್ಞಾತಸಮ್ಬನ್ಧಸ್ಯೈವ ಪುಂಸೋ

ಲಿಙ್ಗವಿಶಿಷ್ಟಧರ್ಮ್ಯೇಕದೇಶದರ್ಶನಾಲ್ಲಿಙ್ಗವಿಶಿಷ್ಟ ಧರ್ಮ್ಯೇಕದೇಶಬುದ್ಧಿರನುಮಾನಮಿತಿ। ಆಚಾರ್ಯ್ಯೋಽಪ್ಯವೋಚತ್ :—

"ಸ ಏಷ ಚೋಭಯಾತ್ಮಾ ಯೋ ಗನ್ತಾ ಗಮಕ ಇಷ್ಯತೇ।

ಅಸಿದ್ಧೇನೈಕದೇಶೇನ ಗಮ್ಯಾಸಿದ್ಧೇರ್ನ ಬೋಧಕಃ॥" ಇತಿ।

ನನು ಭವತ್ಪಕ್ಷೇಽಪಿ ಪುರಃಸ್ಥಿತಸ್ಯೇದಮರ್ಥಸ್ಯ ಪರಮಾರ್ಥತೋ ರಜತತ್ವಂ ನಾಸ್ತೀತಿ ನ ರಜತತ್ವಂ ಧರ್ಮ್ಯೇಕದೇಶ ಇತಿ ಚೇನ್ನ। ಯಕ್ಷಾನುರೂಪೋ ಬಲಿರಿತಿನ್ಯಾಯೇನಾನುಮಿತ್ಯಾಭಾಸಾನುಗುಣಸ್ಯೈಕದೇಶಸ್ಯ ವಿದ್ಯಮಾನತ್ವಾತ್। ತಥಾಚ ಪ್ರಯೋಗಃ :—

ವಿವಾದಾಧ್ಯಾಸಿತಂ ರಜತಜ್ಞಾನಂ ಪುರೋವರ್ತಿವಿಷಯಂ, ರಜತಾರ್ಥಿನಸ್ತತ್ರ ನಿಯಮೇನ ಪ್ರವರ್ತಕತ್ವಾತ್। ಯದುಕ್ತಸಾಧನಂ ತದುಕ್ತಸಾಧ್ಯಂ, ಯಥೋಭಯವಾದಿಸಂಮತಂ ಸತ್ಯರಜತಜ್ಞಾನಮ್।

ವಿವಾದಪದಂ ಶುಕ್ತಿಶಕಲಂ ರಜತಜ್ಞಾನವಿಷಯೋಽವ್ಯವಧಾನೇನ ರಜತಾರ್ಥಿಪ್ರವೃತ್ತಿವಿಷಯತ್ವಾತ್, ರಜತಪದಸಮಾನಾಧಿಕರಣಪದಾನ್ತರವಾಚ್ಯತ್ವಾದ್ವಾ, ವಸ್ತುರಜತವತ್।

ರಜತಜ್ಞಾನಕ್ಕೆ ಎದುರಿಗಿರುವ ವಸ್ತುವೇ ಆಲಂಬನ —ಆರೋಪದ ಸಮರ್ಥನೆ

ಮತ್ತು, ಬೇರೆಯವರ (ವೇದಾಂತಿಗಳ) ಅಭಿಪ್ರಾಯವನ್ನು ತಿಳಿಯದವನಾಗಿ, ತನ್ನ ಸಿದ್ಧಾಂತಕ್ಕನುಸಾರವಾಗಿ ನಿಶ್ಚಿತವಾಗುವ ಅರ್ಥದಿಂದ "ಈ ವ್ಯವಹಾರವು ಜ್ಞಾನ (ಆರೋಪ)ಪೂರ್ವಕವಾದುದಲ್ಲ"ವೆಂಬುದಾಗಿ ಯಾವನಾದರೂ (ಮೀಮಾಂಸಕನು) ಶಂಕಿಸುವುದಾದರೆ, ಅವನಿಗೆ ಪ್ರತ್ಯುತ್ತರವನ್ನು ಹೇಳಬೇಕಾಗುತ್ತದೆ. ಏನೆಂದರೆ, ಶುಕ್ತಿವಿಷಯಕವಾದ ಗ್ರಹಣವು ಅಭಿಲಷಿತವಿಷಯಕವಲ್ಲದುದರಿಂದ ರಜತಬೇಕೆಂಬುವವನ ಪ್ರವೃತ್ತಿಗೆ ಕಾರಣವಾಗಲಾರದುದರಿಂದಲೂ (ಕಾರಣವಾಗುವ ಸಂಭವವಿಲ್ಲದುದರಿಂದಲೂ) ಮತ್ತು ರಜತಜ್ಞಾನವು "ಅನ್ವಯವ್ಯತಿರೇಕಗಳಿಂದ"[36] ಅಭಿಲಷಿತವಿಷಯಕವಾಗಿರುವುದರಿಂದ ಪ್ರವೃತ್ತಿಗೆ ಕಾರಣವಾಗುವ ಸಂಭವವಿರುವುದರಿಂದಲೂ "ಇದು" ಎಂಬ ವಸ್ತುವಿನೊಡಗೂಡಿದ ಗ್ರಹಣ(ಜ್ಞಾನ)ಕ್ಕಿಂತ ಬೇರೆಯಾಗಿದ್ದರೂ ಕೂಡ ರಜತಸ್ಮರಣೆಯು ಕಾರಣವಾಗುತ್ತದೆಯೆಂದು ಹೇಳಬೇಕು. ಆದರೆ ಅದನ್ನು ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ, "ತಿಳಿಯುತ್ತಾನೆ, ಅಪೇಕ್ಷಿಸುತ್ತಾನೆ, ಆಮೇಲೆ ಪ್ರವರ್ತಿಸುತ್ತಾನೆ" ಎಂಬ ನಿಯಮಕ್ಕನುಸಾರವಾಗಿ ಜ್ಞಾನೇಚ್ಛಾಪ್ರವೃತ್ತಿಗಳಿಗೆ ಸಮಾನವಾದ(ಒಂದೇ) ವಿಷಯವಿರಬೇಕು. ಹೀಗಿರುವುದರಿಂದ "ಇದು" ಎಂಬುವುದಕ್ಕೆ ವಿಷಯವಾದ ವಸ್ತುವಿನ ಕಡೆಗೆ ಪ್ರವೃತ್ತನಾದ ರಜತಾರ್ಥಿಯಾದವನಿಗೆ ಆ ರಜತದ ಅಪೇಕ್ಷೆಯೇ ನಿಯಾಮಕವು. ಹಾಗಿಲ್ಲದಿದ್ದರೆ, ಅಪೇಕ್ಷಿಸುವುದು ಬೇರೆವಸ್ತುವನ್ನು; ಪ್ರವರ್ತಿಸುವುದಾದರೋ ಮತ್ತೊಂದು ವಸ್ತುವಿನಲ್ಲಿ—ಎಂಬುದಾಗಿ (ಪರಸ್ಪರ) ವಿರುದ್ಧವಾಗುತ್ತದೆ. ಆದುದರಿಂದ, "ಇದು"

ಎನ್ನುವುದಕ್ಕೆ ಆಸ್ಪದವಾಗಿರುವುದು ರಜತಜ್ಞಾನಕ್ಕೆ ವಿಷಯವಾಗದಿದ್ದರೆ, ರಜತಾರ್ಥಿ ಯಾದವನು ಅದನ್ನು ಹೇಗೆ ಅಪೇಕ್ಷಿಸಿಯಾನು? ರಜತವಲ್ಲವೆಂಬುದಾಗಿ ಗ್ರಹಿಸದಿರುವು ರಿಂದ ಎಂದು ಹೇಳುವುದಾದರೆ, ರಜತತ್ವವನ್ನು ಗ್ರಹಿಸದಿರುವುದರಿಂದ ಏಕೆ ಪ್ರವರ್ತಿಸದೆಯೂ ಇರಬಾರದು? ಏಕಕಾಲದಲ್ಲಿ ಭೇದವನ್ನು ಗ್ರಹಿಸದಿರುವಿಕೆ ಮತ್ತು ಅಭೇದವನ್ನು ಗ್ರಹಿಸ ದಿರುವಿಕೆ ಎಂಬ ಕಾರಣಗಳ ಪ್ರಯುಕ್ತವಾಗಿ ಪ್ರವರ್ತಿಸುವಿಕೆ ಹಾಗೂ ಪ್ರವರ್ತಿಸದಿರುವಿಕೆ ಗಳಿಂದ ಮುಂದುಗಡೆಗೆ ಮತ್ತು ಹಿಂದುಗಡೆಗೆ ಡೋಲಾಯಮಾನನಾಗಿ ಎಳೆಯಲ್ಪಡು ತ್ತಿರುವ ಪುರುಷನನ್ನು ರಜತದ ಆರೋಪವಿಲ್ಲದೆಯೇ ಪ್ರವೃತ್ತಿಪಕ್ಷವೊಂದರಲ್ಲಿಯೇ ವ್ಯ ಸ್ಥಾಪಿಸಲು ಆಗುವುದಿಲ್ಲ. ಆದಕಾರಣ ಇಚ್ಛೆಯಿಲ್ಲದಿದ್ದರೂ ಸ್ವಚ್ಛವಾದ ಬುದ್ಧಿಯುಳ್ಳ ವನು (ಪೂರ್ವಪಕ್ಷಿಯಾದ ಮೀಮಾಂಸಕನು) ಸಮಾರೋಪವನ್ನು (ಅಯಥಾರ್ಥಜ್ಞಾನ ವನ್ನು) ಒಪ್ಪಲೇಬೇಕು. ಆದುದರಿಂದಲೇ "ಭೇದವನ್ನು ಗ್ರಹಿಸದಿರುವುದರಿಂದ "ಇದು" ಎನ್ನುವುದಕ್ಕೆ ಆಸ್ಪದವಾದ ವಸ್ತುವಿನಲ್ಲಿ ರಜತತ್ವವನ್ನು ಆರೋಪಿಸಿ ಆ ರಜತಸಜಾತೀಯ ವಾದವಸ್ತುವು ಉಪಕಾರಹೇತು (ಇಷ್ಟಾರ್ಥವನ್ನು ನೆರವೇರಿಸಿಕೊಡುವುದು)ವೆಂಬುದನ್ನು ಸ್ಮರಿಸಿಕೊಂಡು ಅದಕ್ಕೆ ಸಜಾತೀಯವಾಗಿರುವುದರಿಂದ ಇದನ್ನೂ (ಎದುರಿಗಿರುವ ವಸ್ತು ವನ್ನೂ) 'ಉಪಕಾರಕ್ಕೆ ಹೇತು'[37]ವೆಂಬುದಾಗಿ ಊಹಿಸಿ ರಜತಾರ್ಥಿಯಾದವನು ಪ್ರವರ್ತಿ ಸುತ್ತಾನೆಯಾದ್ದರಿಂದ ಮೊದಲನೆಯ ಪಕ್ಷವೇ (ಸಮಾರೋಪವನ್ನುಂಟುಮಾಡುವುದು ಮೂಲಕ ಪ್ರವೃತ್ತಿಗೆ ಕಾರಣವಾಗುತ್ತದೆಂಬ ಪಕ್ಷ) ಶ್ರೇಷ್ಠವಾದುದು" ಎಂದು ಹೇಳುತ್ತಾರೆ

ತಟಸ್ಥವಾದ (ಹಿಂದೆ ಅನುಭೂತವಾದ ಮತ್ತು ಆರೋಪಿತವಾಗದಿರುವ) ರಜತ ಸ್ಮರಣೆಯ ಪಕ್ಷದಲ್ಲಿಯೂ ಹೇತುವು ಗ್ರಹಿಸಲ್ಪಡುವುದರಿಂದ ಈ ಸರಣಿಯು ಸಮಾ ವಾಗುತ್ತದೆ ಎಂದು ಹೇಳಕೂಡದು. ಏಕೆಂದರೆ, ರಜತತ್ವವೆಂಬ ಹೇತುವು ಪಕ್ಷದ ಇರುವುದಿಲ್ಲ. ಪಕ್ಷಧರ್ಮತೆಯು (ಹೇತುವು ಪಕ್ಷದಲ್ಲಿರುವಿಕೆಯು) ಇಲ್ಲದಿದ್ದರೂ, ವ್ಯಾಪ್ತಿಯ ಬಲದಿಂದಲೇ ಅನುಮಾಪಕತ್ವವು ಇರುವುದೆಂದು ಶಂಕಿಸಕೂಡದು. ಏಕೆಂದರೆ, ವ್ಯಾಪ್ತಿ ಮತ್ತು ಪಕ್ಷಧರ್ಮತೆಗಳನ್ನುಳ್ಳ ಲಿಂಗವೇ (ಹೇತುವೇ) ಅನುಮಾಪಕವಾಗುವುದೆಂಬುದಾ ಅಂಗೀಕರಿಸಲ್ಪಟ್ಟಿದೆ. ಅದನ್ನೇ ಶಬರಸ್ವಾಮಿಗಳು,

> "ಸಂಬಂಧವನ್ನು (ವ್ಯಾಪ್ತಿಯನ್ನು) ಗ್ರಹಿಸಿದ ಪುರುಷನಿಗೇ ಲಿಂಗ ವಿಶಿಷ್ಟವಾದ ಧರ್ಮಿಯ ಏಕದೇಶದ ದರ್ಶನದಿಂದ ಲಿಂಗಿವಿಶಿಷ್ಟವಾದ ಧರ್ಮಿಯ ಏಕದೇಶದ ಬುದ್ಧಿಯೇ ಅನುಮಾನವು"

ಎಂಬುದಾಗಿ ಹೇಳಿದ್ದಾರೆ. ಆಚಾರ್ಯರೂ ಕೂಡ:

"ಸಾಧ್ಯವಾದುದನ್ನು (ವಹ್ನಿ ಮುಂತಾದುದನ್ನು) ತಿಳಿಸಿಕೊಡುವುದು ಅಂದ ಗಮಕವಾದುದು ಉಭಯರೂಪವಾಗಿ ಅಂದರೆ, ವ್ಯಾಪ್ತಿವಿಶಿಷ್ಟವಾಗಿಯೂ ಹಾಗೂ ಪ ನಿಷ್ಠವಾಗಿಯೂ ಇರುತ್ತದೆ. ಈಪ್ಸೈಕಿ ಒಂದಂಶವು ಸಿದ್ಧವಾಗದಿದ್ದರೂ ಸಾಧ್ಯವು ಸಿ ಸುವುದಿಲ್ಲವಾದ್ದರಿಂದ (ಧೂಮ ಮುಂತಾದವು) ಗಮಕವಾಗುವುದಿಲ್ಲ" ಎಂದು ಹೇಳಿದ್ದಾ

ಹಾಗಾದರೆ ನಿಮ್ಮ ಪಕ್ಷದಲ್ಲಿಯೂ (ವೇದಾಂತಿಗಳಪಕ್ಷ) ಎದುರಿಗಿರುವ "ಇದು

ಎಂಬ ವಸ್ತುವಿನಲ್ಲಿ ವಾಸ್ತವಿಕವಾಗಿ (ಪಾರಮಾರ್ಥಿಕವಾಗಿ) ರಜತತ್ವವು ಇಲ್ಲದಿರುವುದರಿಂದ ರಜತತ್ವವು ಧರ್ಮಿಯ ಏಕದೇಶವಾಗಿಲ್ಲವೆಂದು ಹೇಳುವುದಾದರೆ, ಅದು ಸರಿಯಲ್ಲ. ಏಕೆಂದರೆ, "ಯಕ್ಷನಿಗೆ ಅನುರೂಪವಾದ ಬಲಿ" ಎಂಬ ಗಾದೆಯಂತೆ ಅನುಮಿತ್ಯಾಭಾಸಕ್ಕೆ (ವಸ್ತುತಃ ಅನುಮಿತಿಯಲ್ಲದಿದ್ದರೂ ಅನುಮಿತಿಯಂತೆ ತೋರುವುದು) ಅನುರೂಪವಾದ ಏಕದೇಶವು (ವಾಸ್ತವಿಕವಲ್ಲದ ಪಕ್ಷವೃತ್ತಿತ್ವವು) ಇರುತ್ತದೆ. ಆದ್ದರಿಂದ ಅನುಮಾನ ಪ್ರಯೋಗವು ಈ ರೀತಿ ಆಗುತ್ತದೆ :–

> "ವಿವಾದವಿಷಯವಾದ"[38] ಅಧ್ಯಾಸಿತ ರಜತಜ್ಞಾನವು ಎದುರಿಗಿರುವ ವಸ್ತುವನ್ನೇ ವಿಷಯವಾಗಿವುಳ್ಳದ್ದು; ರಜತಾರ್ಥಿಯಾದವನನ್ನು ನಿಯತವಾಗಿ ಅಲ್ಲಿ ಪ್ರವರ್ತಿಸುವಂತೆ ಮಾಡುವುದರಿಂದ.
>
> ಉಕ್ತವಾಗಿರುವ ಹೇತುವನ್ನುಳ್ಳದ್ದು ಉಕ್ತವಾಗಿರುವ ಸಾಧ್ಯವನುಳ್ಳದ್ದಾಗಿರುತ್ತದೆ; ಉಭಯವಾದಿಗಳಿಗೆ ಸಮ್ಮತವಾದ ಸತ್ಯರಜತಜ್ಞಾನದಂತೆ. ವಿವಾದವಿಷಯವಾದ ಶುಕ್ತಿಯು ರಜತಜ್ಞಾನಕ್ಕೆ ವಿಷಯವಾಗಿದೆ; ರಜತಾರ್ಥಿಯಾದವನ ತಡೆಯಿಲ್ಲದ ಪ್ರವೃತ್ತಿಗೆ ವಿಷಯವಾಗಿರುವುದರಿಂದ ಅಥವಾ ರಜತಪದಕ್ಕೆ ಸಮಾನಾಧಿಕರಣವಾದ ಬೇರೆಪದಕ್ಕೆ ವಾಚ್ಯವಾಗಿರುವುದರಿಂದ; ಸತ್ಯರಜತದಂತೆ."

ಮೀಮಾಂಸಕಾಕ್ಷೇಪಾಣಾಂ ಸಮಾಧಾನಮ್

ಯದುಕ್ತಂ ರಜತಜ್ಞಾನಸ್ಯ ಶುಕ್ತಿಕಾಲಮ್ಬನತ್ವೇಽನುಭವವಿರೋಧ ಇತಿ ತದಪ್ಯಯುಕ್ತಮ್। ವಿಕಲ್ಪಾಸಹತ್ವಾತ್। ತಥಾಹಿ :–ತತ್ರಕಿಂ ರಜತಾಕಾರಪ್ರತೀತಿಂ ಪ್ರತಿ ಶುಕ್ತೇರಾಲಮ್ಬನತ್ವೇಽನುಭವವಿರೋಧ ಉದ್ಭಾವ್ಯತೇ ಇದಮಂಶಸ್ಯ ವಾ?

ನಾದ್ಯಃ। ಅನಙ್ಗೀಕಾರಪರಾಹತತ್ವಾತ್॥ ನದ್ವಿತೀಯಃ। ಇದನ್ತಾನಿಯತದೇಶಾಧಿಕರಣಸ್ಯ ಚಾಕಚಕ್ಯವಿಶಿಷ್ಟಸ್ಯ ವಸ್ತುನೋ ರಜತಜ್ಞಾನಾಲಮ್ಬನತ್ವಮನವಲಮ್ಬಮಾನಸ್ಯ ಭವತ ಏವಾನುಭವವಿರೋಧಾತ್। ಇದಂ ರಜತಮಿತಿ ಸಾಮಾನಾಧಿಕರಣ್ಯೇನ ಪುರೋವರ್ತಿನ್ಯಙ್ಗುಲಿನಿರ್ದೇಶಪೂರ್ವಕಮುಪಾದಾನಾದಿವ್ಯವಹಾರದರ್ಶನಾಚ್ಚ।

ಯಚ್ಚೋಕ್ತಮ್ :– ದೋಷಾಣಾಮೌತ್ಸರ್ಗಿಕಕಾರ್ಯಪ್ರಸವಶಕ್ತಿಪ್ರತಿಬನ್ಧಕತಯಾ ವಿಪರೀತಕಾರಿತ್ವಂನಾಸ್ತೀತಿ। ತದಪ್ಯಯುಕ್ತಮ್। ದಾವದಗ್ಧವೇತ್ರಬೀಜಾದೌ ತಥಾ ದರ್ಶನಾತ್। ನಚ ದಗ್ಧಸ್ಯ ವೇತ್ರಬೀಜತ್ವಂ ನಾಸ್ತೀತಿ ಮನ್ತವ್ಯಮ್। ಶ್ಯಾಮಸ್ಯ ಘಟಸ್ಯ ರಕ್ತತಾಮಾತ್ರೇಣ ಘಟತ್ವನಿವೃತ್ತಿಪ್ರಸಙ್ಗಾತ್। ನನು ಘಟೋಽಯಂ ಘಟೋಽಯಮಿತ್ಯನುವೃತ್ತಯೋಃ ಪ್ರತ್ಯಯಪ್ರಯೋಗಯೋಃ ಸದ್ಭಾವಾದ್ಘಟತ್ವಸ್ಯ ಸದ್ಭಾವ ಇತಿ ಚೇನ್ನ। ಅತ್ರಾಪೀದಂ ವೇತ್ರಬೀಜಮಿತಿ ತಯೋಃ ಸಮಾನತ್ವಾತ್। ತಥಾಭಸ್ಮಕ ದೋಷದೂಷಿತಸ್ಯ ಜಾಠರಾಗ್ನೇರ್ಬಹ್ವನ್ನಪಚನಸಾಮರ್ಥ್ಯಂ ದೃಶ್ಯತೇ।

ನಚ ಬಹ್ವನ್ನಪಚನಸಾಮರ್ಥ್ಯಂ ಜಾಠರಸ್ಯೈವ ಜಾತವೇದಸೋ ನ ಭಸ್ಮಕವ್ಯಾಧೇರಿತಿ

ವಕ್ತುಂ ಯುಕ್ತಮ್। ತಸ್ಯ ಮನ್ದಮಲ್ಪವಚನಸಾಮರ್ಥ್ಯೇಽಪಿ ಸಹಸಾ ಮಹತ್ವಚನಸ್ಯ ಭಸ್ಮ
ವ್ಯಾಧಿಸಾಹಾಯಕಮನ್ತರೇಣಾನುಪಪತ್ತೇಃ। ಅನ್ಯಥಾ ಸರ್ವೇಷಾಂ ತಥಾಪತ್ತೇಃ।

ಮತ್ತು ಭೇದಬೋಧಕವಾದ ಪ್ರಮಾಣಗಳಿಂದ ಅದ್ವೈತಶ್ರುತಿಗೆ (ಅದ್ವೈತವನ್ನು ಬೋಧಿಸುವ ಶ್ರುತಿಗೆ) ಅಮುಖ್ಯತ್ವ (ಗೌಣತ್ವ)ವನ್ನು ಶಂಕಿಸಕೂಡದು. ಏಕೆಂದರೆ, ಬ್ರಹ್ಮನಲ್ಲಿ ಪಾರಮಾರ್ಥಿಕವಾದ ಸತ್ಯತ್ವವಿರುವುದರಿಂದ ಅದನ್ನು ತಿಳಿಸುವಂತಹ ತತ್ತ್ವಬೋಧನರೂಪವಾದ ಪ್ರಾಮಾಣ್ಯವುಳ್ಳ ಶ್ರುತಿಗೂ, ವ್ಯಾವಹಾರಿಕವಾದ ಪ್ರಾಮಾಣ್ಯವುಳ್ಳ ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಗೂ ವಿಷಯವು ಬೇರೆಬೇರೆಯಾಗಿರುವುದರಿಂದ ಪರಸ್ಪರವಾಗಿ ಬಾಧ್ಯ-ಬಾಧಕ ಭಾವವು ಸಂಭವಿಸುವುದೇ ಇಲ್ಲ. ಅದನ್ನೂ ಕೂಡ ಖಂಡನಕಾರನೇ ಹೇಳಿದ್ದಾನೆ:—

"ಆದುದರಿಂದ ಅದ್ವೈತಶ್ರುತಿಗೆ ಪ್ರತ್ಯಕ್ಷಪ್ರಮಾಣದಿಂದ ಬಾಧವು ನಿರಾಕೃತವಾಗುತ್ತದೆ. ಅನುಮಾನ ಮೊದಲಾದುದು (ಶ್ರುತಿಗೆ) ಬಾಧೆಯನ್ನುಂಟುಮಾಡಲು ನಿನ್ನ (ಮೀಮಾಂಸಕನ) ಮತದಲ್ಲಿಯೂ ಕೂಡ ಸಮರ್ಥವಾಗುವುದಿಲ್ಲ. (ಖಂ. 1-20)

ಎಲೈ! ಬುದ್ಧಿಧನರೇ! (ಬುದ್ಧಿಯೇಧನವಾಗಿ ಉಳ್ಳವರೇ!) ಕೈಗೆ ಸಿಕ್ಕಿರುವ ಚಿಂತಾಮಣಿಯನ್ನು ಸಮುದ್ರದಲ್ಲಿ ಎಸೆಯಲು ಅಪೇಕ್ಷಿಸುವುದಾದರೆ, ಆಗ ಈ ಶ್ರುತಿಯನ್ನು ಬಾಧಿಸಲು ಮನಸ್ಸು ಕೊಡಿರಿ" (ಖಂ. 1-24).

ಆದುದರಿಂದ ತತ್ತ್ವಜ್ಞಾನದಿಂದ ನಿವೃತ್ತಿಗೊಳಿಸುವುದಕ್ಕೋಸ್ಕರ ಬಂಧವು ಅಜ್ಞಾನಕಲ್ಪಿತವಾದುದೆಂದು ಅಂಗೀಕರಿಸಬೇಕು. ಏಕೆಂದರೆ, "ಜ್ಞಾನವು ಅಜ್ಞಾನಕ್ಕೆ ನಿವರ್ತಕವಾದುದರಿಂದ" ಎಂಬುದಾಗಿ ಹೇಳಲ್ಪಟ್ಟಿದೆ.

ಸತ್ಯಸ್ಯ ನ ನಿವೃತ್ತಿಃ

ಯದುಕ್ತಂ ಸತ್ಯಸ್ಯಾಪಿ ದುರಿತಸ್ಯ ಸೇತುದರ್ಶನೇನ ನಿವೃತ್ತಿರುಪಲಭ್ಯತ ಇತಿ। ತದಯುಕ್ತಮ್। ವಿಹಿತಕ್ರಿಯಾನುಷ್ಠಾನೇನ ಜನಿತಸ್ಯ ಧರ್ಮಸ್ಯಾಧರ್ಮನಿವರ್ತಕತ್ವಧ್ರೌವ್ಯಾತ್ "ಧರ್ಮೇಣಪಾಪಮಪನುದತಿ" (ಮ.ನಾ. 22-1) ಇತಿ ಶ್ರುತೇಃ। ಪ್ರಮಾಣವಸ್ತುಪರತನ್ತ್ರ

ಾಲಿನ್ಯಾ ದರ್ಶನಕ್ರಿಯಾಯಾಶ್ಚೋದಿತಪುರುಷಪ್ರಯತ್ನತನ್ತ್ರತ್ವಾಭಾವೇನ ವಿಧಾನಾಸಮ್ಭವಾತ್।
"ಬ್ರಹ್ಮಹತ್ಯಾಂ ಪ್ರಮುಚ್ಯೇತ ತಸ್ಮಿನ್ ಸ್ನಾತ್ವಾ ಮಹೋದಧೌ"। ಇತ್ಯಾದಿ ಸ್ಮೃತಿವಿಹಿತ
್ರಹ್ಮಚರ್ಯಾಙ್ಗಸಹಿತದೂರತರದೇಶಗಮನಸಾಧ್ಯಬ್ರಹ್ಮಹನನನಿವೃತ್ತಿ ಫಲಕಸೇತುಸ್ನಾನಪ್ರಶಂಸಾ
ರ್ತತ್ವಾತ್। ಯಸ್ಯ ಹಿ ದರ್ಶನಮಾತ್ರೇಣೈವ ದುರಿತೋಪಶಮಃ ಕಿಮುತ ಸ್ನಾನೇನ। ಅನ್ಯಥಾ
ೂರಗಮನಾನರ್ಥಕ್ಯಂ ಪ್ರಸಜೇತ್। ತತ್ರ ಖರಾದೀನಾಮಪ್ಯನರ್ಥನಿವೃತ್ತಿರಾಪತೇತ್।
ಂಧಸ್ಯ ನಸ್ಯಾಚ್ಚ। ನನು,

"ಅಗ್ನಿಚಿತ್ ಕಪಿಲಾ ರಾಜಾ ಸತೀ ಭಿಕ್ಷುರ್ಮಹೋದಧಿಃ।
ದೃಷ್ಟಮಾತ್ರಾಃ ಪುನನ್ತ್ಯೇತೇ ತಸ್ಮಾತ್ಪಶ್ಯೇತ ನಿತ್ಯಶಃ॥"

ಇತಿ ಕ್ವಚಿದ್ದರ್ಶನಕ್ರಿಯಾಯಾ ಅಪಿ ವಿಧಾನಂ ದರೀದೃಶ್ಯತ ಇತಿ ಚೇತ್—ನೈವಂ
ೋಚಃ। ತತ್ರಾಪ್ಯನ್ಯಥೈವಾನುಪಪತ್ತ್ಯಾಗ್ನಿಚಿದಾದ್ಯರ್ಘಪರಿಚರ್ಯಾದಾವೇವ ತಾತ್ಪರ್ಯಾ
ವಧಾರಣಾತ್।

ಯಚ್ಚೋಕ್ತಂ ವಿಷಯದೋಷದರ್ಶನಾದ್ರಾಗೋ ದಗ್ಧ ಹ್ಯತ ಇತಿ। ತತ್ರ ವಿಷಯ
ೋಷದರ್ಶನೇನ ವಿರೋಧಭೂತಾನಭಿರತಿಸಂಜ್ಞಕವೈರಾಗ್ಯೈಕಪ್ರಾದುರ್ಭಾವಾದ್ರಾಗನಿವೃತ್ತೌ
ದರ್ಶನಮಾತ್ರಮಿತಿ ನ ವ್ಯಭಿಚಾರಃ।

ಯದಪಿ ತಾರ್ಕ್ಷ್ಯಧ್ಯಾನಾದಿನಾ ವಿಷಾದಿ ಸತ್ಯಂ ವಿನಶ್ಯತೀತಿ। ತನ್ನ ಶ್ಲಿಷ್ಯತೇ। ತತ್ರಾಪಿ
ನ್ತ್ರಪ್ರಯೋಗಾದಿಕ್ರಿಯಾಯಾ ಏವ ವಿಷಾದ್ಯಪನೋದಕತ್ವಾತ್। ಧ್ಯಾನಸ್ಯ ಪ್ರಮಾತ್ವಾ
ಾವಾಚ್ಚ।

ಯದವಾದ್ಯೌಪಾಧಿಕಸ್ಯ ಜೀವಭಾವಸ್ಯೋಪಾಧಿನಿವೃತ್ತ್ಯಾ ನಿವೃತ್ತೌ ಬ್ರಹ್ಮಭಾವೋ
ಪತ್ತೇರ್ನ ತದರ್ಥಮರ್ಥವೈತಥ್ಯಕಥನಮಿತಿ। ತದಪಿ ಕಾಶಕುಶಾವಲಮ್ಬನಕಲ್ಪಮ್।
ಕಲ್ಪಾಸಹತ್ವಾತ್। ಕಿಮುಪಾಧೇಃ ಸತ್ಯತ್ವಮಭಿಪ್ರೇತ್ಯ, ಮಿಥ್ಯಾತ್ವಂ ವಾ? ನ ಪ್ರಥಮಃ।
್ರಮಾಣಾಭಾವಾತ್। ನಾಪರಃ ಇಷ್ಟಾಪತ್ತೇಃ। ತಸ್ಮಾದಾವಿದ್ಯಕೋಭೇದ ಇತಿ ಶ್ರುತಾವ
ತೀಯತ್ಯೋಪಪತ್ತಯೋಽಭಿಧೀಯತೇ ನತು ವ್ಯಸನಿತಯಾ।

ಸತ್ಯವಾದುದಕ್ಕೆ ನಿವೃತ್ತಿಯಿಲ್ಲ

ಇನ್ನು "ಸತ್ಯವಾಗಿದ್ದರೂ ಪಾಪಕ್ಕೆ ಸೇತುಸಂದರ್ಶನದಿಂದ ನಿವೃತ್ತಿಯು ಕಂಡು ಬರುತ್ತದೆ" ಎಂದು ಹೇಳಿದುದು ಯುಕ್ತವಾಗಿಲ್ಲ. ಏಕೆಂದರೆ, ವಿಹಿತವಾದ ಕರ್ಮದ ಅನುಷ್ಠಾನದಿಂದ ಉಂಟಾದ ಧರ್ಮವು ಅಧರ್ಮವನ್ನು ಹೋಗಲಾಡಿಸುತ್ತದೆಯೆಂಬುದು ನಿಶ್ಚಿತವಾಗಿದೆ. "ಧರ್ಮೇಣ ಪಾಪಮಪನುದತಿ" (ಮ.ನಾ.22-1) (ಧರ್ಮದಿಂದ ಪಾಪವನ್ನು ಪರಿಹರಿಸುತ್ತಾನೆ) ಎಂದು ಶ್ರುತಿಯು ತಿಳಿಸುತ್ತದೆ. ಪ್ರಮಾಣ ಮತ್ತು ವಸ್ತುಗಳಿಗೆ ಅಧೀನವಾಗಿರುವ ದರ್ಶನಕ್ರಿಯೆಯನ್ನು ವಿಧಾನಮಾಡಲು ಆಗುವುದಿಲ್ಲ. ಏಕೆಂದರೆ ಆ ದರ್ಶನಕ್ರಿಯೆಯು ವಿಧಿಚೋದಿತನಾದ ಪುರುಷನ ಪ್ರಯತ್ನಕ್ಕೆ ಅಧೀನವಾದುದಲ್ಲ. "ಆ

ಮಹೋದಧಿಯಲ್ಲಿ ಸ್ನಾನಮಾಡಿ ಬ್ರಹ್ಮಹತ್ಯೆಯನ್ನು ಕಳೆದುಕೊಳ್ಳುವನು" ಎಂದ
ಮುಂತಾದ ಸ್ಮೃತಿಯಿಂದ, ವಿಹಿತವಾದ ಬ್ರಹ್ಮಚರ್ಯರೂಪವಾದ ಅಂಗದಿಂದ ಕೂಡಿ
ಬಹಳದೂರದೇಶಗಮನದಿಂದ ಸಾಧ್ಯವಾದ ಬ್ರಹ್ಮಹತ್ಯಾನಿವೃತ್ತಿಯನ್ನೇ ಫಲವಾಗಿ ಉಳ
ಸೇತುಸ್ನಾನವನ್ನು ಪ್ರಶಂಸೆಮಾಡುವುದರಲ್ಲಿ ತಾತ್ಪರ್ಯ. ಯಾವುದನ್ನು ಕೇವಲ ನೋಡ
ವುದರಿಂದಲೇ ದುರಿತವು ದೂರವಾಗುತ್ತದೆಯೋ ಅದರಲ್ಲಿಸ್ನಾನಮಾಡುವುದರಿಂದ ಇನ್ನೇನು
ಎಂಬುದಾಗಿ ಪ್ರಶಂಸೆ. ಇಲ್ಲದಿದ್ದರೆ, ದೂರಗಮನವು ವ್ಯರ್ಥವಾಗಬೇಕಾದೀತು. ಮತ್ತ
ಅಲ್ಲಿರುವ ಕತ್ತೆಮೊದಲಾದುವುಗಳಿಗೂ ಪಾಪನಿವೃತ್ತಿಯುಂಟಾಗಬೇಕಾದೀತು. ಮತ್ತ
ಕುರುಡನಿಗೆ ಪಾಪನಿವೃತ್ತಿಯಾಗದಿರಬೇಕಾದೀತು. ಹಾಗಾದರೆ, "ಅಗ್ನಿಹೋತ್ರಿಯು
ಕಪಿಲಾಜಾತಿಯ ಹಸು, ರಾಜನು, ಸಾಧ್ವಿಯಾದವಳು, ಪರಮಹಂಸ ಸಂನ್ಯಾಸಿಯು
ಮಹೋದಧಿ—ಇವು ಕೇವಲ ನೋಡಲ್ಪಟ್ಟವುಗಳಾಗಿಯೇ ಪಾವನಗೊಳಿಸುತ್ತವೆ
ಆದುದರಿಂದ ನಿತ್ಯವೂ ಇವುಗಳನ್ನು ನೋಡಬೇಕು" ಎಂಬುದಾಗಿ ಕೆಲವೆಡೆ ದರ್ಶನಕ್ರಿಯೆ
ಯನ್ನೂ ಕೂಡ ವಿಧಿಸಿರುವುದು ಕಂಡುಬರುತ್ತದೆ ಎಂದು ಹೇಳುವುದಾದರೆ, ಆರೀತಿ ಹೇ
ಕೂಡದು. ಏಕೆಂದರೆ, ಅಲ್ಲಿಯೂಕೂಡ ಇದೇ ಅನುಪಪತ್ತಿಯಿಂದ ಅಗ್ನಿಹೋತ್ರಿ
ಮೊದಲಾದವರ ಪೂಜೆ-ಸತ್ಕಾರ ಮುಂತಾದುದರಲ್ಲಿಯೇ ತಾತ್ಪರ್ಯವೆಂಬುದಾ
ನಿಶ್ಚಯಮಾಡಿದೆ.

ಮತ್ತು ವಿಷಯಗಳಲ್ಲಿ ದೋಷವನ್ನು ಕಾಣುವುದರಿಂದ ರಾಗವು ದಗ್ಧವಾಗುತ್ತ
ಯೆಂಬುದಕ್ಕೆ ವಿಷಯದೋಷದರ್ಶನದಿಂದ (ವಿಷಯಕ್ಕೆ) ವಿರೋಧವಾದ "ಅನಭಿರತಿ
ಎಂಬ ಸಂಜ್ಞೆಯುಳ್ಳ ಕೇವಲ ವೈರಾಗ್ಯವು ಉಂಟಾಗುವುದರಿಂದ ರಾಗವು ನಿವೃತ್ತವಾ
ಲಾಗಿ ವಿಷಯರಾಗವು ಕಾಣುವುದಿಲ್ಲವೆಂದು ಮಾತ್ರ ಅಭಿಪ್ರಾಯವು. ಆದುದರಿಂ
ವ್ಯಭಿಚಾರದೋಷವಿಲ್ಲ.

ಮತ್ತು ಗರುಡನ ಧ್ಯಾನ ಮುಂತಾದುದರಿಂದ ಸತ್ಯವಾದ ವಿಷವು ನಾಶಹೊಂದ
ತ್ತದೆ ಎಂದು ಹೇಳಿದುದೂ ಕೂಡ ಯುಕ್ತವಾಗಿಲ್ಲ. ಏಕೆಂದರೆ, ಅಲ್ಲಿಯೂ ಕೂಡ ಮಂತ್ರ
ಪ್ರಯೋಗ—ಮುಂತಾದ ಕ್ರಿಯೆಯೇ ವಿಷಮೊದಲಾದುದರ ನಿವಾರಕವಾದುದು. ಮತ್ತು
ಧ್ಯಾನವು ಯಥಾರ್ಥಾನುಭವರೂಪವಾದ ಪ್ರಮೆಯಲ್ಲ.

ಔಪಾಧಿಕವಾದ ಜೀವಭಾವವು ಉಪಾಧಿನಿವೃತ್ತಿಯಿಂದ ನಿವೃತ್ತವಾಗಲಾಗಿ
ಬ್ರಹ್ಮಭಾವವು ಉಪಪನ್ನವಾಗುತ್ತದೆ. ಆದುದರಿಂದ ಬ್ರಹ್ಮಭಾವಕ್ಕೋಸ್ಕರವಾ
(ಪ್ರಮಾತೃತ್ವ ಮುಂತಾದ ಅರ್ಥಗಳಿಗೆ) ಮಿಥ್ಯಾತ್ವವನ್ನು ಹೇಳುವುದು ಸರಿಯಲ್ಲ—
ಎಂಬ ಮಾತೂ ಕೂಡ (ನೀರಿನಲ್ಲಿ ಮುಳುಗುತ್ತಿರುವವನು) ಸಣ್ಣಹುಲ್ಲನ್ನು ಹಿಡಿದ
ಕೊಂಡಂತೆಯೇ ಸರಿ. ಏಕೆಂದರೆ, ಇಲ್ಲಿ ಉಂಟಾಗುವ ವಿಕಲ್ಪಗಳು ಸರಿಹೊಂದುವುದಿಲ್ಲ
ಹೇಗೆಂದರೆ :— ಉಪಾಧಿಗೆ ಸತ್ಯತ್ವವು ಅಭಿಪ್ರೇತವೋ? ಅಥವಾ ಮಿಥ್ಯಾತ್ವವೋ?

ಮೊದಲನೆಯದಲ್ಲ. ಏಕೆಂದರೆ, ಆ ವಿಷಯದಲ್ಲಿ ಪ್ರಮಾಣವಿಲ್ಲ.

ಎರಡನೆಯದೂ ಅಲ್ಲ. ಏಕೆಂದರೆ, ಅದು ನಮಗೆ (ವೇದಾಂತಿಗಳಿಗೆ) ಇಷ್ಟವಾದುದೇ

ಆದುದರಿಂದ, ಶ್ರುತಿಯಲ್ಲಿ ಪ್ರತಿಪಾದಿತವಾಗಿರುವ ಅದ್ವಿತೀಯತ್ವವನ್ನು ಉಪಪಾದನೆ ಮಾಡುವುದಕ್ಕೋಸ್ಕರ ಭೇದವು ಅವಿದ್ಯಾಕಲ್ಪಿತವಾದುದೆಂಬುದಾಗಿ ಹೇಳುತ್ತಿರುವುದೇ ಹೊರತು (ವಾದ) ವ್ಯಸನಕ್ಕೋಸ್ಕರ ಅಲ್ಲ!

ಆತ್ಮಜ್ಞಾನೇನ ಅವಿದ್ಯಾನಿವೃತ್ತಿಃ–ತತ್ರರಾಜಪುತ್ರದೃಷ್ಟಾನ್ತಃ

ಯದಿ ವಸ್ತುತಃ ಸರ್ವೋಪದ್ರವರಹಿತಮಾತ್ಮತತ್ತ್ವಂ ತರ್ಹಿ ಕಥಙ್ಕಾರಂ ದೇಹಾದಿರೂಪಂ ಕಾರಾಗಾರಂ ಕಾರಙ್ಕಾರಂ ಪುನಃಪುನಸ್ತತ್ರ ಪ್ರವಿಶತಿ? ತದತಿಫಲ್ಗು। ಅವಿದ್ಯಾಯಾ ಅನಾದಿತ್ವೇನ ದತ್ತೋತ್ತರತ್ವಾತ್। ಅತೋ ನಿವೃತ್ತ್ಯುಪಾಯ ಏವಾನ್ವೇಷಣೀಯಃ ಪ್ರೇಕ್ಷಾವತಾ। ನ ತು ವಿಸ್ಮಯಃ ಕರ್ತವ್ಯಃ।

ತತಶ್ಚ ತತ್ತ್ವಮಸ್ಯಾದಿವಿದ್ಯಯಾ ತದವಿದ್ಯಾನಿವೃತ್ತೌ ನಿರತಿಶಯಾನನ್ದಾತ್ಮಲಾಭರೂಪಪರಮಪುರುಷಾರ್ಥಃ ಸೇತ್ಸ್ಯತಿ। ತಥಾಚಾಪಸ್ತಮ್ಬಸ್ಮೃತಿಃ :–"ಆತ್ಮಲಾಭಾನ್ನ ಪರಂ ವಿದ್ಯತೇ" ಇತಿ।

ನನ್ವಸೌ ನಿತ್ಯಲಬ್ಧಃ। ನಹಿ ಸ್ವಯಮೇವ ಸ್ವಸ್ಯಾಲಬ್ಧೋ ಭವತಿ। ಸತ್ಯಮ್। ಕಿಂತ್ವನಾದಿಮಾಯಾಸಮ್ಬನ್ಧಾತ್ ಕ್ಷೀರೋದಕವತ್ ಸಮುದಾಚಾರವೃತ್ತಿತಾಂ ನ ಲಭತೇ। ತಥಾಚ ಯಥಾ ಶಬರಾದಿಭಿರ್ಬಾಲ್ಯಾತ್ ಸ್ವಸುತೈಃ ಸಹ ವರ್ಧಿತೋ ರಾಜಪುತ್ರಸ್ತಜ್ಜಾತೀಯಮಾತ್ಮಾನಮವಗಚ್ಛನ್ ಬನ್ಧುಭಿರ್ಯ ಏವಮ್ಭೂತೋರಾಜಾ ಸ ತ್ವಮಸೀತಿ ಬೋಧಿತೇ ಸ್ವರೂಪೇ ಲಬ್ಧಸ್ವರೂಪ ಇವ ಭವತಿ ತಥಾ ವೇಶ್ಯಾಸ್ಥಾನೀಯಯಾನಾದ್ಯವಿದ್ಯಯಾ ಸ್ವಭಾವಾನ್ತರಂ ನೀತ ಆತ್ಮಾಮಾತೃಸ್ಥಾನೀಯಯಾತತ್ತ್ವಮಸೀತ್ಯಾದಿಕಯಾ ಶ್ರುತ್ಯಾ ಸ್ವಭಾವಂ ನೀಯತೇ। ಏತದಾಹುಸ್ತ್ರೈವಿದ್ಯವೃದ್ಧಾಃ :–

ನೀಚಾನಾಂ ವಸತೌ ತದೀಯತನಯೈಃ ಸಾರ್ಧಂ ಚಿರಂವರ್ಧಿತ
ಸ್ತಜ್ಜಾತೀಯಮವೈತಿ ರಾಜತನಯಃ ಸ್ವಾತ್ಮಾನಮಪ್ಯಞ್ಜಸಾ।
ಸಂವಾದೇ ಮಹದಾದಿಭಿಃ ಸಹ ವಸಂಸ್ತದ್ವದ್ಭವೇತ್ ಪೂರುಷಃ
ಸ್ವಾತ್ಮಾನಂ ಸುಖದುಃಖಜಾಲಕಲಿತಂ ಮಿಥ್ಯೈವ ಧಿಙ್ಮನ್ಯತೇ॥
ದಾತಾ ಭೋಗಪರಃ ಸಮಗ್ರವಿಭವೋ ಯಃ ಶಾಸಿತಾ ದುಷ್ಕೃತಾಂ
ರಾಜಾ ಸ ತ್ವಮಸೀತಿ ರಕ್ಷಿತೃಮುಖಾಚ್ಛ್ರುತ್ವಾ ಯಥಾವತ್ಸ ತು।
ರಾಜೀಭೂಯ ಜಯಾರ್ಥಮೇವ ಯತತೇ ತದ್ವತ್ಪುಮಾರ್ ಬೋಧಿತಃ
ಶ್ರುತ್ಯಾ ತತ್ತ್ವಮಸೀತ್ಯಪಾಸ್ಯ ದುರಿತಂ ಬ್ರಹ್ಮೈವ ಸಮ್ಪದ್ಯತೇ॥"

ಏತೇನೈತತ್ಪ್ರತ್ಯುಕ್ತಂ, ಯದುಕ್ತಂ ಪರೈಃ ಕಿಂ ದ್ವಯೋಸ್ತಾದಾತ್ಮ್ಯಮೇಕಸ್ಯವಾ? ನಾದ್ಯಃ। ಅದ್ವೈತಭಙ್ಗಪ್ರಸಙ್ಗಾತ್। ನದ್ವಿತೀಯಃ। ಅಸಮ್ಭವಾದಿತಿ। ತನ್ನ। ಅವಿದ್ಯಾಪರಿಕಲ್ಪಿತಭೇದನಿವೃತ್ತಿಪರತ್ವೇನ ತತ್ತ್ವಮಸ್ಯಾದಿತಾದಾತ್ಮ್ಯವಾದಪ್ರಮಾಣೋಪಪತ್ತೇಃ। ತೌ ಚ ಪರ್ಯನುಯೋಗಪರಿಹಾರಾವಗ್ರಾಹಿಷಾತಾಂ ಮನೀಷಿಭಿಃ :—

"ನದ್ಯಯೋರಪಿ ತಾದಾತ್ಮ್ಯಂ ನ ಚೈಕಸ್ಯಾದ್ವಯತ್ವತಃ।
ಅಪ್ರಾಮಾಣ್ಯಂ ಶ್ರುತೇರೇವಂ ನಾರೋಪಧ್ವಂಸಮಾತ್ರತಃ"॥ ಇತಿ।

ತತಶ್ಚ ತತ್ತ್ವಮಸೀತಿ ತತ್ತ್ವಮ್ಪದಾರ್ಥಶ್ರವಣಮನನಭಾವನಾಬಲಭುವಾ ಸಾಕ್ಷಾ
ತ್ಕಾರೇಣಾನಾದ್ಯವಿದ್ಯಾನಿವೃತ್ತೌ ಸಚ್ಚಿದಾನನ್ದೈಕರಸಬ್ರಹ್ಮಾವಿರ್ಭಾವಃ ಸಮ್ಪತ್ಸ್ಯತ ಇತಿ
ಬ್ರಹ್ಮಣೋಜಿಜ್ಞಾಸ್ಯತ್ವಂ ಪ್ರಥಮಸೂತ್ರೋಕ್ತಂ ಯುಕ್ತಮ್।

ಆತ್ಮಜ್ಞಾನದಿಂದ ಅವಿದ್ಯಾನಿವೃತ್ತಿ-ರಾಜಪುತ್ರನ ದೃಷ್ಟಾಂತ

ಒಂದುವೇಳೆ ಆತ್ಮತತ್ತ್ವವು ವಾಸ್ತವಿಕವಾಗಿ ಸರ್ವೋಪದ್ರವರಹಿತವಾಗಿರುವುದಾದರೆ ದೇಹಾದಿರೂಪವಾದ ಕಾರಾಗೃಹವನ್ನು ನಿರ್ಮಾಣ ಮಾಡಿ ಮಾಡಿ ಮತ್ತೆ ಮತ್ತೆ ಅದ ರಲ್ಲಿಯೇ ಹೇಗೆತಾನೇ ಪ್ರವೇಶಿಸುತ್ತದೆ? ಇದು ಬಹಳ ಅಲ್ಪವಾದ ಪ್ರಶ್ನೆ. ಏಕೆಂದರೆ, ಅವಿದ್ಯೆಯು ಅನಾದಿಯಾದುದರಿಂದ ಈ ಪ್ರಶ್ನೆಗೆ ಆಗಲೇ ಉತ್ತರವನ್ನು ಕೊಟ್ಟಾಗಿದೆ. ಆದುದರಿಂದ ವಿವೇಕಿಯಾದವನು (ಅವಿದ್ಯೆಯ) ನಿವೃತ್ತಿಗೆ ಉಪಾಯವನ್ನೇ ಹುಡುಕ ಬೇಕೇ ಹೊರತು ವಿಸ್ಮಯಪಡಬಾರದು.

ಆದುದರಿಂದ "ತತ್ತ್ವಮಸಿ" ಎಂದು ಮುಂತಾದ ವಿದ್ಯೆಯಿಂದ ಆ ಅವಿದ್ಯೆಯು ನಿವೃತ್ತವಾಗಲಾಗಿ, ನಿರತಿಶಯಾನಂದರೂಪವಾದ ಆತ್ಮಲಾಭವೆಂಬ ಪುರುಷಾರ್ಥವು ಸಿದ್ಧಿಸುವುದು. ಇದೇ ರೀತಿಯಾಗಿ 'ಆಪಸ್ತಂಬಸ್ಮೃತಿ'ಯೂ ಕೂಡ "ಆತ್ಮಲಾಭ ಕ್ಕಿಂತಲೂ ಬೇರೆಯಾದುದು (ಲಾಭವು) ಇಲ್ಲ" ಎಂದು ತಿಳಿಸುತ್ತದೆ.

ಸರಿ; ಇದು ನಿತ್ಯವಾಗಿಯೂ ಪ್ರಾಪ್ತವಾಗಿಯೇ ಇದೆಯಲ್ಲ! ತಾನೇ ತನಗೆ ಪ್ರಾಪ್ತ ವಾಗದೆ ಇರುವುದಿಲ್ಲವಷ್ಟೆ!— ಎನ್ನುವುದಾದರೆ, ನಿಜ; ಆದರೆ, ಅನಾದಿಯಾದ ಮಾಯೆಯ ಸಂಬಂಧದಿಂದ ಹಾಲು-ನೀರಿನಂತೆ ಸಮುದಾಚಾರವೃತ್ತಿ(ತತ್ತ್ವದರ್ಶನ)ಯನ್ನು ಹೊಂದಿಲ್ಲ ಹೇಗೆ, ಬಾಲ್ಯಮೊದಲುಗೊಂಡು ಬೇಡರು ಮುಂತಾದವರಿಂದ ತಮ್ಮ ಮಕ್ಕಳ ಜೊತೆಯಲ್ಲಿ ಬೆಳೆಸಲ್ಪಟ್ಟ ಒಬ್ಬ ರಾಜಕುಮಾರನು ತನ್ನನ್ನು ಬೇಡರ ಜಾತಿಯವನನ್ನಾಗಿಯೇ ಭಾವಿ ಸುತ್ತಾ (ತನ್ನ ನಿಜವಾದ) ಬಂಧುಗಳಿಂದ ಈರೀತಿಯಾಗಿರುವಂತಹ ಅಂದರೆ ರಾಜ್ಯಾದಿ ವೈಭವವುಳ್ಳ "ರಾಜನೇ ನೀನು" ಎಂಬುದಾಗಿ ತನ್ನ ಸ್ವರೂಪವು ತಿಳಿಸಲ್ಪಡಲಾಗಿ ತನ್ನ ಸ್ವರೂಪವನ್ನು ಹೊಂದಿದವನಂತೆ ಆಗುತ್ತಾನೆಯೋ ಹಾಗೆಯೇ ವೇಶ್ಯೆಯಂತಿರುವ ಅನಾದಿ ಯಾದ ಅವಿದ್ಯೆಯಿಂದ ಬೇರೆ ಸ್ವಭಾವಕ್ಕೆ ಒಯ್ಯಲ್ಪಟ್ಟ ಆತ್ಮನು ತಾಯಿಯಂತಿರುವ "ತತ್ತ್ವಮಸಿ" ಎಂದು ಮುಂತಾದ ಶ್ರುತಿಯಿಂದ (ತನ್ನ ನಿಜವಾದ) ಸ್ವಭಾವಕ್ಕೆ ಒಯ್ಯ ಲ್ಪಡುತ್ತಾನೆ. ತ್ರೈವಿದ್ಯವೃದ್ಧರು (ಔಪನಿಷದರು) ಇದನ್ನೇ ಹೇಳುತ್ತಾರೆ:— "ನೀಚ ಮನೆಯಲ್ಲಿ ಅವರ ಮಕ್ಕಳ ಜೊತೆಯಲ್ಲಿ ಬಹಳ ಕಾಲ ಬೆಳೆಸಲ್ಪಟ್ಟ ರಾಜಕುಮಾರನ ತನ್ನನ್ನೂ ಕೂಡ ನೀಚಜಾತಿಯವನನ್ನಾಗಿಯೇ ಭಾವಿಸುತ್ತಾನೆ. ಹಾಗೆಯೇ ಪುರುಷನ (ಜೀವಾತ್ಮನು) ಮಹತ್ ಮೊದಲಾದ (ಮಾಯಿಕವಾದ) ತತ್ತ್ವಗಳೊಡನೆ ವಾಸ ಮಾಡುತ್ತಾ ಅದರಂತೆಯೇ ಆಗುತ್ತಾನೆ. ಮತ್ತು ತನ್ನನ್ನು ಸುಖದುಃಖಜಾಲಕ್ಕೆ ಸಿಕ್ಕಿ

ಕೊಂಡವನನ್ನಾಗಿ ವೃಥಾ ಭ್ರಮಿಸುತ್ತಾನೆ. ಅವನಿಗೆ ಧಿಕ್ಕಾರ!” “ದಾತೃವೂ, ಭೋಗ ಯುಕ್ತನೂ, ಪರಿಪೂರ್ಣವಾದ ಐಶ್ವರ್ಯವುಳ್ಳವನೂ ಆದ ಯಾವ ರಾಜನಿದ್ದಾನೆಯೋ ಅವನೇ ನೀನು ಆಗಿದ್ದೀಯೆ ಎಂಬುದಾಗಿ ರಕ್ಷಕಜನರ ಮುಖದಿಂದ ಕೇಳಿ ಆ ರಾಜ ಕುಮಾರನು ಯಥಾವತ್ತಾದ ರಾಜನಾಗಿ ಜಯಕ್ಕೋಸ್ಕರ ಪ್ರಯತ್ನಿಸುತ್ತಾನೆ. ಅದ ರಂತೆಯೇ, ಪುರುಷನು (ಜೀವಾತ್ಮನು) “ತತ್ತ್ವಮಸಿ” ಎಂಬ ಶ್ರುತಿಯಿಂದ ಬೋಧಿಸ ಲ್ಪಟ್ಟವನಾಗಿ ದುರಿತವನ್ನು ತ್ಯಜಿಸಿ ಬ್ರಹ್ಮವನ್ನೇ ಹೊಂದುತ್ತಾನೆ.”

ಇದರಿಂದ, ಬೇರೆಯವರು “ಎರಡು ವಸ್ತುಗಳಿಗೆ ತಾದಾತ್ಮ್ಯವೋ? ಅಥವಾ ಒಂದು ವಸ್ತುವಿಗೋ? ಮೊದಲನೆಯದಲ್ಲ. ಏಕೆಂದರೆ, ಅದ್ವೈತಭಂಗ ಪ್ರಸಂಗವುಂಟಾಗುತ್ತದೆ. ಎರಡನೆಯದೂ ಅಲ್ಲ. ಏಕೆಂದರೆ, ಒಂದೇವಸ್ತುವಿಗೆ ತಾದಾತ್ಮ್ಯವೆಂಬುದು ಅಸಂಭವ ಎಂದು ಹೇಳುವುದು ನಿರಾಕೃತವಾಗುತ್ತದೆ” ಎನ್ನುವುದು ಸರಿಯಲ್ಲ. ಏಕೆಂದರೆ, ಅವಿದ್ಯೆ ಯಿಂದ ಪರಿಕಲ್ಪಿತವಾದ ಭೇದದ ನಿವೃತ್ತಿಯಲ್ಲಿ ತಾತ್ಪರ್ಯವಿರುವುದರಿಂದ “ತತ್ತ್ವಮಸಿ” ಎಂದು ಮುಂತಾದ ತಾದಾತ್ಮ್ಯವಾದಕ್ಕೆ ಪ್ರಾಮಾಣ್ಯವು ಉಪಪನ್ನವಾಗುತ್ತದೆ. ಆ ಆಕ್ಷೇಪ ಮತ್ತು ಪರಿಹಾರಗಳನ್ನು ವಿದ್ವಾಂಸರು, “ಎರಡು ವಸ್ತುಗಳಿಗೆ ತಾದಾತ್ಮ್ಯವಿಲ್ಲ. ಅದ್ವಯಭಾವದಕಾರಣವಾಗಿ ಒಂದು ವಸ್ತುವಿಗೂ ತಾದಾತ್ಮ್ಯವಿರುವುದಿಲ್ಲ. ಹಾಗಾದರೆ ಶ್ರುತಿಗೆ ಅಪ್ರಾಮಾಣ್ಯವೇ? ಇಲ್ಲ. ಮಿಥ್ಯಾಜ್ಞಾನನಾಶದಲ್ಲಿ ಮಾತ್ರ ತಾತ್ಪರ್ಯ” ಎಂದು ಗ್ರಹಿಸಿದರು.

ಆದುದರಿಂದ, “ತತ್ತ್ವಮಸಿ” ಎಂಬುದಾಗಿ ತತ್, ತ್ವಮ್—ಎಂಬ ಪದಗಳ ಅರ್ಥವನ್ನು ಶ್ರವಣ, ಮನನ, ನಿದಿಧ್ಯಾಸನ—ಮಾಡುವುದರ ಬಲದಿಂದ ಉಂಟಾದ ಸಾಕ್ಷಾತ್ಕಾರದಿಂದ ಅನಾದಿಯಾದ ಅವಿದ್ಯೆಯ ನಿವೃತ್ತಿಯುಂಟಾಗಲಾಗಿ, ಸಚ್ಚಿದಾನಂದ ರಸೈಕರೂಪವಾದ ಬ್ರಹ್ಮಾವಿರ್ಭಾವವು ಸಂಪನ್ನವಾಗುವುದರಿಂದ ಬ್ರಹ್ಮನಿಗೆ ಜಿಜ್ಞಾಸ್ಯತ್ವ ವನ್ನು ಮೊದಲನೆಯ ಸೂತ್ರದಲ್ಲಿ ಹೇಳುವುದು ಯುಕ್ತವಾಗಿದೆ.

ಅನುಬನ್ಧಚತುಷ್ಟಯಮ್

ಅಜ್ಞಾತಂ ವಿಷಯೋ ಬ್ರಹ್ಮ ಜ್ಞಾತಂ ತಚ್ಚ ಪ್ರಯೋಜನಮ್।
ಮುಮುಕ್ಷುರಧಿಕಾರೀ ಸ್ಯಾತ್ಸಮ್ಬನ್ಧಃ ಶಕ್ತಿತಃ ಶ್ರುತೇಃ॥ ಇತಿ।

ಅನುಬಂಧ ಚತುಷ್ಟಯ

“ಅಜ್ಞಾತವಾಗಿರುವ ಬ್ರಹ್ಮವೇ ವಿಷಯವು. ಜ್ಞಾತವಾದ ಬ್ರಹ್ಮವೇ ಪ್ರಯೋಜನವು. ಮೋಕ್ಷಾಪೇಕ್ಷಿಯಾದವನು ಅಧಿಕಾರಿಯು. ಶ್ರುತಿಯ ಶಕ್ತಿಯಿಂದ (ಪ್ರತಿಪಾದಕತ್ವದಿಂದ) ಸಂಬಂಧವು. (ಶ್ರುತಿಗೂ ಬ್ರಹ್ಮಕ್ಕೂ ಪ್ರತಿಪಾದ್ಯಪ್ರತಿಪಾದಕಭಾವವು ಸಂಬಂಧ)”

ಜನ್ಮಾದ್ಯಧಿಕರಣಮ್–ಸ್ವರೂಪತಟಸ್ಥಲಕ್ಷಣೇ

"ಜನ್ಮಾದ್ಯಸ್ಯಯತಃ" (ಬ್ರ.ಸೂ.1-1-2) ಇತಿ ದ್ವಿತೀಯಸೂತ್ರೇ ಬ್ರಹ್ಮಸ್ವರೂಪಲಕ್ಷಣ ತಟಸ್ಥಲಕ್ಷಣಾಭ್ಯಾಂ ನ್ಯರೂಪಿ। ತತ್ರ ಸ್ವರೂಪಾನ್ತರ್ಗತತ್ವೇ ಸತಿ ವ್ಯಾವರ್ತಕಂ ಸ್ವರೂಪಲಕ್ಷಣಂ "ಸತ್ಯಂ ಜ್ಞಾನಮನನ್ತಂ ಬ್ರಹ್ಮ" (ತೈ.2-1-1) ಇತ್ಯಾದಿವೇದಾನ್ತೈಃ ಪ್ರತಿಪಾದಿತಮ್। ತಸ್ಯ ಸತ್ಯಜ್ಞಾನಾದ್ಯಾತ್ಮಕಸ್ವರೂಪಾನ್ತರ್ಗತತ್ವೇ ಸತಿ ವ್ಯಾವರ್ತಕತ್ವಾತ್। ತಟಸ್ಥಲಕ್ಷಣಂ "ಯತೋವಾ ಇಮಾನಿ" (ತೈ.2-1) ಇತ್ಯಾದೀನಿ ವಾಕ್ಯಾನಿ ನಿರೂಪಯನ್ತಿ ಜಗಜ್ಜನ್ಮಾದಿಕಾರಣತ್ವೇನ। ತದುಕ್ತಂ ವಿವರಣೇ :—

> "ಜಗಜ್ಜನ್ಮಸ್ಥಿತಿಧ್ವಂಸಾ ಯತಃ ಸಿಧ್ಯನ್ತಿ ಕಾರಣಾತ್।
> ತತ್ಸ್ವರೂಪತಟಸ್ಥಾಭ್ಯಾಂ ಲಕ್ಷಣಾಭ್ಯಾಂ ಪ್ರದರ್ಶ್ಯತೇ"॥ ಇತಿ।

ಜನ್ಮಾದ್ಯಧಿಕರಣ–ಸ್ವರೂಪ ಮತ್ತು ತಟಸ್ಥಲಕ್ಷಣಗಳು

"ಜನ್ಮಾದ್ಯಸ್ಯಯತಃ" (ಬ್ರ.ಸೂ.1-1-2) (ಯಾವುದರಿಂದ ಇದರ (ಜಗತ್ತಿನ) ಜನ್ಮವೊದಲಾದುದು ಉಂಟಾಗುವುದೋ) ಎಂಬ ಎರಡನೆಯ ಸೂತ್ರದಲ್ಲಿ ಸ್ವರೂಪ ಲಕ್ಷಣ ಮತ್ತು ತಟಸ್ಥಲಕ್ಷಣಗಳಿಂದ ಬ್ರಹ್ಮವು ನಿರೂಪಿಸಲ್ಪಟ್ಟಿದೆ. ಅವುಗಳಲ್ಲಿ, ಸ್ವರೂಪದಲ್ಲಿ ಸೇರಿದ್ದು ವ್ಯಾವರ್ತಕವಾಗುವ ಸ್ವರೂಪಲಕ್ಷಣವು "ಸತ್ಯಂ ಜ್ಞಾನಮನಂತಂ ಬ್ರಹ್ಮ" (2-1-1) ಎಂದು ಮುಂತಾದ ವೇದಾಂತಗಳಿಂದ ಪ್ರತಿಪಾದಿತವಾಗಿದೆ. ಏಕೆಂದರೆ, ಅದು (ಸ್ವರೂಪಲಕ್ಷಣವು) ಸತ್ಯಜ್ಞಾನಾದಿರೂಪವಾದ ಸ್ವರೂಪದಲ್ಲಿ ಅಂತರ್ಗತವಾಗಿದ್ದು ವ್ಯಾವರ್ತಕವಾಗಿದೆ. ತಟಸ್ಥಲಕ್ಷಣವನ್ನು "ಯತೋವಾ ಇಮಾನಿ" (ತೈ.2-1.) ಎಂದು ಮುಂತಾದ ವಾಕ್ಯಗಳು ಜಗತ್ತಿನ ಜನ್ಮಾದಿಗಳ ಕಾರಣರೂಪದಿಂದ ನಿರೂಪಿಸುತ್ತವೆ. ಅದನ್ನೇ "ವಿವರಣ"ದಲ್ಲಿ "ಕಾರಣವಾದ ಯಾವುದರಿಂದ ಜಗತ್ತಿನ ಜನ್ಮ–ಸ್ಥಿತಿ–ಧ್ವಂಸಗಳು ಸಿದ್ಧಿಸುತ್ತವೆಯೋ ಅದು (ಬ್ರಹ್ಮವು) ಸ್ವರೂಪ–ತಟಸ್ಥಲಕ್ಷಣಗಳಿಂದ ನಿರೂಪಿಸಲ್ಪಡುತ್ತದೆ" ಎಂದು ಹೇಳಿದ್ದಾರೆ.

ಶಾಸ್ತ್ರಯೋನಿತ್ವಾಧಿಕರಣಮ್

"ಶಾಸ್ತ್ರಯೋನಿತ್ವಾತ್" (ಬ್ರ.ಸೂ.1-1-3) ಇತಿ ತೃತೀಯಸೂತ್ರೇ ಪ್ರಥಮವರ್ಣಕೇನ ಷಷ್ಠೀಸಮಾಸಮಾಶ್ರಿತ್ಯ ಸರ್ವಜ್ಞತ್ವಂ ಪ್ರತ್ಯಪಾದಿ। ದ್ವಿತೀಯವರ್ಣಕೇನ ಬಹುವ್ರೀಹಿಸಮಾಸಮಭ್ಯುಪಗಮ್ಯ ಬ್ರಹ್ಮಣೋ ವೇದಾನ್ತಪ್ರಮಾಣಕತ್ವಂ ಪ್ರತ್ಯಜ್ಞಾಯಿ।

ಶಾಸ್ತ್ರಯೋನಿತ್ವಾಧಿಕರಣ

"ಶಾಸ್ತ್ರಯೋನಿತ್ವಾತ್" (ಬ್ರ.ಸೂ.1-1-3) ಎಂಬ ಮೂರನೆಯ ಸೂತ್ರದಲ್ಲಿ ಮೊದಲನೆಯ ವರ್ಣಕ(ಪ್ರಕಾರ)ದಿಂದ "ಷಷ್ಠೀಸಮಾಸ"[53]ವನ್ನು ಆಶ್ರಯಿಸಿ ಸರ್ವಜ್ಞತ್ವವು

ಪ್ರತಿಪಾದಿಸಲ್ಪಟ್ಟಿದೆ. ಎರಡನೆಯ ವರ್ಣಕ(ಪ್ರಕಾರ)ದಿಂದ "ಬಹುವ್ರೀಹಿ ಸಮಾಸ"ವನ್ನು ಆಶ್ರಯಿಸಿ ಬ್ರಹ್ಮನಿಗೆ ವೇದಾಂತಪ್ರಮಾಣಕತ್ವವು ಪ್ರತಿಜ್ಞಾತವಾಗಿದೆ.

ಸಮನ್ವಯಾಧಿಕರಣಮ್

''ತತ್ತುಸಮನ್ವಯಾತ್'' (ಬ್ರ.ಸೂ.1-1-4) ಇತಿ ಚತುರ್ಥೇ ಸೂತ್ರೇ ಪ್ರಥಮವರ್ಣಕೇನ ವೇದಾನ್ತಾನಾಂ ಬ್ರಹ್ಮಣಿ ತಾತ್ಪರ್ಯಂ ಪ್ರತ್ಯಪಾದಿ। ದ್ವಿತೀಯವರ್ಣಕೇನ ವೇದಾನ್ತಾನಾಂ ಪ್ರತಿಪತ್ತಿವಿಧಿಶೇಷತಯಾ ಬ್ರಹ್ಮಪ್ರತಿಪಾದಕತ್ವಂ ಪ್ರತ್ಯಕ್ಷೇಪಿ।

ದಿಙ್ಮಾತ್ರಮತ್ರ ಪ್ರದರ್ಶಿತಮ್। ಶಿಷ್ಟಂ ಶಾಸ್ತ್ರ ಏವ ಸ್ಪಷ್ಟಮಿತಿ ಸಕಲಂ ಸಮಞ್ಜಸಮ್॥

ಇತಿ ಶ್ರೀಮತ್ಸಾಯಣಮಾಧವೀಯೇ ಸರ್ವದರ್ಶನಸಙ್ಗ್ರಹೇ ಸಕಲದರ್ಶನಶಿರೋಽಲಙ್ಕಾರರತ್ನಂ ಶ್ರೀಮಚ್ಛಾಙ್ಕರದರ್ಶನಂ ಸಮಾಪ್ತಮ್॥

ಸಮನ್ವಯಾಧಿಕರಣ

"ತತ್ತುಸಮನ್ವಯಾತ್" (ಬ್ರ.ಸೂ.1-1-4) ಎಂಬ ನಾಲ್ಕನೆಯ ಸೂತ್ರದಲ್ಲಿ ಮೊದಲನೆಯ ವರ್ಣಕದಿಂದ ವೇದಾಂತಗಳಿಗೆ ಬ್ರಹ್ಮನಲ್ಲಿ ತಾತ್ಪರ್ಯವು ಪ್ರತಿಪಾದಿತವಾಗಿದೆ. ಎರಡನೆಯ ವರ್ಣಕದಿಂದ ವೇದಾಂತಗಳು ಉಪಾಸನಾವಿಧಿಯ ಅಂಗರೂಪವಾಗಿ ಬ್ರಹ್ಮವನ್ನು ಪ್ರತಿಪಾದಿಸುತ್ತವೆ ಎಂಬುದು ಖಂಡಿಸಲ್ಪಟ್ಟಿದೆ.

ಇಲ್ಲಿ ದಿಙ್ಮಾತ್ರವಾಗಿ ನಿರೂಪಿಸಲಾಗಿದೆ. ಉಳಿದುದೆಲ್ಲ ಶಾಸ್ತ್ರದಲ್ಲಿಯೇ ಸ್ಪಷ್ಟವಾಗಿರುವುದರಿಂದ ಎಲ್ಲವೂ ಸಮಂಜಸವಾಗಿದೆ.

ಹೀಗೆ ಶ್ರೀಮತ್ಸಾಯಣಮಾಧವೀಯವಾದ "ಸರ್ವದರ್ಶನಸಂಗ್ರಹ"ದಲ್ಲಿ ಸಕಲದರ್ಶನಶಿರೋಽಲಂಕಾರರತ್ನವಾದ ಶ್ರೀಮಚ್ಛಾಂಕರ ದರ್ಶನವು ಸಮಾಪ್ತವಾದುದು.

ಶಾಂಕರದರ್ಶನಕ್ಕೆ ಟಿಪ್ಪಣಿಗಳು

1. ಪರಿಣಾಮವಾದ: ಪರಿಣಾಮವಾದವು ಸಾಂಖ್ಯದರ್ಶನದ ಸಿದ್ಧಾಂತ. ಸತ್ತ್ವ, ರಜಸ್ ಮತ್ತು ತಮಸ್‌ಗಳೆಂಬ ಮೂರು ಗುಣಗಳ ಸಾಮ್ಯಾವಸ್ಥಾರೂಪವಾಗಿರುವುದೇ ಮೂಲ ಪ್ರಕೃತಿ. ಇದನ್ನೇ "ಪ್ರಧಾನ"ವೆಂದು ಕರೆಯುತ್ತಾರೆ. ಈ ಪ್ರಧಾನವೇ "ಮಹತ್" ಮೊದಲಾದ ತತ್ತ್ವಗಳ ರೂಪವಾಗಿ ಪರಿಣಾಮಹೊಂದುತ್ತದೆ. ಈ ಪರಿಣಾಮ ಕ್ರಮವೇ ಸಾಂಖ್ಯಕಾರಿಕೆಯಲ್ಲಿ,

> " ಪ್ರಕೃತೇರ್ಮಹಾಂಸ್ತತೋಽಹಙ್ಕಾರಸ್ತಸ್ಮಾದ್ಗಣಶ್ಚ ಷೋಡಶಕಃ
> ತಸ್ಮಾದಪಿ ಷೋಡಶಕಾತ್ ಪಞ್ಚಭ್ಯಃಪಞ್ಚ ಭೂತಾನಿ" (ಸಾಂ.ಕಾ.22)

ಎಂದು ಹೇಳಲ್ಪಟ್ಟಿದೆ. ಕೂಟಸ್ಥ ನಿತ್ಯನಾದ ಪುರುಷನೂ ಸೇರಿ ಒಟ್ಟು ಇಪ್ಪತ್ತೈದು ತತ್ತ್ವಗಳು ಸಾಂಖ್ಯದರ್ಶನದ ಪ್ರಮೇಯಗಳು. ಪ್ರತ್ಯಕ್ಷ, ಅನುಮಾನ ಮತ್ತು ಆಪ್ತವಚನ (ಶಬ್ದ) ಎಂಬ ಮೂರು ಪ್ರಮಾಣಗಳನ್ನು ಸಾಂಖ್ಯರು ಅಂಗೀಕರಿಸಿದ್ದಾರೆ. "ಸತ್" ಆದ ಕಾರಣದಿಂದಲೇ "ಸತ್" ಆದ ಕಾರ್ಯವು ಉಂಟಾಗುವುದರಿಂದ ಇವರದು ಸತ್ಕಾರ್ಯವಾದ. ಈ ರೀತಿಯಾದ ಕಾರ್ಯಕಾರಣಭಾವದ ಬಲದಿಂದ ಪ್ರಧಾನ ಮುಂತಾದ ತತ್ತ್ವಗಳನ್ನು ಸಾಧಿಸುತ್ತಾರೆ.

ಪ್ರಪಂಚವೆಲ್ಲವೂ ಸುಖದುಃಖ ಮೋಹಾತ್ಮಕವಾಗಿದೆ. ಸುಖದುಃಖಮೋಹಾತ್ಮಕವಾದ ಈ ಪ್ರಪಂಚವೆಂಬ ಕಾರ್ಯವು ಅಂತಹುದೇ ಆದ, ಅಂದರೆ, ಸುಖದುಃಖಮೋಹರೂಪವಾದ ಕಾರಣದಿಂದಲೇ ಉಂಟಾಗಿರಬೇಕು. ಸುಖ, ದುಃಖ, ಮೋಹಗಳು ಕ್ರಮವಾಗಿ ಸತ್ತ್ವ, ರಜಸ್, ತಮಸ್ ಎಂಬ ಗುಣಗಳಿಂದ ಉಂಟಾಗುತ್ತವೆ. ಆದುದರಿಂದ ಸುಖದುಃಖಮೋಹಾತ್ಮಕವಾಗಿರುವ ಈ ಜಗತ್ತಿಗೆ ತ್ರಿಗುಣಾತ್ಮಕವಾದ ಪ್ರಧಾನವೇ ಕಾರಣ (ಪರಿಣಾಮ್ಯುಪಾದಾನ). ಈ ವಿಷಯವನ್ನು ನಿರೂಪಿಸಲು ಸಾಂಖ್ಯರು ಈ ರೀತಿ ಅನುಮಾನ ಪ್ರಯೋಗ ಮಾಡುತ್ತಾರೆ:-

"ವಿವಾದವಿಷಯವಾದ ಪದಾರ್ಥ ಸಮುದಾಯವು (ಪ್ರಪಂಚವು) ಸುಖದುಃಖ ಮೋಹಾತ್ಮಕವಾದ ಕಾರಣವುಳ್ಳದ್ದು; ಸುಖದುಃಖಮೋಹಯುಕ್ತವಾಗಿರುವುದರಿಂದ ಯಾವುದು ಯಾವುದರಿಂದ ಅನ್ವಿತವಾಗಿರುತ್ತದೋ ಅದು ಅದನ್ನೇ ಕಾರಣವಾಗಿವುಳ್ಳದ್ದಾಗಿರುತ್ತದೆ; ಹೇಗೆಂದರೆ ಚಿನ್ನದಿಂದ ಯುಕ್ತವಾಗಿರುವ ಕಂಠಹಾರವು ಚಿನ್ನವನ್ನೇ ಕಾರಣವಾಗಿವುಳ್ಳದ್ದು.

ಶಾಂಕರ ದರ್ಶನದಲ್ಲಿ ಈ ಪರಿಣಾಮವಾದವನ್ನು ಖಂಡಿಸಿ ವಿವರ್ತವಾದವನ್ನು ಸ್ಥಾಪಿಸಿದ್ದಾರೆ. ಪ್ರಧಾನಕಾರಣವಾದವನ್ನು ಖಂಡಿಸುವುದಕ್ಕಾಗಿ ಈ ಅನುಮಾನ ಪ್ರಯೋಗದಲ್ಲಿರುವ ದೋಷಗಳನ್ನು ಈ ಪ್ರಕರಣದಲ್ಲಿ ತೋರಿಸಿದ್ದಾರೆ.

2. ನಿರ್ದುಷ್ಟವಾದ ಅನುಮಾನ ಪ್ರಯೋಗದಿಂದ ಮಾತ್ರ ಸಾಧ್ಯವು ಸಿದ್ಧಿಸುತ್ತದೆ. ಅನುಮಾನ ದೋಷಗಳು ವ್ಯಭಿಚಾರ, ವಿರೋಧ, ಅಸಿದ್ಧಿ, ಸತ್ಪ್ರತಿಪಕ್ಷತ್ವ ಮತ್ತು ಬಾಧ–ಎಂಬುದಾಗಿ ಐದು ವಿಧವಾಗಿವೆ. ಈ ರೀತಿಯಾದ ದೋಷಗಳಿಂದ ಕೂಡಿದ ಹೇತುವನ್ನು ದುಷ್ಟಹೇತುವೆಂದು ಕರೆಯುತ್ತಾರೆ. ಇವು ತರ್ಕಶಾಸ್ತ್ರದಲ್ಲಿ ಹೇತ್ವಾಭಾಸಗಳೆಂದು ಪ್ರಸಿದ್ಧವಾಗಿವೆ. ಹೇತ್ವಾಭಾಸ ಎಂಬುವುದಕ್ಕೆ ಎರಡು ರೀತಿಯಾಗಿ ವ್ಯುತ್ಪತ್ತಿಯನ್ನು ಹೇಳುತ್ತಾರೆ. ಹೇತುವಿನ ಆಭಾಸ (ಹೇತೋಃ ಆಭಾಸಃ) ಎಂಬ ವ್ಯುತ್ಪತ್ತಿಯಿಂದ ಹೇತುವಿನ ದೋಷ ಎಂಬ ಅರ್ಥವು ತೋರುತ್ತದೆ. ಹೇತುವಿನಂತೆ ಆಭಾಸವಾಗುವುದು (ಹೇತುವತ್ ಆಭಾಸತೇ) ಎಂಬ ವ್ಯುತ್ಪತ್ತಿಯಿಂದ ದುಷ್ಟಹೇತು ಎಂಬ ಅರ್ಥವು ಬರುತ್ತದೆ. ಇದನ್ನೇ ಅಸದ್ಧೇತು ಎಂಬುದಾಗಿ ಕರೆಯುತ್ತಾರೆ.

1. ವ್ಯಭಿಚಾರವೆಂದರೆ, ಸಾಧ್ಯವಿಲ್ಲದಿರುವೆಡೆಯಲ್ಲಿ ಹೇತು ಇರುವುದು.
2. ವಿರೋಧವೆಂದರೆ, ಹೇತುವು ಸಾಧ್ಯಾಭಾವಕ್ಕೆ ಸಾಧಕ(ವ್ಯಾಪ್ತ)ವಾಗಿರುವುದು.
3. ಅಸಿದ್ಧಿದೋಷಗಳ ಪೈಕಿ ಸ್ವರೂಪಾಸಿದ್ಧಿಯೆಂದರೆ ಪಕ್ಷದಲ್ಲಿ ಹೇತು ಇಲ್ಲದಿರುವುದು.
4. ಸತ್ಪ್ರತಿಪಕ್ಷತ್ವ ಎಂದರೆ, ಸಾಧ್ಯಾಭಾವವನ್ನು ಸಾಧಿಸುವ ಪ್ರತಿಹೇತುವು ಇರುವುದು.
5. ಬಾಧ ಎಂದರೆ, ಪಕ್ಷದಲ್ಲಿ ಸಾಧ್ಯವೇ ಇಲ್ಲದಿರುವುದು.

ಈ ಹೇತ್ವಾಭಾಸಗಳ ನಿಷ್ಕೃಷ್ಟವಾದ ಲಕ್ಷಣ ಮತ್ತು ಪ್ರಭೇದಗಳನ್ನು ತರ್ಕಶಾಸ್ತ್ರದಿಂದಲೇ ತಿಳಿಯಬೇಕು.

ಇಲ್ಲಿ ಸಾಂಖ್ಯರ ಅನುಮಾನ ಪ್ರಯೋಗದಲ್ಲಿ ವಿರೋಧ ಮತ್ತು ಅಸಿದ್ಧಿದೋಷಗಳಿರುವುದರಿಂದ ಪ್ರಧಾನಪರಿಣಾಮವಾದವು ಉಪಾದೇಯವಾದುದಲ್ಲವೆಂದು ಈ ಪ್ರಕರಣದ ತಾತ್ಪರ್ಯ.

3. "ಅಜಾಮೇಕಾಂ ಲೋಹಿತ ಶುಕ್ಲಕೃಷ್ಣಾಂ, ಬಹ್ವೀಃ ಪ್ರಜಾಃ ಸೃಜಮಾನಾಂ ಸರೂಪಾಃ। ಅಜೋಹ್ಯೇಕೋಜುಷಮಾಣೋಽನುಶೇತೇ ಜಹಾತ್ಯೇನಾಂ ಭುಕ್ತಭೋಗಾಮಜೋಽನ್ಯಃ॥" (ಶ್ವೇ.4-5) ಎಂಬ ಶ್ವೇತಾಶ್ವತರ ಶ್ರುತಿಯೇ ಸಾಂಖ್ಯದರ್ಶನದ ಪ್ರಕೃತಿ ಪುರುಷ ತತ್ತ್ವಸಿದ್ಧಾಂತಕ್ಕೆ ಪ್ರಮಾಣ. ರೂಢಿಯಲ್ಲಿ "ಅಜಾ" ಎಂದರೆ ಆಡು ಎಂದು ಅರ್ಥವಿದ್ದರೂ, ಈ ಅಧ್ಯಾತ್ಮವಿದ್ಯಾಪ್ರಕರಣದಲ್ಲಿ "ನಜಾಯತೇ ಇತ್ಯಜಾ" (ಹುಟ್ಟದಿರುವುದು=ನಿತ್ಯವಾದುದು) ಎಂಬುದಾಗಿ ಯೌಗಿಕಾರ್ಥವನ್ನೇ ಗ್ರಹಿಸಬೇಕು. ಲೋಹಿತ,

ಶುಕ್ಲ ಮತ್ತು ಕೃಷ್ಣ ಎಂಬ ಶಬ್ದಗಳು ರೂಢಿಯಲ್ಲಿ ಕೆಂಪು, ಬಿಳುಪು ಮತ್ತು ಕಪ್ಪು-ಎಂಬ ಬಣ್ಣಗಳನ್ನು ತಿಳಿಸುವುದಾದರೂ, ಇಲ್ಲಿ ಲಕ್ಷಣಾವೃತ್ತಿಯಿಂದ ರಂಜಿಸುವಿಕೆ (ರಾಗ ಪನ್ನುಂಟುಮಾಡುವುದು), ಪ್ರಕಾಶಿಸುವಿಕೆ ಮತ್ತು ಆವರಿಸುವಿಕೆ-ಎಂಬ ಸಾಮಾನ್ಯ ಧರ್ಮಪ್ರಯುಕ್ತವಾಗಿ, ರಜಸ್, ಸತ್ತ್ವ ಮತ್ತು ತಮಸ್-ಎಂಬ ಗುಣಗಳನ್ನು ತಿಳಿಸುತ್ತವೆ. ಹೀಗೆ "ತ್ರಿಗುಣಾತ್ಮಕವಾದ—ಆದುದರಿಂದಲೇ-ತನ್ನಂತೆಯೇ ತ್ರಿಗುಣಾತ್ಮಕವಾದ (ಸುಖದುಃಖ ಮೋಹಾತ್ಮಕವಾದ) ಅನೇಕ ಪ್ರಜೆಗಳನ್ನು ಸೃಷ್ಟಿಸುವಂತಹ ಪ್ರಕೃತಿಯನ್ನು ಬದ್ಧನಾದ ಪುರುಷನು ಸೇವಿಸಿ ಅನುಸರಿಸುತ್ತಾನೆ. ಅಂದರೆ, ಬುದ್ಧಿ ಮುಂತಾದ ಪ್ರಕೃತಿ ಕಾರ್ಯವನ್ನು ತಾನು ಎಂಬುದಾಗಿ ಭಾವಿಸಿ ಸಂಸಾರಿಯಾಗುತ್ತಾನೆ. ಮುಕ್ತನಾದ ಪುರುಷನು ಭುಕ್ತಭೋಗಗಳಾದ ಪ್ರಕೃತಿಯನ್ನು ಪರಿತ್ಯಜಿಸಿ ನಿರ್ಲಿಪ್ತನಾಗುತ್ತಾನೆ" ಎಂದು ಶ್ರುತಿಯ ತಾತ್ಪರ್ಯ. ಇದೇ ಪ್ರಕೃತಿಪುರುಷವಿವೇಕ ಅಥವಾ ಪ್ರಕೃತಿಪುರುಷಾನ್ಯತಾ ಖ್ಯಾತಿ. ಈ ಶ್ರುತಿಯ ಪದ್ಯದ ಪೂರ್ವಾರ್ಧದಲ್ಲಿ ತ್ರಿಗುಣಾತ್ಮಕವಾದ ಪ್ರಕೃತಿ ಹಾಗೂ ಬಂಧದ ಸ್ವರೂಪವನ್ನೂ ಮತ್ತು ಉತ್ತರಾರ್ಧದಲ್ಲಿ ಆತ್ಮಭೇದ ಹಾಗೂ ಮುಕ್ತಿಯ ಸ್ವರೂಪವನ್ನೂ ಪ್ರತಿಪಾದಿಸಲಾಗಿದೆ.

ಛಾಂದೋಗ್ಯಶ್ರುತಿ ಮೊದಲಾದ ಆಧಾರದಿಂದ ಶ್ವೇತಾಶ್ವತರ ಶ್ರುತಿಗೆ ಈರೀತಿ ವ್ಯಾಖ್ಯಾನ ಮಾಡುವುದನ್ನು ಖಂಡಿಸಿ ಶಂಕರ ದರ್ಶನದಲ್ಲಿ ಪ್ರಧಾನ ಕಾರಣವಾದವನ್ನು ನಿರಾಕರಿಸಿದ್ದಾರೆ.

4. ಪರಮೇಶ್ವರನು ಕರುಣೆಯಿಂದ ಪ್ರವರ್ತಿಸುತ್ತಾನೆ ಎಂಬುದನ್ನು ಸಾಂಖ್ಯ ದರ್ಶನದಲ್ಲಿ ಖಂಡಿಸಿದ್ದಾರೆ. ಹೇಗೆಂದರೆ:- ಕರುಣೆಯೆಂದರೆ ದುಃಖವನ್ನು ಹೋಗಲಾಡಿಸುವ ಇಚ್ಛೆ. ದುಃಖವು ಶರೀರವಿದ್ದರೆ ಉಂಟಾಗುತ್ತದೆ. ಆದ್ದರಿಂದ ಸೃಷ್ಟಿಗೆ ಮುಂಚೆ ಶರೀರವಿಲ್ಲದುದರಿಂದ ದುಃಖವೇ ಇಲ್ಲದಿರಲಾಗಿ ಜೀವಿಗಳ ದುಃಖವನ್ನು ಹೋಗಲಾಡಿಸುವ ಇಚ್ಛೆಯಿಂದ ಸೃಷ್ಟಿಗೆ ಮುಂಚೆ ಪರಮೇಶ್ವರನು ಪ್ರವರ್ತಿಸಲಾರನು. ಸೃಷ್ಟಿಯಾದ ಮೇಲೆ ಕರುಣೆಯಿಂದ ಪ್ರವರ್ತಿಸುತ್ತಾನೆ ಎಂಬುದೂ ಸರಿಹೋಗುವುದಿಲ್ಲ. ಏಕೆಂದರೆ, ಕರುಣೆಯಿಂದ ಸೃಷ್ಟಿ ಮತ್ತು ಸೃಷ್ಟಿಯಿಂದ ಕರುಣೆ ಎಂಬುದಾಗಿ ಅನ್ಯೋನ್ಯಾಶ್ರಯ ದೋಷವುಂಟಾಗುತ್ತದೆ. ಸಾಂಖ್ಯರ-ಈ ಆಕ್ಷೇಪವನ್ನು ಖಂಡಿಸಿ ಇಲ್ಲಿ ಸಮಾಧಾನವನ್ನು ಹೇಳಿದ್ದಾರೆ.

5. ಪರಿಣಾಮ: ಪರಿಣಾಮವೆಂದರೆ ಒಂದು ವಸ್ತು ತನ್ನ ಸ್ವರೂಪವನ್ನು ಬಿಟ್ಟು ರೂಪಾಂತರ ಹೊಂದುವುದು. ಉದಾ:- ಹಾಲು ತನ್ನ ಹಾಲಿನ ರೂಪವನ್ನು ಬಿಟ್ಟು ಮೊಸರಿನ ರೂಪವನ್ನು ತಾಳುವುದು. (ವಸ್ತುನಃ ಸ್ವರೂಪಪರಿತ್ಯಾಗಪುರಸ್ಸರಂ ರೂಪಾಂತರಪ್ರಾಪ್ತಿಃ ಪರಿಣಾಮಃ)

6. ವಿವರ್ತ: ತನ್ನ ಸ್ವರೂಪವನ್ನು ಬಿಡದಿರುವ ವಸ್ತುವಿನಲ್ಲಿ ಬೇರೆ ರೂಪವು ತೋರುವುದು. ಉದಾ:- ಹಗ್ಗವು ಹಾವಾಗಿ ತೋರುವುದು. ಕಪ್ಪೆಚಿಪ್ಪು ಬೆಳ್ಳಿಯಾಗಿ

ತೋರುವುದು ಇತ್ಯಾದಿ (ವಸ್ತುನಃ ಸ್ವರೂಪಾಪರಿತ್ಯಾಗೇನ ರೂಪಾಂತರ ಭಾನಂ ವಿವರ್ತಃ)

7. ಗುಣೋಪಸಂಹಾರ: ಬೇರೆಡೆಯಲ್ಲಿ ಪ್ರತಿಪಾದಿತವಾಗಿರುವ ಉಪಾಸ್ಯ ಗುಣಗಳನ್ನು ಮತ್ತೊಂದೆಡೆಯಲ್ಲಿ ಸಂಗ್ರಹಿಸುವುದು.

8. ಪ್ರತ್ಯಭಿಜ್ಞಾ: ಪ್ರತಿ+ಅಭಿ+ಜ್ಞಾ=ಪ್ರತ್ಯಭಿಜ್ಞಾ ಅಂದರೆ ಒಂದು ವಸ್ತುವನ್ನು ಅಭಿಮುಖವಾಗಿ (ಎದುರಿಗೆ) ಪ್ರತಿಸಂಧಾನ ಮಾಡುವುದು, ಅಂದರೆ, ಅದೇ ಇದು ಎಂಬುದಾಗಿ ತಿಳಿಯುವುದು. ಲೋಕದಲ್ಲಿ "ಅವನೇ ಈ ಚೈತ್ರನು" ಎಂಬುದಾಗಿ ಎದುರಿಗಿರುವ ವ್ಯಕ್ತಿಯನ್ನು ಪ್ರತಿಸಂಧಾನ ಮಾಡುವುದು (ಗುರುತು ಹಿಡಿಯುವುದು) ಪ್ರತ್ಯಭಿಜ್ಞೆ ಎಂಬುದಾಗಿ ಕರೆಯಲ್ಪಡುತ್ತದೆ. "ಅವನೇ" ಎಂಬ ಅಂಶದಲ್ಲಿ ಸ್ಮರಣರೂಪವಾಗಿಯೂ "ಇವನು" ಎಂಬ ಅಂಶವಲ್ಲಿ ಪ್ರತ್ಯಕ್ಷರೂಪವಾಗಿಯೂ ಇರುವ ಜ್ಞಾನ ವಿಶೇಷವೇ ಪ್ರತ್ಯಭಿಜ್ಞೆ.

9. ಪೀಲುಪಾಕ: ಪ್ರತಿಯೊಂದು ಕಾರ್ಯದ್ರವ್ಯದಲ್ಲೂ ತೇಜಃಸಂಯೋಗದಿಂದ ರೂಪರಸಾದಿಗಳ ಪರಿವರ್ತನೆಯಾಗುವುದು ಕಂಡುಬರುತ್ತದೆ. ಉದಾ:- ಕಪ್ಪಾದ ಘಟವು ತೇಜಃಸಂಯೋಗದಿಂದ ಕೆಂಪಾಗುವುದು. ಅಂತೆಯೇ ಹಸುರಾಗಿರುವ ಮಾವಿನ ಕಾಯಿಯು ತೇಜಃಸಂಯೋಗದಿಂದ ಹಳದಿಯಾಗುವುದು. ಇದೇ ರೀತಿ ತೇಜಃ ಸಂಯೋಗದಿಂದ ರಸ-ಗಂಧಾದಿಗಳ ಪರಿವರ್ತನೆಯೂ ಕಂಡುಬರುತ್ತದೆ.

ತೇಜಃ ಸಂಯೋಗದಿಂದ ಘಟ ಮುಂತಾದ ಕಾರ್ಯದ್ರವ್ಯಗಳ ಅವಯವಗಳಾದ ಕಪಾಲ ಮುಂತಾದವುಗಳ ವಿಯೋಗ ಅಥವಾ ವಿನಾಶದಿಂದ ಘಟ ಮುಂತಾದ ಅವಯವಿಗಳು ನಾಶವಾಗುತ್ತವೆ. ಹೀಗೆ ಪರಮಾಣು ಪರ್ಯಂತವಾಗಿ ಕಾರ್ಯದ್ರವ್ಯಗಳ ನಾಶವುಂಟಾಗುತ್ತದೆ. ಪರಮಾಣುಗಳು ನಿತ್ಯವಾದವುಗಳಾದ್ದರಿಂದ ನಾಶಹೊಂದುವುದಿಲ್ಲ. ಹೀಗೆ ವಿಭಾಗಹೊಂದಿದ ಪರಮಾಣುಗಳಲ್ಲಿ ಮೊದಲಿನ ರೂಪರಸಾದಿಗುಣಗಳು ನಾಶಹೊಂದಿ ಬೇರೆ ರೂಪರಸಾದಿಗಳು ಉಂಟಾಗುತ್ತವೆ. ಮತ್ತೆ ಪರಮಾಣುಗಳ ಸಂಯೋಗದಿಂದ ದ್ವ್ಯಣುಕ ಮತ್ತು ದ್ವ್ಯಣುಕಗಳು ಸೇರಿ ತ್ರ್ಯಣುಕ ಮುಂತಾಗಿ ಪುನಃ ಹೊಸದಾದ ಘಟವು ಉಂಟಾಗುತ್ತದೆ. ಇದನ್ನೇ "ಪೀಲುಪಾಕ" ಎಂಬುದಾಗಿ ಹೇಳುತ್ತಾರೆ. ಇದು ವೈಶೇಷಿಕರ ಮತ. ಪೀಲು ಎಂದರೆ ಪರಮಾಣು ಎಂದರ್ಥ. ಪರಮಾಣು ಪರ್ಯಂತವಾಗಿ ಅವಯವಗಳ ಹಾಗೂ ಕಾರ್ಯದ್ರವ್ಯ(ಅವಯವಿ)ಗಳ ನಾಶವಾದ ಮೇಲೆ ಪರಮಾಣುಗಳಲ್ಲಿ ತೇಜಃಸಂಯೋಗದಿಂದ ಪಾಕವುಂಟಾಗುವಿಕೆ ಅಂದರೆ ರೂಪಾದಿಗಳ ಪರಿವರ್ತನೆಯಾಗುವುದು ಎಂಬ ಅಭಿಪ್ರಾಯದಿಂದ ವೈಶೇಷಿಕರ ಈ ಪ್ರಕ್ರಿಯೆಯು "ಪೀಲುಪಾಕವಾದ" ಎಂದು ಪ್ರಸಿದ್ಧವಾಗಿದೆ.

10. ಪಿಠರಪಾಕ: ಪಿಠರಪಾಕಪ್ರಕ್ರಿಯೆಯು ನೈಯಾಯಿಕರದು. ಪಿಠರವೆಂದರೆ ಪಿಂಡ ಅಂದರೆ ಘಟ ಮುಂತಾದ ಅವಯವಿ ದ್ರವ್ಯ ಎಂದರ್ಥ. ಈ ಮತದಲ್ಲಿ

ತೇಜಃಸಂಯೋಗದಿಂದ ಅವಯವಿ ದ್ರವ್ಯಕ್ಕೆ ನಾಶವುಂಟಾಗುವುದಿಲ್ಲ. ಆದರೆ, ತೇಜಃಸಂಯೋಗದಿಂದ ಏಕಕಾಲದಲ್ಲಿ ಅವಯವಗಳಲ್ಲಿಯೂ ಹಾಗೂ ಅವಯವಿಯಲ್ಲೂ ಮೊದಲಿನ ರೂಪಾದಿಗಳು ನಾಶಹೊಂದಿ ಬೇರೆ ರೂಪಾದಿಗಳು ಉಂಟಾಗುತ್ತವೆ. ಆದಕಾರಣ ಇದು "ಪಿಠರಪಾಕವಾದ" ಎಂದು ಪ್ರಸಿದ್ಧವಾಗಿದೆ.

10. ಔಪಚಾರಿಕ: ಹಿರಿಯರ ವ್ಯವಹಾರ, ವ್ಯಾಕರಣ, ಅಮರಾದಿ ಕೋಶ ಮುಂತಾದುವುಗಳ ಸಹಾಯದಿಂದ ನಾವು ಶಬ್ದಗಳ ಅರ್ಥವನ್ನು ತಿಳಿಯುತ್ತೇವೆ. ಈ ರೀತಿಯಾದ ಅರ್ಥವನ್ನು ಸಂಕೇತಿತಾರ್ಥ ಅಥವಾ ಮುಖ್ಯಾರ್ಥವೆಂದು ಕರೆಯುತ್ತಾರೆ. ಉದಾ:–ಘಟ ಎಂದರೆ ಗಡಿಗೆ. ಪಟ ಎಂದರೆ ಬಟ್ಟೆ ಇತ್ಯಾದಿ. ಮಾತನಾಡುವಾಗ ಕೆಲವೆಡೆ ಶಬ್ದಗಳ ಮುಖ್ಯಾರ್ಥಗಳಿಗೆ ಹೊಂದಾಣಿಕೆಯಿರುವುದಿಲ್ಲ. ಉದಾ:–ಮಂಚಗಳು ಗೋಳಾಡುತ್ತವೆ. ಈ ವಾಕ್ಯದಲ್ಲಿ ಮಂಚಗಳು ಎಂಬ ಪದಕ್ಕೆ ನಾಲ್ಕುಕಾಲುಗಳುಳ್ಳ ಮಲಗುವ ಪೀಠ ಎಂಬ ಮುಖ್ಯಾರ್ಥವು ಸಮಂಜಸವಾಗುವುದಿಲ್ಲ. ಏಕೆಂದರೆ, ಜಡವಾದ ಮಂಚಗಳು ಸುಖದುಃಖರಹಿತವಾದವುಗಳಾದ್ದರಿಂದ ಅಳುತ್ತವೆ ಎಂಬುದು ಅಸಂಭವವಾಗುತ್ತದೆ. ಆದ್ದರಿಂದ ಇಲ್ಲಿ ಮಂಚಗಳು ಎಂಬ ಪದಕ್ಕೆ ಮುಖ್ಯಾರ್ಥವನ್ನು ಬಿಟ್ಟು ಮಂಚಗಳಲ್ಲಿ ಮಲಗಿರುವ ಪುರುಷರು (ರೋಗಿಗಳು) ಎಂದು ಗ್ರಹಿಸಬೇಕು. ಹಾಗೆಯೇ ಗಂಗೆಯಲ್ಲಿ ಗೊಲ್ಲರ ಹಟ್ಟಿಯಿದೆ ಎಂಬುವ ವಾಕ್ಯದಲ್ಲಿ ಗಂಗೆ ಎಂಬ ಪದಕ್ಕೆ ಪ್ರವಾಹ ಎಂಬ ಮುಖ್ಯಾರ್ಥವನ್ನು ಬಿಟ್ಟು ಗಂಗಾತೀರ ಎಂಬ ಅರ್ಥವನ್ನು ಗ್ರಹಿಸಬೇಕು. ಇದನ್ನೇ ಲಾಕ್ಷಣಿಕ ಅರ್ಥ ಎಂದು ಕರೆಯುತ್ತಾರೆ. ಈ ಲಾಕ್ಷಣಿಕಾರ್ಥವನ್ನು ತಿಳಿಸುವ ಶಬ್ದವೃತ್ತಿಯನ್ನು ಲಕ್ಷಣಾವೃತ್ತಿಯೆಂದು ಹೇಳುತ್ತಾರೆ. ಉಪಚಾರವೃತ್ತಿ ಅಥವಾ ಗೌಣೀವೃತ್ತಿ ಎಂಬುದು ಲಕ್ಷಣಾವೃತ್ತಿಯ ಪ್ರಭೇದ. ಉಪಚಾರವೆಂದರೆ ಬೇರೆ ವಸ್ತುವಿನ ಧರ್ಮವನ್ನು ಮತ್ತೊಂದು ವಸ್ತುವಿನಲ್ಲಿ ಆರೋಪಮಾಡುವುದು. ಇಲ್ಲಿ ಸ್ಥೂಲತ್ವ ಮುಂತಾದ ದೇಹಧರ್ಮಗಳನ್ನು ಆತ್ಮನಲ್ಲಿ ಆರೋಪ ಮಾಡಿರುವುದರಿಂದ "ನಾನು ಸ್ಥೂಲನು" ಎಂದು ಮುಂತಾದುದು ಔಪಚಾರಿಕವಾದ ವ್ಯವಹಾರವಾಗುತ್ತದೆ.

11. ಅಧ್ಯಯನ ವಿಧಿ: "ಸ್ವಾಧ್ಯಾಯೋಽಧ್ಯೇತವ್ಯಃ" (ತೈ. ಆ. 2-15) ಎಂಬುದೇ ಅಧ್ಯಯನ ವಿಧಿ. ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಪ್ರಭಾಕರಗುರುಮತಾನುಸಾರವಾಗಿ ಇದು ಅಪೂರ್ವವಾದ ವಿಧಿಯಾಗುವುದಿಲ್ಲ. "ಅಷ್ಟವರ್ಷಂ ಬ್ರಾಹ್ಮಣಮುಪನಯೀತ ತಮಧ್ಯಾಪಯೀತ" ಎಂಬಲ್ಲಿ ಅಧ್ಯಾಪನವು ನಿಯೋಗ (ವಿಧಿ) ವಿಷಯವಾಗಿ ತೋರುತ್ತದೆ. ಇಲ್ಲಿ ನಿಯೋಜ್ಯನಾದವನು ಆಚಾರ್ಯ. ಇಲ್ಲಿ ಅಧ್ಯಾಪನ ವಿಧಿಯಿಂದಲೇ ಅರ್ಥಾತ್ ಅಧ್ಯಯನ ವಿಧಿಯೂ ಸಿದ್ಧಿಸುತ್ತದೆ. ಆದುದರಿಂದ "ಸ್ವಾಧ್ಯಾಯೋಽಧ್ಯೇತವ್ಯಃ" ಎಂಬುದು ಅನುವಾದ ಮಾತ್ರ. ವಿಧಿಬೋಧಕವಲ್ಲದ ವೇದಭಾಗಕ್ಕೆ "ಹುಂ ಫಟ್" ಇತ್ಯಾದಿಗಳಂತೆ ಜಪದಲ್ಲಿ ಉಪಯೋಗವಿರುವುದರಿಂದ ಅಪ್ರಾಮಾಣ್ಯವೇನಿಲ್ಲ.

ಕುಮಾರಿಲಭಟ್ಟರ ಮತಾನುಸಾರವಾಗಿ, ಅರ್ಥಜ್ಞಾನರೂಪವಾದ ದೃಷ್ಟಪ್ರಯೋಜನಕ್ಕಾಗಿ ಅಧ್ಯಯನ ವಿಧಿಯು ಪ್ರವರ್ತಿಸುತ್ತದೆ. ವಾಚ್ಯಾರ್ಥವು ಹೊಂದದಿರುವೆಡೆ ಲಾಕ್ಷಣಿಕಾರ್ಥವನ್ನು ಗ್ರಹಿಸಬೇಕು. ಆದ್ದರಿಂದ "ಯಜಮಾನಃ ಪ್ರಸ್ತರಃ" (ತೈ.ಬ್ರಾ. 3-3-9) ಎಂದು ಮುಂತಾದ ವಾಕ್ಯಗಳು ಪ್ರಾಶಸ್ತ್ಯ ಬೋಧಕಗಳಾದ ಅರ್ಥವಾದಗಳು.

ಅಂತೆಯೇ "ಸದೇವ ಸೌಮ್ಯ" ಮುಂತಾದ ಬ್ರಹ್ಮಪ್ರತಿಪಾದಕ ವೇದಾಂತ ವಾಕ್ಯಗಳಿಗೆ ಜೀವ ಪ್ರಾಶಸ್ತ್ಯವನ್ನು ತಿಳಿಸುವುದರಲ್ಲಿ ತಾತ್ಪರ್ಯ. ಆದುದರಿಂದ ಅಹಮನುಭವವೇದ್ಯನಾದವನಿಗಿಂತಲೂ ಬೇರೆಯಾದ ಆತ್ಮನಿಲ್ಲವಾದುದರಿಂದ ಬ್ರಹ್ಮವಿಚಾರಶಾಸ್ತ್ರವನ್ನು ಆರಂಭಿಸಬೇಕಾಗಿಲ್ಲವೆಂದು ಪೂರ್ವಪಕ್ಷ.

13. **ವ್ಯಾಪಕನಿವೃತ್ತ್ಯಾ:** "ವಹ್ನಿಮಾನ್ ಧೂಮಾತ್" ಎಂಬಲ್ಲಿ ವಹ್ನಿಯು ವ್ಯಾಪಕ. ಧೂಮವು ವ್ಯಾಪ್ಯ. ವ್ಯಾಪಕವಾದ ವಹ್ನಿಯು ಇಲ್ಲದಿದ್ದರೆ ವ್ಯಾಪ್ಯವಾದ ಧೂಮವೂ ಇರುವುದಿಲ್ಲ. ಆದ್ದರಿಂದ ಧೂಮವಿರಬೇಕಾದರೆ ವಹ್ನಿಯು ಇರಲೇಬೇಕು. ಹಾಗೆಯೇ ಅದ್ವಿತೀಯವಾದ ಬ್ರಹ್ಮನಲ್ಲಿ ಭಿನ್ನರೂಪದಿಂದ ದೇಹಾದಿಗಳ ಅಧ್ಯಾಸವುಂಟಾಗಲು ಭೇದಸಂಸ್ಕಾರವು ಇರಬೇಕು. ಭೇದ ಸಂಸ್ಕಾರವುಂಟಾಗಲು ಎಲ್ಲಾದರೂ ಒಂದೆಡೆ ಭೇದವಿಷಯಕವಾದ ಯಥಾರ್ಥಾನುಭವವು ಇರಲೇಬೇಕು. ಹೀಗೆ ಭೇದಾನುಭವವು ಪ್ರಮಾತ್ಮಕವಾಗಿರಲಾಗಿ, ಭೇದ ನಿವೃತ್ತಿಯು ಬ್ರಹ್ಮವಿಚಾರಕ್ಕೆ ಫಲವಾಗುವುದಿಲ್ಲವೆಂದು ಪೂರ್ವಪಕ್ಷ.

14. **ಕಣಾದ, ಗೌತಮ:** ಕಣಾದ ಮಹರ್ಷಿಯು ವೈಶೇಷಿಕ ದರ್ಶನದ ಪ್ರವರ್ತಕನಾದ ಆಚಾರ್ಯನು. ಗೌತಮನು ನ್ಯಾಯಶಾಸ್ತ್ರದ ಪ್ರವರ್ತಕನಾದ ಆಚಾರ್ಯನು. ಈ ದರ್ಶನಗಳಲ್ಲಿ ಆತ್ಮನಿಗೆ ವಿಭುತ್ವವನ್ನು ಅಂಗೀಕರಿಸಿದ್ದಾರೆ.

ವಿಭುತ್ವಾದಿಗುಣಗಳುಳ್ಳ ಆತ್ಮನು "ಅಹಮ್" ಎನ್ನುವ ಅನುಭವದಲ್ಲಿ ತೋರುವುದಿಲ್ಲವೆಂಬುದಾಗಿ ಇಲ್ಲಿ ಖಂಡನೆಯ ತಾತ್ಪರ್ಯ.

15. **ಗೌಣವೃತ್ತಿ:** ಒಂದು ವಸ್ತುವಿನ ಧರ್ಮವನ್ನು ಮತ್ತೊಂದು ವಸ್ತುವಿನಲ್ಲಿ ಬುದ್ಧಿಪೂರ್ವಕವಾಗಿ ಆರೋಪಮಾಡಬೇಕಾದರೆ, ಆ ವಸ್ತುಗಳಿಗೆ ಇರುವ ಪರಸ್ಪರ ಭೇದವು ಗೊತ್ತಿರಬೇಕು. ಉದಾ:– ಸಿಂಹವೆಂಬುದಾಗಿ ನಿಶ್ಚಿತವಾಗಿರುವ ವ್ಯಕ್ತಿಯು ದೆಸೆಯಿಂದ ಬೇರೆಯಾದವನು ಎಂಬುದಾಗಿ ತಿಳಿಯಲ್ಪಟ್ಟಿರುವ ಹುಡುಗನಲ್ಲಿ ಶೌರ್ಯ ಮುಂತಾದ ಗುಣಗಳ ಪ್ರಯುಕ್ತ "ಈ ಹುಡುಗನು ಸಿಂಹ" ಎಂಬುದಾಗಿ ಸಿಂಹತ್ವವನ್ನು ಆರೋಪ ಮಾಡುತ್ತೇವೆ. ಇದನ್ನು ಸಾಂಪ್ರತಿಕ ಅಥವಾ ಆಧುನಿಕ ಗೌಣವೃತ್ತಿಯೆಂದು ಕರೆಯುತ್ತಾರೆ. ಇದು ನಿರೂಢ ಗೌಣವೃತ್ತಿಯಲ್ಲ. ಏಕೆಂದರೆ, ಪ್ರತಿಯೊಬ್ಬ ಹುಡುಗನನ್ನೂ ಸಿಂಹವೆಂದು ಆರೋಪಿಸುವುದಿಲ್ಲ. ಕೆಲವೆಡೆ ಮಾತ್ರ ಶೂರನಾದ ಹುಡುಗನನ್ನು ಸಿಂಹವೆಂದು ಕರೆಯುತ್ತೇವೆ.

ಈ ರೀತಿಯಾದ ಗೌಣಶಬ್ದವು ಪ್ರಯೋಗಪ್ರಸಿದ್ಧಿಯು ಹೆಚ್ಚಾಗಿ ರೂಢಶಬ್ದದಂತೆ ಪ್ರಯೋಗವಾಗುವೆಡೆ ನಿರೂಢ ಗೌಣವೃತ್ತಿಯೆಂದು ಕರೆಯುತ್ತಾರೆ. ಉದಾ:– ಯೋಗ ವೃತ್ತಿಯಿಂದ ಎಳ್ಳಿನ ಎಣ್ಣೆ (ರಸ) ಎಂಬ ಅರ್ಥವನ್ನು ತಿಳಿಸುವ ತೈಲಶಬ್ದಕ್ಕೆ ಸಾಸುವೆ ಮುಂತಾದುವುಗಳ ಎಣ್ಣೆ(ರಸ)ಯ ಅರ್ಥದಲ್ಲಿಯೂ "ಸಾಸುವೆ ತೈಲ" ಎಂಬುದಾಗಿ ರೂಢಿ ಯಲ್ಲಿ ಪ್ರಯೋಗವಿದೆ. ಇದು ನಿರೂಢಗೌಣವೃತ್ತಿ.

ಈ ಎರಡು ವಿಧವಾದ ಗೌಣವೃತ್ತಿಗಳಲ್ಲೂ ಆರೋಪಮಾಡಲು ಭೇದವಿದ್ದೇ ಇರ ಬೇಕು. ಆದ್ದರಿಂದ ಗೌಣವೃತ್ತಿಯು ಇರಬೇಕಾದರೆ ಭೇದಜ್ಞಾನವು ಇರಲೇಬೇಕೆಂದು ವ್ಯಾಪ್ತಿಯು ಸಿದ್ಧಿಸುತ್ತದೆ.

ಪ್ರಕೃತ ದೇಹಕ್ಕಿಂತಲೂ ಬೇರೆಯಾದ ಆತ್ಮನು ತೋರುವುದಿಲ್ಲವಾದ್ದರಿಂದ ಪ್ರಾದೇಶಿಕತ್ವ ಮುಂತಾದ ದೇಹ ಧರ್ಮಗಳನ್ನು ಗೌಣವೃತ್ತಿಯಿಂದ ಆತ್ಮನಲ್ಲಿ ಆರೋಪ ಮಾಡಲಾಗುವುದಿಲ್ಲವೆಂದು ಅಭಿಪ್ರಾಯ.

16. ಶೃಂಗಗ್ರಾಹಿಕಾ: ಲೋಕದಲ್ಲಿ ಒಂದು ಹಸುವಿನ ಸ್ವರೂಪವನ್ನು ತಿಳಿಸುವಾಗ ಆದರ ಕೊಂಬನ್ನು ಹಿಡಿದು "ಇದು ಇಂತಹ ಹಸು" ಎಂಬುದಾಗಿ ಹೇಳು ತ್ತಾರೆ. ಶೃಂಗ ಅಂದರೆ ಕೊಂಬನ್ನು ಹಿಡಿದು ಹೇಳುವುದರಿಂದ ಈ ದೃಷ್ಟಾಂತಕ್ಕೆ ಶೃಂಗ ಗ್ರಾಹಿಕಾ ನ್ಯಾಯ ಎಂಬುದಾಗಿ ಹೆಸರು.

17. ಆರ್ಹತಮತ: ಆರ್ಹತಮತವೆಂದರೆ ಜೈನಮತ ಈ ಮತದ ಮೂಲ ಪ್ರವರ್ತಕನು "ಅರ್ಹನ್" ಎಂಬ ಸರ್ವಜ್ಞಮುನಿ. ಈತನು ಸ್ಯಾದ್ವಾದ ಅಥವಾ ಅನೇ ಕಾಂತವಾದವನ್ನು ಬೋಧಿಸಿ "ಇದೇ ಧರ್ಮವು. ಹೀಗೆಯೇ ನೀವುಗಳು ಇರಲು ಅರ್ಹ ರಾಗಿದ್ದೀರಿ" ಎಂದು ಶಿಷ್ಯರಿಗೆ ಉಪದೇಶ ಮಾಡಿದುದರಿಂದ ಈತನಿಗೆ "ಅರ್ಹನ್" ಎಂಬ ಹೆಸರುಂಟಾಯಿತು. ಈತನ ಹೆಸರಿನಿಂದಲೇ ಇದು ಆರ್ಹತಮತವೆಂದು ಪ್ರಸಿದ್ಧವಾಯಿತು.

18. ಕೃತಹಾನ-ಅಕೃತಾಭ್ಯಾಗಮ: ಜೈನದರ್ಶನದ ಪ್ರಕಾರ ಆತ್ಮನು ವಿಭು ವಲ್ಲ; ಆಯಾದೇಹಕ್ಕೆ ಸಮಾನವಾದ ಪರಿಮಾಣವುಳ್ಳವನು. ಈ ಮತವನ್ನು ಅಂಗೀ ಕರಿಸಿದರೆ, "ನಾನು ಸ್ಥೂಲನು" "ನಾನು ಕೃಶನು" ಎಂದು ಮುಂತಾದ ಪ್ರತೀತಿಯು ಪ್ರಾಮಾಣಿಕವಾಗಬಹುದಾದರೂ, ನಿತ್ಯಸತ್ಯನಾದ ಆತ್ಮನು ಸಿದ್ಧಿಸುವುದಿಲ್ಲ. ಪ್ರತಿಕ್ಷಣವೂ ದೇಹಪರಿಮಾಣವು ಪರಿವರ್ತನೆ ಹೊಂದುವುದರಿಂದ ಆತ್ಮನೂ ಬೇರೆ ಬೇರೆಯಾಗಬೇಕಾ ಗುತ್ತದೆ. ತಥಾಚ ಕರ್ಮಮಾಡಿದ ಆತ್ಮನು ಫಲಭೋಗಕಾಲದಲ್ಲಿ ಇರುವುದಿಲ್ಲವಾದ್ದರಿಂದ ಅವನಿಗೆ ಫಲಭೋಗವಿಲ್ಲ. ಫಲವನ್ನು ಅನುಭವಿಸುವ ಆತ್ಮನು ಅದಕ್ಕೆ ತಕ್ಕ ಕರ್ಮವನ್ನು ಮಾಡಿಲ್ಲ. ಆದ್ದರಿಂದ ನಿಯತವಾದ ಸುಖದುಃಖರೂಪಫಲಭೋಗದ ವ್ಯವಸ್ಥೆಯು ಕೆಟ್ಟು ಹೋಗುತ್ತದೆ. ಇದಕ್ಕೆ ಕೃತಹಾನ-ಅಕೃತಾಭ್ಯಾಗಮ ದೋಷವೆಂದು ಹೆಸರು. ಕೃತ ಎಂದರೆ ಮಾಡಿದ ಕರ್ಮಕ್ಕೆ ಹಾನ ಎಂದರೆ ಫಲಭೋಗವಿಲ್ಲದೆ ನಾಶ. ಅಕೃತ ಎಂದರೆ

ನೂಡದಿರುವ ಕರ್ಮಕ್ಕೆ ಅಭ್ಯಾಗಮ ಎಂದರೆ ಫಲಭೋಗದ ಅಂಗೀಕಾರ–ಎಂಬುದಾಗಿ ಅರ್ಥ.

19. ವಿಜ್ಞಾನಾತ್ಮವಾದಿಗಳು: ವಿಜ್ಞಾನಾತ್ಮವಾದಿಗಳೆಂದರೆ ಯೋಗಾಚಾರ ಬೌದ್ಧರು. ಕ್ಷಣಿಕ ವಿಜ್ಞಾನವೇ ಆತ್ಮವೆಂಬುದಾಗಿ ಇವರ ಮತ. ವಿಜ್ಞಾನವು ಆಲಯವಿಜ್ಞಾನ, ಪ್ರವೃತ್ತಿವಿಜ್ಞಾನ– ಎಂಬುದಾಗಿ ಎರಡು ವಿಧ. "ಅಹಮ್" ಎನ್ನುವ ಪ್ರತೀತಿಗೆ ಆಲಂಬನವಾದ ಕ್ಷಣಿಕವಿಜ್ಞಾನಪರಂಪರೆಯೇ ಆಲಯ ವಿಜ್ಞಾನ. "ಅಯಂ ಘಟಃ" ಎಂಬಲ್ಲಿ ಆಂತರಿಕವಾದ ವಿಜ್ಞಾನವೇ ಬಾಹ್ಯಾಕಾರವಾಗಿ ತೋರುವುದರಿಂದ ಪ್ರವೃತ್ತಿವಿಜ್ಞಾನವೆಂದು ಕರೆಯಲ್ಪಡುತ್ತದೆ. ಈ ಮತದಲ್ಲಿ ವಿಜ್ಞಾನಕ್ಕಿಂತ ಬೇರೆಯಾದ ವಸ್ತುವೇ ಇಲ್ಲವಾದ್ದರಿಂದ "ನಾನು ಸ್ಥೂಲನು, ನಾನು ಕೃಶನು" ಎಂಬಲ್ಲಿ ಔಪಚಾರಿಕತ್ವವು ಸಮಂಜಸವಾಗುವುದಿಲ್ಲ. ಉಪಚಾರವೃತ್ತಿಯುಂಟಾಗಬೇಕಾದರೆ ಭೇದಜ್ಞಾನವು ಇದ್ದೇ ಇರಬೇಕಷ್ಟೆ. ಮತ್ತು ಈ ಮತದಲ್ಲಿ ಕೃತಹಾನ–ಅಕೃತಾಭ್ಯಾಗಮಾದಿ ದೋಷಗಳೂ ಉಂಟಾಗುತ್ತವೆ.

20. ಸಾಮಾನಾಧಿಕರಣ್ಯ: ಸಮಾನಮ್ ಅಧಿಕರಣಂ ಯಯೋಃ, ತಯೋಃ ಭಾವಃ ಸಾಮಾನಾಧಿಕರಣ್ಯಮ್. ಅಧಿಕರಣವೆಂದರೆ ಇಲ್ಲಿ ವಾಚ್ಯವಾದ ಅರ್ಥ ಎಂದು ತಿಳಿಯಬೇಕು. ಒಂದೇ ವಿಭಕ್ತಿಯಲ್ಲಿರುವ ಪದಗಳು ಸಮಾನಾಧಿಕರಣಗಳಾಗಿರುತ್ತವೆ. ಇಲ್ಲಿ "ತತ್" ಮತ್ತು "ತ್ವಮ್" ಪದಗಳ ಅರ್ಥವು ಪಾರಮಾರ್ಥಿಕವಾಗಿ ಒಂದೇ ಆಗಿರುವುದರಿಂದ ಜೀವ ಬ್ರಹ್ಮರ ಅಭೇದವು (ಭೇದವಿಲ್ಲದಿರುವಿಕೆಯು) ಪ್ರತಿಪಾದಿತವಾಗುತ್ತದೆ.

21. ಎರಡನ್ನೂ ಪ್ರತಿಪಾದಿಸಬೇಕು: ಘಟ ಮೊದಲಾದ ವಸ್ತುಗಳ ಜ್ಞಾನವುಂಟಾಗುವಾಗ, ಅಂತಃಕರಣ ರೂಪವಾದ ಬುದ್ಧಿಯು ತನ್ನಲ್ಲಿರುವ ಚಿತ್ಪ್ರಕಾಶ ಸಹಿತವಾಗಿ ಘಟ ಮೊದಲಾದ ವಿಷಯವನ್ನು ವ್ಯಾಪಿಸುತ್ತದೆ. ಬುದ್ಧಿಯು ವ್ಯಾಪಿಸುವುದರಿಂದ ಅಜ್ಞಾನರೂಪವಾದ ಆವರಣವು ಭಂಗಹೊಂದುತ್ತದೆ. ಚಿತ್ಪ್ರಕಾಶದ ವ್ಯಾಪ್ತಿಯಿಂದ ಘಟವು ಸ್ಫುರಿಸುತ್ತದೆ. ಏಕೆಂದರೆ ಜಡವಾದ ಘಟವು ತಾನಾಗಿಯೇ ಪ್ರಕಾಶಿಸಲಾರದು. ಘಟವು ಸ್ಫುರಿಸುತ್ತದೆಯೆಂದರೆ ಜ್ಞಾನದಲ್ಲಿ ತನ್ನ ಆಕಾರವನ್ನು ಸಮರ್ಪಿಸುತ್ತದೆಯೆಂದರ್ಥ. ಈ ರೀತಿಯಾಗಿ ಆವರಣ ಭಂಗ ಮತ್ತು ಸ್ಫುರಣ(ಪ್ರಕಾಶ) ಎಂಬುದಾಗಿ ಎರಡು ಫಲಗಳು.

"ತತ್ತ್ವಮಸಿ" ಎಂಬ ಮಹಾವಾಕ್ಯೋಪದೇಶದಿಂದ ಆತ್ಮಜ್ಞಾನವುಂಟಾಗುವಾಗ, ಅಂತಃಕರಣ ವೃತ್ತಿಯ ವ್ಯಾಪ್ತಿಯಿಂದ ಅಜ್ಞಾನಾವರಣಭಂಗರೂಪವಾದ ಫಲವು ಉಂಟಾಗುತ್ತದೆ. ಆವರಣಭಂಗ ಉಂಟಾದರೆ ಸ್ವಯಂಪ್ರಕಾಶವಾದ ಆತ್ಮತತ್ತ್ವವು ತಾನಾಗಿಯೇ ಸ್ಫುರಿಸುತ್ತದೆ. ಆತ್ಮಪ್ರಕಾಶವು ಸ್ವತಃಸಿದ್ಧವಾದುದರಿಂದ ಅದು ಮಹಾವಾಕ್ಯದಿಂದುಂಟಾದ ಜ್ಞಾನಕ್ಕೆ ಫಲವಾಗುವುದಿಲ್ಲ. ಈ ಅಭಿಪ್ರಾಯದಿಂದಲೇ ಆತ್ಮನಿಗೆ

ಜ್ಞಾನವಿಷಯತ್ವವನ್ನು ನಿಷೇಧಿಸಿರುವುದು. ಆವರಣಭಂಗರೂಪವಾದ ಫಲವು ಉಂಟಾಗುತ್ತದೆಯೆಂಬ ಅಭಿಪ್ರಾಯದಿಂದ ಜ್ಞಾನವಿಷಯತ್ವವನ್ನು ಹೇಳುವುದು. ಆದುದರಿಂದ ಅಭಿಪ್ರಾಯಭೇದದಿಂದ ವಿಧಿ–ನಿಷೇಧಗಳೆರಡೂ ಸಮಂಜಸವಾಗುತ್ತವೆ.

22. ಸಿದ್ಧವಾದ: ಈ ಆಕ್ಷೇಪಣೆಯು ಮೀಮಾಂಸಕರದು. ವಿಧೇಯವಾದ ಅಂದರೆ ಕರ್ತವ್ಯ ರೂಪವಾದ ಅರ್ಥವನ್ನೇ ಶಬ್ದಗಳು ಬೋಧಿಸುವುದು ಎಂದು ಇವರ ಮತ. ಆದ್ದರಿಂದ ಸಿದ್ಧರೂಪವಾದ ಬ್ರಹ್ಮವನ್ನು ವೇದಾಂತ ವಾಕ್ಯಗಳು ಪ್ರತಿಪಾದಿಸುವುದಿಲ್ಲವೆಂದು ಆಕ್ಷೇಪಣೆ.

23. ಪರಿಶೇಷ: ನ್ಯಾಯಶಾಸ್ತ್ರದಲ್ಲಿ ಮೂರುವಿಧವಾದ ಅನುಮಾನವನ್ನು ಹೇಳುತ್ತಾರೆ. ಅವು ಯಾವುವೆಂದರೆ 1) ಪೂರ್ವವತ್, 2) ಶೇಷವತ್ ಮತ್ತು 3) ಸಾಮಾನ್ಯತೋ ದೃಷ್ಟ.

1. ಪೂರ್ವವದನುಮಾನವೆಂದರೆ ಹಿಂದೆ ಪಾಕಶಾಲೆ ಮುಂತಾದೆಡೆಗಳಲ್ಲಿ ಧೂಮ ಮತ್ತು ಅಗ್ನಿಗಳಿಗೆ ಸಾಹಚರ್ಯ ನಿಯಮವನ್ನು ಪ್ರತ್ಯಕ್ಷವಾಗಿ ಕಂಡಿದ್ದು, ಈಗ ಪರ್ವತದಲ್ಲಿ ಧೂಮವನ್ನು ನೋಡಿ ಪ್ರತ್ಯಕ್ಷನಲ್ಲದಿದ್ದರೂ ಅಗ್ನಿಯಿದೆಯೆಂದು ನಿಶ್ಚಯಿಸುವುದು.

2. ಶೇಷವತ್ ಎಂದರೆ ಪರಿಶೇಷಾನುಮಾನ. ಹೇಗೆಂದರೆ, ಪ್ರಸಕ್ತವಾದೆಡೆಗಳಲ್ಲಿ ನಿಷೇಧಮಾಡಲಾಗಿ ಬೇರೆಡೆ ಪ್ರಸಕ್ತವಾಗುವುದಿಲ್ಲವಾದ್ದರಿಂದ ಅರ್ಥಾತ್ ಪರಿಶಿಷ್ಟವಾದ ಸ್ಥಳದಲ್ಲಿ ಅಂದರೆ, ಉಳಿದೆಡೆಯಲ್ಲಿಯೇ ಒಂದು ವಿಷಯವನ್ನು ನಿಶ್ಚಯಿಸುವುದು. ಪ್ರಕೃತದಲ್ಲಿ "ನಿನಗೆ ಗಂಡುಮಗು ಹುಟ್ಟಿತು" ಎಂಬ ಮಾತನ್ನು ಕೇಳಿ ಒಬ್ಬನ ಮುಖವು ವಿಕಾಸ ಹೊಂದಲಾಗಿ, ಸಂತೋಷಕ್ಕೆ ಕಾರಣಗಳಾದ ಬೇರೆ ವಿಷಯಗಳನ್ನು ಬಿಟ್ಟು ಪುತ್ರಜನ್ಮವೇ ವಿಶಿಷ್ಟವಾದ ಸಂತೋಷಕ್ಕೆ ಕಾರಣವೆಂದು ನಿಶ್ಚಯಿಸುವುದು ಪರಿಶೇಷಾನುಮಾನ.

3. ಸಾಮಾನ್ಯತೋದೃಷ್ಟಾನುಮಾನವೆಂದರೆ, ಹೇತು ಮತ್ತು ಸಾಧ್ಯಗಳ ಸಂಬಂಧವು ಪ್ರತ್ಯಕ್ಷವಿಲ್ಲದಿರುವಾಗ ಪ್ರತ್ಯಕ್ಷವಾದ ಒಂದು ವಸ್ತುವಿನ ಸಾದೃಶ್ಯವುಳ್ಳ ಹೇತುವಿನಿಂದ ಆ ಸಾದೃಶ್ಯ ಪ್ರಯುಕ್ತವಾಗಿ ಅಪ್ರತ್ಯಕ್ಷವಾಗಿದ್ದರೂ ಸಾಧ್ಯವನ್ನು ನಿಶ್ಚಯಿಸುವುದು. ಹೇಗೆಂದರೆ, ಘಟವೆಂಬ ಕಾರ್ಯವುಂಟಾಗಲು ಕರ್ತೃವಾದ ಕುಂಬಾರನಿರಬೇಕು. ಹಾಗೆಯೇ ಘಟವೆಂಬ ಕಾರ್ಯಕ್ಕೆ ಸದೃಶವಾದ ಈ ಪ್ರಪಂಚವೆಂಬ ಕಾರ್ಯವುಂಟಾಗಬೇಕಾದರೆ ಕರ್ತೃವಾದ ಈಶ್ವರನಿರಬೇಕು ಎಂದು ನಿಶ್ಚಯಿಸುವುದು.

24. ಅನ್ವಯ-ವ್ಯತಿರೇಕಗಳು: ಅನ್ವಯವೆಂದರೆ ಒಂದು ವಸ್ತುವು ಇರಲಾಗಿ ಅದರ ಇರುವಿಕೆಯ ಬಲದಿಂದ ಮತ್ತೊಂದು ವಸ್ತು ಇರುತ್ತದೆಯೆಂದು ಹೇಳುವುದು. ಇದನ್ನೇ "ಯತ್ಸತ್ತ್ವೇ ಯತ್ಸತ್ತ್ವಮ್" ಎಂದು ಹೇಳುವುದು. ಉದಾ:– ವಹ್ನಿಯಿದ್ದರೆ ಧೂಮವಿರುತ್ತದೆ. ವ್ಯತಿರೇಕವೆಂದರೆ ಒಂದು ವಸ್ತುವು ಇಲ್ಲದಿರಲಾಗಿ ಮತ್ತೊಂದು ವಸ್ತುವು ಇರುವುದಿಲ್ಲ ಎಂದು ಹೇಳುವುದು. ಇದನ್ನೇ "ಯದಭಾವೇ ಯದಭಾವಃ" ಎಂದು ಹೇಳುವುದು. ಉದಾ:– ವಹ್ನಿಯಿಲ್ಲದಿದ್ದರೆ ಧೂಮವೂ ಇರುವುದಿಲ್ಲ.

ಪ್ರಕೃತ ಭಾವನಾತ್ಮಕವಾದ ನಿದಿಧ್ಯಾಸನದಿಂದ ಜ್ಞಾನದ ಪ್ರಕರ್ಷ ಅಂದರೆ ಅತಿಶಯವು ಕಂಡು ಬರುವುದರಿಂದ ಅಂತಹ ನಿದಿಧ್ಯಾಸನವನ್ನು ವಿಧಾನ ಮಾಡಬೇಕಾಗಿಲ್ಲ. ವಿಧಿಯಿಲ್ಲದಿದ್ದರೂ ಭಾವನೆಯು ಸಿದ್ಧವಾಗಿಯೇ (ಪ್ರಾಪ್ತವಾಗಿಯೇ) ಇರುತ್ತದೆ. ಮತ್ತೆ ಮತ್ತೆ ಚಿಂತನೆ ಮಾಡುವುದೇ ಭಾವನೆ ಅಥವಾ ನಿದಿಧ್ಯಾಸನ.

25. **ಅವಯವರಹಿತವಾದ:** ಪ್ರಪಂಚವು ಬ್ರಹ್ಮನಲ್ಲಿ ಅಧ್ಯಸ್ತವಾದುದು ಎಂದು ವೇದಾಂತ ಸಿದ್ಧಾಂತ. ಆದುದರಿಂದಲೇ ಪ್ರಪಂಚವು ಮಿಥ್ಯಾಭೂತವಾದುದು ಎಂದು ಅರ್ಥಾತ್ ಸಿದ್ಧವಾಗುತ್ತದೆ. ಇಂತಹ ಅಧ್ಯಾಸ ನಿವೃತ್ತಿಯೇ ವೇದಾಂತ ವಿಚಾರ ಶಾಸ್ತ್ರಕ್ಕೆ ಪ್ರಯೋಜನವು.

ದ್ವ್ಯಣುಕಾದಿ ಕ್ರಮದಿಂದ ಹುಟ್ಟಿದ ಜಗತ್ತು ಸತ್ಯವೆಂದು ತಾರ್ಕಿಕರೂ, ಮೂಲ ಪ್ರಕೃತಿಯ ಮಹದಾದಿರೂಪ ಪರಿಣಾಮವೇ ಪ್ರಪಂಚವೆಂದು ಸಾಂಖ್ಯರೂ ಹೇಳುತ್ತಾರೆ. ಈ ಮತಗಳನ್ನು ನಿರಾಕರಿಸಿ, ಅವಿದ್ಯೆಯಿಂದ ಬ್ರಹ್ಮನಲ್ಲಿ ಅಧ್ಯಸ್ತವಾದ ಈ ಪ್ರಪಂಚವು ಅನಿರ್ವಚನೀಯವೂ ಬ್ರಹ್ಮವಿವರ್ತರೂಪವೂ ಆದುದರಿಂದ ಅಧ್ಯಾಸನಿವೃತ್ತಿಯೆಂಬ ಪ್ರಯೋಜನವನ್ನು ಈ ಪ್ರಕರಣದಲ್ಲಿ ವಿಶದವಾಗಿ ನಿರೂಪಿಸಲಾಗಿದೆ.

26. **ದೃಕ್:** ದೃಕ್ ಎಂದರೆ ನೋಡುವವನು=ಸಾಕ್ಷಿ ಚೈತನ್ಯ. ದೃಶ್ಯ ಎಂದರೆ ನೋಡಲ್ಪಡುವುದು=ಜಡವಾದುದು=ಪ್ರಪಂಚ.

27. **ಪ್ರಯತ್ನಾಯೌಗಪದ್ಯಾತ್**.... .... || (ವೈ.ಸೂ.3-2-3) ಇದು ಕಣಾದಮಹರ್ಷಿಕೃತವಾದ ವೈಶೇಷಿಕ ದರ್ಶನದ ಸೂತ್ರ. ಒಂದು ಶರೀರದಲ್ಲಿ ಒಂದೇ ಮನಸ್ಸು ಇರುತ್ತದೆ ಎಂಬುದನ್ನು ಈ ಸೂತ್ರವು ಪ್ರತಿಪಾದಿಸುತ್ತದೆ. ಒಂದು ವೇಳೆ ಒಂದೇ ಶರೀರದಲ್ಲಿ ಅನೇಕ ಮನಸ್ಸುಗಳು ಇರುವುದಾದರೆ ಅನೇಕ ಪ್ರಯತ್ನಗಳು ಮತ್ತು ಅನೇಕ ಜ್ಞಾನಗಳು ಒಟ್ಟಿಗೆ ಉಂಟಾಗಬೇಕಾಗುತ್ತದೆ. ಅಂತೆಯೇ ಪರಸ್ಪರ ವಿರುದ್ಧವಾದ ಅನೇಕ ಪ್ರಯತ್ನಗಳೂ ಹಾಗೂ ಜ್ಞಾನಗಳೂ ಒಟ್ಟಿಗೆ ಉಂಟಾಗಬೇಕಾಗುತ್ತದೆ. ಆದರೆ ಲೋಕದಲ್ಲಿ ಈ ರೀತಿ ಕಂಡುಬರುವುದಿಲ್ಲವಾದ್ದರಿಂದ ಅಂದರೆ ಒಂದು ಕಾಲಕ್ಕೆ ಒಂದೇ ಪ್ರಯತ್ನ ಹಾಗೂ ಒಂದೇ ಜ್ಞಾನಉಂಟಾಗುವುದರಿಂದ ಒಂದು ಶರೀರದಲ್ಲಿ ಒಂದೇ ಮನಸ್ಸು ಇರುತ್ತದೆಯೆಂದು ಈ ಸೂತ್ರದ ಅರ್ಥ.

ಪ್ರಕೃತ, ಗ್ರಹಣ–ಸ್ಮರಣರೂಪವಾದ ಎರಡು ಜ್ಞಾನಗಳು ಒಟ್ಟಿಗೆ ಉಂಟಾಗಲಾರವಾದುದರಿಂದ "ಇದು ರಜತ" ಎಂಬ ಪ್ರತೀತಿಗೆ ಕಾರಣವಾಗುವುದಿಲ್ಲವೆಂದು ಆಕ್ಷೇಪಣೆ.

28. **ವಿನಾಶಾವಸ್ಥೆಯಲ್ಲಿಲ್ಲದಿರುವ:** ಜ್ಞಾನವು ಹುಟ್ಟುವ ಕ್ಷಣವು ಮೊದಲನೆಯ ಕ್ಷಣ. ಜ್ಞಾನವು ಮೊದಲನೆಯ ಕ್ಷಣದಲ್ಲಿ ಹುಟ್ಟಿ, ಎರಡನೆಯ ಕ್ಷಣದಲ್ಲಿ ಇದ್ದು ಮೂರನೆಯ ಕ್ಷಣದಲ್ಲಿ ನಾಶಹೊಂದುತ್ತದೆ. ಮೂರನೆಯ ಕ್ಷಣವೇ ಜ್ಞಾನದ ನಾಶಾವಸ್ಥೆ. ಮೊದಲನೆಯ ಕ್ಷಣದಲ್ಲಿ ಹುಟ್ಟಿದ ಜ್ಞಾನ ಮತ್ತು ಮೂರನೆಯ ಅಥವಾ ನಾಲ್ಕನೆಯ ಕ್ಷಣದಲ್ಲಿ ಹುಟ್ಟುವ ಜ್ಞಾನ—ಈ ಎರಡು ಜ್ಞಾನಗಳು ಒಟ್ಟಿಗೆ ಇರಲಾರವು.

ಆದರೆ ಮೊದಲನೆಯ ಕ್ಷಣದಲ್ಲಿ ಹುಟ್ಟಿದ ಜ್ಞಾನ ಮತ್ತು ಎರಡನೆಯ ಕ್ಷಣದಲ್ಲಿ ಹುಟ್ಟಿದ ಜ್ಞಾನ–ಹೀಗೆ ಅವ್ಯವಧಾನದಿಂದ ಹುಟ್ಟಿದ ಈ ಎರಡು ಜ್ಞಾನಗಳು ಮೂರನೆಯ ಕ್ಷಣದಲ್ಲಿ ಒಟ್ಟಿಗೆ ಇರಬಹುದು. ಅಂದರೆ ಮೊದಲನೆಯ ಕ್ಷಣದಲ್ಲಿ ಹುಟ್ಟಿದ ಜ್ಞಾನವು ಮೂರನೆಯ ಕ್ಷಣದಲ್ಲಿ ವಿನಾಶಾವಸ್ಥೆಯಲ್ಲಿರುತ್ತೆ. ಎರಡನೆಯ ಕ್ಷಣದಲ್ಲಿ ಹುಟ್ಟಿದ ಜ್ಞಾನವು ಮೂರನೆಯ ಕ್ಷಣದಲ್ಲಿ ಅಂದರೆ ತನಗೆ ಎರಡನೆಯ ಕ್ಷಣವಾದ ಸ್ಥಿತಿಕ್ಷಣದಲ್ಲಿರುತ್ತದೆ. ಅಂದರೆ ಒಂದು ವಿನಾಶಾವಸ್ಥೆಯಲ್ಲಿರುವ ಜ್ಞಾನ. ಮತ್ತೊಂದು ವಿನಾಶಾವಸ್ಥೆಯಲ್ಲಿಲ್ಲದಿರುವ ಜ್ಞಾನ. ಈ ರೀತಿಯಾಗಿ "ಇದು ರಜತ" ಎಂಬುವಾಗ ಗ್ರಹಣ–ಸ್ಮರಣರೂಪವಾದ ಎರಡು ಜ್ಞಾನಗಳ ಪೈಕಿ ಒಂದು ಮೊದಲನೆಯ ಕ್ಷಣದಲ್ಲಿ ಹುಟ್ಟಿದುದು. ಮತ್ತೊಂದು ಎರಡನೆಯ ಕ್ಷಣದಲ್ಲಿ ಹುಟ್ಟಿದುದು. ಮೂರನೆಯ ಕ್ಷಣದಲ್ಲಿ ಇವೆರಡೂ ಒಟ್ಟಿಗೆ ಇರಬಹುದು.

29. ಸಂನಿಹಿತರಜತ ವಿಷಯಕವಾದ: ಅಂದರೆ ವಾಸ್ತವಿಕವಾಗಿ ಎಲ್ಲಿ ರಜತ ವಿರುತ್ತದೆಯೋ ಅಲ್ಲಿ ಉಂಟಾಗುವ "ಇದು ರಜತ"ವೆಂಬ ಜ್ಞಾನ.

30. ಗ್ರಹಣ-ಸ್ಮರಣೆಗಳು ಇಲ್ಲ : "ಹಳದಿಯಾದ ಶಂಖ" ಎಂಬಲ್ಲಿ ಗ್ರಹಣಾತ್ಮಕ ಜ್ಞಾನವಿದ್ದರೂ, ಸ್ಮರಣ ರೂಪವಾದ ಜ್ಞಾನವಿಲ್ಲ. ಏಕೆಂದರೆ ಹಳದಿ ಎಂಬ ಅಂಶವು ಸ್ಮರಣೆಗೆ ವಿಷಯವಾಗುವುದಿಲ್ಲ. ಹಳದಿಯ ಸಂಸ್ಕಾರವನ್ನು ಉದ್ಬೋಧಗೊಳಿಸುವ ಸಾಮಗ್ರಿಯೂ ಇಲ್ಲ. ಆದ್ದರಿಂದ "ಹಳದಿಯಾದ ಶಂಖ" ಎಂಬ ಮಿಥ್ಯಾವ್ಯವಹಾರವು ಸಿದ್ಧಿಸುವುದಿಲ್ಲವೆಂದು ಆಕ್ಷೇಪಣೆ. "ಹಳದಿಯಾದ ಶಂಖ" ಎಂಬಲ್ಲಿ ಗ್ರಹಣ–ಸ್ಮರಣರೂಪವಾದ ಎರಡು ಜ್ಞಾನಗಳಿಲ್ಲದಿದ್ದರೂ, ಕೇವಲ ಗ್ರಹಣಾತ್ಮಕವಾದ ಎರಡು ಜ್ಞಾನಗಳೇ ಮಿಥ್ಯಾವ್ಯವಹಾರಕ್ಕೆ ಕಾರಣವಾಗುತ್ತವೆಯೆಂದು ಸಮಾಧಾನ.

ಗ್ರಹಣಾತ್ಮಕವಾದ ಈ ಎರಡು ಜ್ಞಾನಗಳಿಗೆ ಸಮೀಚೀನಸಂಸರ್ಗಜ್ಞಾನದ ಸಾಮ್ಯವಿದೆ. ಸಮೀಚೀನಸಂಸರ್ಗಜ್ಞಾನವೆಂದರೆ "ಹಳದಿಯಾದ ಚಿನ್ನದ ಗಟ್ಟಿ" ಎಂಬಲ್ಲಿ ವಾಸ್ತವಿಕವಾಗಿ ಹಳದಿಬಣ್ಣಕ್ಕೂ ದ್ರವ್ಯಕ್ಕೂ ಇರುವ ಸಂಬಂಧದ ಜ್ಞಾನ.

31. ಮಾಧ್ಯಮಿಕ ಬೌದ್ಧರ ಪಕ್ಷ: ಮಾಧ್ಯಮಿಕ ಬೌದ್ಧರು ಶೂನ್ಯವಾದಿಗಳು. ಆಲಂಬನವಿಲ್ಲದೆಯೇ ಜ್ಞಾನವುಂಟಾಗುತ್ತದೆಯೆಂದು ಅವರು ಹೇಳುತ್ತಾರೆ. ಆದುದರಿಂದಲೇ ಪರಿಹಾಸಕ್ಕಾಗಿ ಅವರನ್ನು ಮಾಹಾಭಾನಿಕರೆಂದು ಕರೆಯುತ್ತಾರೆ.

32. ನಲವತ್ತೊಂಬತ್ತು: ಸ್ವರಗಳು ಹದಿನಾರು. ಕಕಾರದಿಂದ ಮಕಾರ ಪರ್ಯಂತವಾಗಿ ಇಪ್ಪತ್ತೈದು ವರ್ಗೀಯ ವ್ಯಂಜನಗಳು. ಯಕಾರ ಮೊದಲಾದ ಎಂಟು ಅವರ್ಗೀಯ ವ್ಯಂಜನಗಳು. ಒಟ್ಟು ಸೇರಿ ನಲವತ್ತೊಂಬತ್ತು ವರ್ಣಗಳು. ಈ ಪೈಕಿ ಯಾವ ವರ್ಣವೂ ಅಭಾವ ಎಂಬ ಅರ್ಥದಲ್ಲಿ ಇಲ್ಲ. ಆದುದರಿಂದ ಈ ರೀತಿ ಅನುಮಾನ ಪ್ರಯೋಗ ಮಾಡಬಹುದು:– "ನಕಾರವು ಅಭಾವಾರ್ಥಕವಾದುದಲ್ಲ; ವರ್ಣವಾಗಿರುವುದರಿಂದ; ಅಕಾರ ಮುಂತಾದ ವರ್ಣದಂತೆ."

35 ಬೇರೆಯವರು: ಈ ಪರ್ಯಂತವಾಗಿ ಭ್ರಮಾತ್ಮಕ ಜ್ಞಾನದ ಬಗ್ಗೆ ಪೂರ್ವ ಮೀಮಾಂಸಕರು ಹೇಳಿದ ಸರಣಿಯನ್ನು ಇಲ್ಲಿಂದ ಮುಂದೆ ವೇದಾಂತ ಸಿದ್ಧಾಂತದ ಪ್ರಕಾರ ಒಂದೊಂದಾಗಿ ಖಂಡಿಸುತ್ತಾರೆ.

36. ಗೌರವ ದೋಷ: ರಜತಸ್ವರೂಪವನ್ನು ಆರೋಪಿಸದೆ, ಭೇದವನ್ನು ಗ್ರಹಿಸದಿರುವಿಕೆಯು ಮಾತ್ರ ತಾನೇ ವ್ಯವಹಾರಕ್ಕೆ ಕಾರಣವಾಗುವುದಾದರೆ, ರಜತಸ್ವರೂಪವನ್ನು ಆರೋಪಿಸುವಿಕೆ ಎಂಬ ಅಂಶವು ಕಾರಣಸಾಮಗ್ರಿಯಲ್ಲಿ ವ್ಯರ್ಥವಾದ ಅಧಿಕ ಭಾಗವಾಗುವುದರಿಂದ ಗೌರವದೋಷವುಂಟಾಗುತ್ತದೆಯೆಂದು ಅಭಿಪ್ರಾಯ.

37. ವಿಶಿಷ್ಟವಾದ ವ್ಯವಹಾರವು: ಪುರುಷನು ದಂಡವಿಶಿಷ್ಟನಾಗಿರುವುದನ್ನು ತಿಳಿದೇ "ದಂಡವುಳ್ಳ ಪುರುಷನು" ಎಂಬ ವ್ಯವಹಾರವುಂಟಾಗುತ್ತದೆ. ಹಾಗೆ ತಿಳಿಯದಿದ್ದರೆ ಈ ರೀತಿಯಾದ ವ್ಯವಹಾರವು ಉಂಟಾಗುವುದೇ ಇಲ್ಲ. ಅಂತೆಯೇ ಎದುರಿಗಿರುವ ಪದಾರ್ಥದಲ್ಲಿ (ಶುಕ್ತಿಯಲ್ಲಿ) ರಜತತ್ವ ವೈಶಿಷ್ಟ್ಯವನ್ನು ತಿಳಿದರೇ (ಆರೋಪಿಸಿದರೇ) 'ಇದು ರಜತ"ವೆಂಬ ವ್ಯವಹಾರವು ಉಂಟಾಗುವುದು. ಕೇವಲ ಭೇದವನ್ನು ಗ್ರಹಿಸದಿರುವಿಕೆ ಮಾತ್ರದಿಂದ "ಇದು ರಜತ"ವೆಂಬ ವ್ಯವಹಾರವುಂಟಾಗುವುದಿಲ್ಲ. ಒಂದುವೇಳೆ ಭೇದವನ್ನು ಗ್ರಹಿಸದಿರುವಿಕೆಯು ಮಾತ್ರ ವ್ಯವಹಾರಕ್ಕೆ ಕಾರಣವಾಗುವುದಾದರೆ, ಎದುರಿಗಿರುವ ಪದಾರ್ಥದ ಸಂನಿಕರ್ಷ (ಚಕ್ಷುಃಸಂನಿಕರ್ಷ)ಕ್ಕೆ ಮೊದಲೂ ಕೂಡ ಭೇದವನ್ನು ಗ್ರಹಿಸದಿರುವಿಕೆಯು ಸುಲಭವಾಗಿರುವುದರಿಂದ ಆ ರೀತಿಯಾದ ವ್ಯವಹಾರವಾಗಲಿ ಅಥವಾ ಪ್ರವೃತ್ತಿಯಾಗಲಿ ಏಕೆ ಉಂಟಾಗುವುದಿಲ್ಲ? ಆದುದರಿಂದ ವಿಶಿಷ್ಟ ಜ್ಞಾನಪೂರ್ವಕವಾಗಿಯೇ ವಿಶಿಷ್ಟ ವ್ಯವಹಾರವುಂಟಾಗುತ್ತದೆಯೆಂಬ ನಿಯಮವು ಸಿದ್ಧವಾಗುತ್ತದೆ. ಆದುದರಿಂದ ಪ್ರಕೃತದಲ್ಲಿ ರಜತವ್ಯವಹಾರಕ್ಕೆ ಕಾರಣವಾಗಿ ರಜತತ್ವದ ಆರೋಪವನ್ನು ಒಪ್ಪಲೇಬೇಕು ಎಂದು ಅಭಿಪ್ರಾಯ.

38. ಅನ್ವಯ ವ್ಯತಿರೇಕಗಳಿಂದ: ಅಭಿಲಷಿತ ವಸ್ತುಜ್ಞಾನವಿದ್ದರೆ ಪ್ರವೃತ್ತಿ ಉಂಟಾಗುವುದು ಎಂಬುದಾಗಿ ಅನ್ವಯ. ಅಭಿಲಷಿತ ವಸ್ತುಜ್ಞಾನವಿಲ್ಲದಿದ್ದರೆ, ಪ್ರವೃತ್ತಿ ಉಂಟಾಗುವುದಿಲ್ಲ ಎಂಬುದಾಗಿ ವ್ಯತಿರೇಕ.

39. ಉಪಕಾರಕ್ಕೆ ಹೇತುವೆಂಬುದಾಗಿ ಊಹಿಸಿ: ಊಹಿಸಿ ಎಂದರೆ ಅನುಮಾನ ಮಾಡಿ ಎಂದರ್ಥ. ಅನುಮಾನ ಪ್ರಯೋಗವು ಹೇಗೆಂದರೆ:–"ಎದುರಿಗಿರುವ ಪದಾರ್ಥವು ಉಪಕಾರಕ್ಕೆ ಹೇತು (ಇಷ್ಟಾರ್ಥ ಸಾಧಕ); ರಜತವಾಗಿರುವುದರಿಂದ; ಹಿಂದೆ ಅನುಭೂತವಾದ ರಜತದಂತೆ." ಪಕ್ಷವಾದ ಎದುರಿಗಿರುವ ಪದಾರ್ಥದಲ್ಲಿ (ಶುಕ್ತಿಯಲ್ಲಿ) ರಜತತ್ವವೆಂಬ ಹೇತು ಇರಬೇಕಾದರೆ, ಅದು ಅಲ್ಲಿ ಆರೋಪಿತವಾಗಿರಲೇಬೇಕು. ಆದುದರಿಂದ ಭೇದವನ್ನು ಗ್ರಹಿಸದಿರುವಿಕೆಯು ಸಮಾರೋಪ ಪೂರ್ವಕವಾಗಿಯೇ ವ್ಯವಹಾರಕ್ಕೆ ಕಾರಣವಾಗುತ್ತದೆಯೆಂದು ಅಭಿಪ್ರಾಯ.

38. **ಈ ಅನುಮಾನ ಪ್ರಯೋಗದಿಂದ:** ರಜತವಿಷಯಕವಾದ ಜ್ಞಾನಕ್ಕೆ ಎದುರಿಗಿರುವ ವಸ್ತುವೇ ವಿಷಯವೆಂದು ಸಾಧಿತವಾಗಲಾಗಿ ಅರ್ಥಾತ್ ರಜತ ಮತ್ತು ಎದುರಿಗಿರುವ ವಸ್ತುಗಳಿಗೆ ತಾದಾತ್ಮ್ಯವು ಸಿದ್ಧವಾಗುತ್ತದೆ.

39. **ಸಮಾನಾಧಿಕರಣವಾದ ಬೇರೆ ಪದಕ್ಕೆ:** ಇಲ್ಲಿ ರಜತಪದಕ್ಕೆ ಸಮಾನಾಧಿಕರಣವಾದ ಬೇರೆ ಪದವು "ಇದು" ಎಂಬ ಪದವು. ಈ ಅನುಮಾನ ಪ್ರಯೋಗದಿಂದ ಶುಕ್ತಿಯೇ ರಜತ ವಿಷಯಕಜ್ಞಾನಕ್ಕೆ ವಿಷಯವೆಂದು ಸಾಧಿತವಾಗಲಾಗಿ ಅರ್ಥಾತ್ ಶುಕ್ತಿ ಮತ್ತು ರಜತಗಳಿಗೆ ತಾದಾತ್ಮ್ಯವು ಸಿದ್ಧವಾಗುತ್ತದೆ.

ಈ ಎರಡು ವಿಧವಾದ ಅನುಮಾನ ಪ್ರಯೋಗಗಳೂ ತಾದಾತ್ಮ್ಯವನ್ನು ಆರೋಪ ಮಾಡುವುದರಿಂದಲೇ ಉಪಪಾದಿತವಾಗಬೇಕು. ಆದ್ದರಿಂದ ಆರೋಪವು ಸಿದ್ಧವಾಗುತ್ತದೆ.

40. **ಅನುಭವ ವಿರೋಧವುಂಟಾಗುತ್ತದೆ:** ಮೀಮಾಂಸಕನ ಆಕ್ಷೇಪಣೆಯು ಅನುಭವ ವಿರುದ್ಧವಾಗಿರುವುದು ಹೇಗೆಂದರೆ:- "ಇದು ರಜತ" ಎಂಬಲ್ಲಿ, ದೋಷ ಯುಕ್ತವಾದ ದೃಷ್ಟಿಯುಳ್ಳ ಮನುಷ್ಯನಿಗೆ ಎದುರಿಗಿರುವ ವಸ್ತುವಿನೊಡನೆ ಚಕ್ಷುಃಸಂನಿಕರ್ಷವುಂಟಾಗಲು "ಇದು" ಎಂಬುದಾಗಿ ಚಾಕಚಿಕ್ಯಾಕಾರವಾದ (ಪಳಪಳ ಹೊಳೆಯುವಿಕೆಯ ಆಕಾರದ) ಅಂತಃಕರಣವೃತ್ತಿಯು ಉಂಟಾಗುತ್ತದೆ. ಶುಕ್ತ್ಯಾಕಾರವಾದ ಅಂತಃಕರಣವೃತ್ತಿಯು ಉಂಟಾಗುವುದೇ ಇಲ್ಲ. ಶುಕ್ತಿಸ್ವರೂಪವನ್ನು ಗ್ರಹಿಸದಿರುವ ಅವಿದ್ಯೆಯೇ ಚಾಕಚಿಕ್ಯಾದಿ ಸಾದೃಶ್ಯಸಂದರ್ಶನದಿಂದ ಉದ್ಬೋಧಿತವಾದ ರಜತಸಂಸ್ಕಾರಸಹಿತವಾಗಿ ದೋಷಯುಕ್ತವಾಗಿರುವುದರಿಂದ ರಜತರೂಪವಾದ ವಸ್ತುವಿನ ಆಕಾರವಾಗಿಯೂ ರಜತ ಜ್ಞಾನಾಭಾಸರೂಪವಾಗಿಯೂ ಪರಿಣಾಮ ಹೊಂದುತ್ತದೆ. ರಜತಾಕಾರವಾದ ಪರಿಣಾಮವನ್ನೇ ಅರ್ಥಾಧ್ಯಾಸವೆಂಬುದಾಗಿಯೂ, ರಜತಜ್ಞಾನಾಭಾಸವನ್ನೇ ಜ್ಞಾನಾಧ್ಯಾಸವೆಂಬುದಾಗಿಯೂ ಕರೆಯುತ್ತಾರೆ.

ಈ ರೀತಿಯಾದ ಲೋಕಾನುಭವವನ್ನೇ ನಿರಾಕರಿಸುವ ಮೀಮಾಂಸಕನ ಆಕ್ಷೇಪಣೆಯೇ ಅನುಭವವಿರುದ್ಧವಾಗುತ್ತದೆಯೆಂದು ಅಭಿಪ್ರಾಯ.

41. **ಅನುಮಾನ ಪ್ರಯೋಗದಲ್ಲಿ:** ಮೀಮಾಂಸಕನು ಜ್ಞಾನಗಳು ಯಥಾರ್ಥವಾದವುಗಳು ಎಂಬುದಾಗಿ ಸಾಧಿಸಲು ಹೇಳಿದ "ವಿವಾದವಿಷಯವಾದ ಪ್ರತೀತಿಗಳು ಯಥಾರ್ಥವಾದವುಗಳು; ಪ್ರತೀತಿಯಾಗಿರುವುದರಿಂದ, ದಂಡೀ (ದಂಡವುಳ್ಳವನು) ಎಂಬ ಪ್ರತೀತಿಯಂತೆ" ಎಂಬ ಅನುಮಾನ ಪ್ರಯೋಗದಲ್ಲಿ.

42. **ಸಮಾನವಾದ ಯೋಗಕ್ಷೇಮ:** ವಿಷಯವು ಯಥಾರ್ಥವಾಗಿಲ್ಲದಿದ್ದರೂ (ಭ್ರಮಾತ್ಮಕವಾದ) ರಜತಜ್ಞಾನವುಂಟಾಗುತ್ತದೆಯೆಂದು ವೇದಾಂತಿಗಳ ಮತ. ವ್ಯವಹಾರವು (ಪ್ರವೃತ್ತಿಯು) ಯಥಾರ್ಥವಾಗದಿದ್ದರೂ ರಜತಜ್ಞಾನವು ಯಥಾರ್ಥವಾದುದೇ ಎಂದು ಮೀಮಾಂಸಕರ ಮತ. ಆದುದರಿಂದ ಅವಿಶ್ವಾಸ ಪ್ರಸಂಗದೋಷವು ಇಬ್ಬರಿಗೂ ಸಮಾನವಾಗಿದೆ.

ಅಕಸ್ಮಾತ್ತಾಗಿ ಎಲ್ಲೋ ಒಬ್ಬನು ಅನ್ನವನ್ನು ತಿಂದು ಕೂಡಲೇ ಮೃತಿಹೊಂದಿದ ಮಾತ್ರಕ್ಕೆ ಎಲ್ಲ ಜನರೂ ಅನ್ನತಿನ್ನುವುದನ್ನು ಬಿಡುವುದಿಲ್ಲ. ಆದುದರಿಂದ ಜ್ಞಾನದ ವಿಷಯವು ಎಲ್ಲೋ ಒಂದೆಡೆ ವ್ಯಭಿಚರಿತವಾದ ಮಾತ್ರಕ್ಕೆ ಎಲ್ಲೆಡೆಯಲ್ಲಿಯೂ ಪ್ರವೃತ್ತಿಗೆ ಭಂಗವುಂಟಾಗುವುದಿಲ್ಲವೆಂದು ಮೀಮಾಂಸಕನು ಹೇಳುವುದಾದರೆ, ಈ ವಿಷಯವು ವೇದಾಂತಿಗಳಿಗೂ ಸಮಾನವೇ.

ಆದುದರಿಂದ ಈ ವಿಚಾರದಲ್ಲಿ ಪರಸ್ಪರ ಆಕ್ಷೇಪಣೆ ಮಾಡುವ ಹಾಗಿಲ್ಲವೆಂದು ಅಭಿಪ್ರಾಯ.

43. ಮಾಧ್ಯಮಿಕರು: ಸರ್ವಶೂನ್ಯವಾದಿಗಳಾದ ಬೌದ್ಧರು.

44. ಶಕ್ಯ: ಅಸತ್ಪ್ರಕಾಶನ ಶಕ್ತಿಯುಳ್ಳ ವಿಜ್ಞಾನವೇ ಶಕ್ತವಾದುದು. ಆ ವಿಜ್ಞಾನದ ಅಸತ್ಪ್ರಕಾಶನ ಶಕ್ತಿಯಿಂದ ಪ್ರಕಾಶಿತವಾದ ಘಟ ಮುಂತಾದ ವಿಷಯುವೇ ಶಕ್ಯವೆಂಬುದು. ಅಸತ್ಪ್ರಕಾಶಕವಾದ ವಿಜ್ಞಾನವೂ ಅಸತ್ ಆದುದು; ಆದರಿಂದ ಪ್ರಕಾಶಿತ ವಾಗುವ ಘಟ ಮುಂತಾದ ವಿಷಯುವೂ ಅಸತ್ ಆದುದು ಎಂಬುದಾಗಿ ಮಾಧ್ಯಮಿಕರ ಸಿದ್ಧಾಂತ.

45. ವ್ಯಭಿಚಾರ ದೋಷಯುಕ್ತವಾಗಿದೆ: ಬಹಿರಿಂದ್ರಿಯ ಸಂನಿಕರ್ಷವಿಲ್ಲದೆಯೇ ಪ್ರತ್ಯಕ್ಷವಾಗಿರುವುದರಿಂದ ರಜತವು ವಿಜ್ಞಾನರೂಪವಾದುದು ಎಂಬ ಅನುಮಾನ ಪ್ರಯೋಗದಲ್ಲಿ ಬಹಿರಿಂದ್ರಿಯ ಸಂನಿಕರ್ಷವಿಲ್ಲದೆಯೇ ಪ್ರತ್ಯಕ್ಷವಾಗಿರುವಿಕೆಯೆಂಬ ಹೇತುವು ವ್ಯಭಿಚಾರದೋಷದಿಂದ ಕೂಡಿದೆ. ಹೇಗೆಂದರೆ – ಜಗತ್ತಿಗೆ ಮೂಲಕಾರಣವಾದ ಭಾವ ರೂಪವಾದ ಅನಾದಿಯಾದ ಅಜ್ಞಾನವೆಂಬ ಅವಿದ್ಯೆಯನ್ನು ವೇದಾಂತಿಗಳು ಪ್ರತಿಪಾದಿಸಿದ್ದಾರೆ. ಅವಿದ್ಯೆಯು ವಿಜ್ಞಾನರೂಪವಾದುದಲ್ಲ(ಆಂತರಿಕ ವಿಜ್ಞಾನರೂಪವಾದುದಲ್ಲ). ಏಕೆಂದರೆ, ಜಗತ್ತಿಗೆ ಮೂಲಕಾರಣವಾದ ಅದು ಹೊರಗಡೆ ಇದೆ. ಬಹಿರಿಂದ್ರಿಯ ಸಂನಿಕರ್ಷವಿಲ್ಲದೆಯೇ "ನಾನು ಅಜ್ಞನು" ಎಂಬುವಾಗ ಅವಿದ್ಯೆಯು ಪ್ರತ್ಯಕ್ಷವಾಗುತ್ತದೆ. ವಿಜ್ಞಾನರೂಪವಾಗಿರುವಿಕೆಯೆಂಬ ಸಾಧ್ಯವಿಲ್ಲದಿರುವ ಅವಿದ್ಯೆಯಲ್ಲಿ ಬಹಿರಿಂದ್ರಿಯ ಸಂನಿಕರ್ಷವಿಲ್ಲದೆಯೇ ಪ್ರತ್ಯಕ್ಷವಾಗಿರುವಿಕೆಯೆಂಬ ಹೇತುವು ಇರುವುದರಿಂದ ವ್ಯಭಿಚಾರ ದೋಷವುಂಟಾಗುತ್ತದೆಯೆಂದು ಅಭಿಪ್ರಾಯ.

46. ಅನ್ಯಥಾಖ್ಯಾತಿಃ ಖ್ಯಾತಿ ಎಂದರೆ ಭ್ರಮ. ಇದನ್ನೇ ಪ್ರತೀತಿ, ಅವಭಾಸ, ಆಭಾಸ, ಅಧ್ಯಾಸ ಮುಂತಾದ ಹೆಸರಿನಿಂದ ಶಾಸ್ತ್ರದಲ್ಲಿ ಅಲ್ಲಲ್ಲಿ ವ್ಯವಹರಿಸುತ್ತಾರೆ.

ಖ್ಯಾತಿಯನ್ನು ಐದುವಿಧವಾಗಿ ಹೇಳುತ್ತಾರೆ —

"ಆತ್ಮಖ್ಯಾತಿ[1] ರಸತ್ಖ್ಯಾತಿಃ[2] ಅಖ್ಯಾತಿಃ[3] ಖ್ಯಾತಿರನ್ಯಥಾ[4]
ತಥಾಽನಿರ್ವಚನೀಯಖ್ಯಾತಿಃ[5] ಇತ್ಯೇನಂ ಖ್ಯಾತಿಪಂಚಕಮ್"

1. ಆತ್ಮಖ್ಯಾತಿ: ಇದು ಕ್ಷಣಿಕ ವಿಜ್ಞಾನವೇ ಆತ್ಮವೆಂದು ಹೇಳುವ ಯೋಗಾಚಾರ ಬೌದ್ಧರ ಮತ. ಆಂತರಿಕ ವಿಜ್ಞಾನರೂಪವಾದ ಆತ್ಮವೇ ಬಾಹ್ಯವಾದ ಶುಕ್ತಿಯಲ್ಲಿ

ರಜತವಾಗಿ ತೋರುತ್ತದೆ. ಇವರ ಮತದಲ್ಲಿ ಎಲ್ಲವೂ ವಿಜ್ಞಾನರೂಪವೇ ಆಗಿರುವುದರಿಂದ ರಜತವೂ ಆಂತರಿಕ ವಿಜ್ಞಾನರೂಪವಾದುದೇ. ಆದ್ದರಿಂದ ಅಂತಹ ವಿಜ್ಞಾನರೂಪವಾದ ಆತ್ಮವೇ ಬಾಹ್ಯವಾಗಿರುವಂತೆ ತೋರುವುದರಿಂದ ಇದನ್ನು ಆತ್ಮಖ್ಯಾತಿಯೆಂದು ಹೇಳುತ್ತಾರೆ.

2. ಅಸತ್‌ಖ್ಯಾತಿ: ಇದು ಸರ್ವಶೂನ್ಯವಾದಿಗಳಾದ ಮಾಧ್ಯಮಿಕ ಬೌದ್ಧರ ಮತ. ಶುಕ್ತಿಯು ಅಸತ್ ಆದ ರಜತರೂಪದಿಂದ ತೋರುವುದೇ ಭ್ರಮ. ಅಸತ್ ಆದ ರಜತವು ತೋರುತ್ತದೆ ಎಂದು ಹೇಳುವುದರಿಂದ ಇದು ಅಸತ್‌ಖ್ಯಾತಿ.

3. ಅಖ್ಯಾತಿ: ಇದು ಪ್ರಾಭಾಕರ ಮೀಮಾಂಸಕರ ಮತ. ಖ್ಯಾತಿಯೆಂದರೆ ಭ್ರಮ. ಇವರು ಭ್ರಮವನ್ನು ಅಂಗೀಕರಿಸುವುದಿಲ್ಲ. ಖ್ಯಾತಿಯೆನ್ನುವುದು ಇಲ್ಲವಾದ್ದರಿಂದ ಇದನ್ನು "ಅಖ್ಯಾತಿ"ವಾದ ಎಂಬುದಾಗಿ ಹೇಳುತ್ತಾರೆ.

ಇವರ ಮತದಂತೆ ಶುಕ್ತಿಯಲ್ಲಿ "ಇದು ರಜತ" ಎಂಬುವಾಗ ಎರಡು ಜ್ಞಾನಗಳು ಉಂಟಾಗುತ್ತವೆ. "ಇದು" ಎಂಬ ಅಂಶದಲ್ಲಿ ಪ್ರತ್ಯಕ್ಷರೂಪವಾದ ಜ್ಞಾನ ಒಂದು. ಮತ್ತೊಂದು "ರಜತ" ಎಂಬ ಅಂಶದಲ್ಲಿ ಪೂರ್ವಾನುಭೂತವಾದ ರಜತದ ಸ್ಮರಣೆಯ ರೂಪವಾದ ಜ್ಞಾನ. ಈ ಎರಡು ಜ್ಞಾನಗಳಿಗಿರುವ ವ್ಯತ್ಯಾಸ(ಭೇದ)ವನ್ನು ಗ್ರಹಿಸದಿರುವುದರಿಂದ "ಇದು ರಜತ" ಎಂಬ ವಿಶಿಷ್ಟ ವ್ಯವಹಾರವುಂಟಾಗುತ್ತದೆಯೆಂದು ಇವರ ಸಿದ್ಧಾಂತ.

4. ಅನ್ಯಥಾಖ್ಯಾತಿ: ಇದು ತಾರ್ಕಿಕರ ಮತ. ಅನ್ಯಥಾಖ್ಯಾತಿಯೆಂದರೆ ಒಂದು ವಸ್ತುವು ಮತ್ತೊಂದು ವಸ್ತುವಿನ ರೂಪದಿಂದ ತೋರುವುದು. ಮತ್ತೊಂದು ವಸ್ತುವಿನ ರೂಪದಿಂದ ತೋರಬೇಕಾದರೆ ಆ ಮತ್ತೊಂದು ವಸ್ತು ಎಂಬುದು ಎಲ್ಲಿಯಾದರೂ ಪ್ರಸಿದ್ಧವಾಗಿರಲೇಬೇಕು. ಏಕೆಂದರೆ ಎಲ್ಲಿಯೂ ಇಲ್ಲದಿರುವ ಅಂದರೆ "ಅಸತ್" ಆದುದು ತೋರಲಾರದು. ಆದುದರಿಂದ ಶುಕ್ತಿಯು ಅಂಗಡಿ ಮುಂತಾದ ಬೇರೆಡೆಯಲ್ಲಿ ಪ್ರಸಿದ್ಧವಾದ ರಜತರೂಪದಿಂದ ತೋರುತ್ತದೆಯೆಂದು ಇವರು ಹೇಳುತ್ತಾರೆ.

5. ಅನಿರ್ವಚನೀಯಖ್ಯಾತಿ: ಇದು ಅದ್ವೈತ ವೇದಾಂತಿಗಳ ಮತ. ಶುಕ್ತಿಯಲ್ಲಿ "ಇದು ರಜತ" ಎಂಬುವಾಗ ತೋರುವ ರಜತವು "ಸತ್" ಆದುದಲ್ಲ. "ಅಸತ್" ಆದುದೂ ಅಲ್ಲ. ಆದುದರಿಂದಲೇ ಸದಸದ್ರೂಪವಾದುದೂ ಅಲ್ಲ. ಆದಕಾರಣ ಅನಿರ್ವಚನೀಯವಾದ ರಜತವು ತೋರುತ್ತದೆ. (ಇದನ್ನೇ ರಜತವು ಶುಕ್ತಿಯ ವಿವರ್ತ ಎಂಬುದಾಗಿಯೂ ಹೇಳುತ್ತಾರೆ.) ಆದುದರಿಂದ ಇದಕ್ಕೆ ಅನಿರ್ವಚನೀಯಖ್ಯಾತಿಯೆಂದು ಹೆಸರು.

47. ಅವಿದ್ಯೆ ಮತ್ತು ಮಾಯೆ: ಈ ಪ್ರಕರಣದ ಒಟ್ಟು ಅಭಿಪ್ರಾಯವೇನೆಂದರೆ:– ಕೆಲವರು ಅವಿದ್ಯೆ ಬೇರೆ ಮತ್ತು ಮಾಯೆ ಬೇರೆ ಎಂದು ಹೇಳುತ್ತಾರೆ. ಶುಕ್ತಿಯನ್ನು ನೋಡಿ ರಜತವೆಂಬುದಾಗಿ ಭ್ರಾಂತಿಹೊಂದುವುದು ಅವಿದ್ಯೆಯಿಂದ ಆದ್ದರಿಂದ ಅವಿದ್ಯೆಯು ತನ್ನ ಆಶ್ರಯವಾದ ದ್ರಷ್ಟೃವನ್ನು (ನೋಡುವವನನ್ನು)

ವ್ಯಾಮೋಹಗೊಳಿಸುತ್ತದೆ. ಆದರೆ ಇಂದ್ರಜಾಲ ಮುಂತಾದ ಮಾಯೆಯನ್ನು ಮಾಡುವವನು ತನ್ನ ಇಚ್ಛೆಯಂತೆ ಮಾಯೆಯನ್ನು ಪ್ರಯೋಗಿಸುತ್ತಾನೆ. ಮಾಯೆಯು ಇಲ್ಲಿ ತನ್ನ ಆಶ್ರಯವಾದ ಇಂದ್ರಜಾಲಿಕ(ಪ್ರಯೋಕ್ತೃ)ನನ್ನು ವ್ಯಾಮೋಹಗೊಳಿಸುವುದಿಲ್ಲ. ಆದ್ದರಿಂದ ಅವಿದ್ಯೆಯೇ ಬೇರೆ ಮತ್ತು ಮಾಯೆಯೇ ಬೇರೆ ಎಂಬುದಾಗಿ ಹೇಳುತ್ತಾರೆ.

ಆದರೆ ಅವಿದ್ಯೆ ಮತ್ತು ಮಾಯೆಗಳು ವಾಸ್ತವಿಕವಾಗಿ ಬೇರೆಬೇರೆಯಾದವುಗಳಲ್ಲ. ಅವು ಒಂದೇ. ಏಕೆಂದರೆ ಅವಿದ್ಯೆ ಮತ್ತು ಮಾಯೆ ಇವೆರಡೂ ವ್ಯಾಮೋಹವನ್ನುಂಟು ಮಾಡುವ ಸ್ವಭಾವವುಳ್ಳವಾಗಿವೆ. ದ್ರಷ್ಟೃವೇ ಆಗಲಿ ಅಥವಾ ಪ್ರಯೋಕ್ತೃವೇ ಆಗಲಿ ಬಾಧಜ್ಞಾನ ಅಥವಾ ಮಣಿಮಂತ್ರಾದಿ ಪ್ರತೀಕಾರೋಪಾಯವುಳ್ಳವನಾದರೆ ವ್ಯಾಮೋಹ ಹೊಂದುವುದಿಲ್ಲ. ಇಲ್ಲದಿದ್ದರೆ ನೋಡುವವನಂತೆ ಪ್ರಯೋಗ ಮಾಡುವವನೂ ವ್ಯಾಮೋಹವನ್ನು ಹೊಂದಿಯೇ ಹೊಂದುತ್ತಾನೆ. ಪ್ರತೀಕಾರಜ್ಞಾನವಿಲ್ಲದುದರಿಂದ ರಾಮಾವತಾರದಲ್ಲಿ ಮಾಯೆಯುಳ್ಳ ಈಶ್ವರನೂ ವ್ಯಾಮೋಹಹೊಂದಿರುವುದು ಕಂಡುಬರುತ್ತದೆ. ನೀರಿನ ದಡದಲ್ಲಿರುವ ವೃಕ್ಷಗಳು ನೀರಿನೊಳಗೆ ಕೆಳಮುಖವಾಗಿ ಕಾಣುತ್ತಿದ್ದರೂ ನೋಡುವವನಿಗೆ ಆ ವೃಕ್ಷಗಳು ಮೇಲ್ಮುಖವಾಗಿವೆಯೆಂಬ ವಿಷಯದಲ್ಲಿ ವ್ಯಾಮೋಹವುಂಟಾಗುವುದಿಲ್ಲ.

ಮಾಯೆಯು ಪ್ರಯೋಗಮಾಡುವವನ ಇಚ್ಛೆಗೆ ಅಧೀನವಾಗಿ ನಡೆಯುತ್ತದೆ. ಅವಿದ್ಯೆಯು ನೋಡುವವನ ಇಚ್ಛೆಗೆ ಅಧೀನವಾಗಿ ನಡೆಯುವುದಿಲ್ಲ. ಆದುದರಿಂದ ಪರಸ್ಪರ ವ್ಯತ್ಯಾಸವಿದೆಯೆಂದು ಹೇಳುವುದೂ ಸರಿಯಲ್ಲ. ಐಂದ್ರಜಾಲಿಕನು ಸ್ವೇಚ್ಛೆಯಿಂದ ಮಣಿ ಮಂತ್ರಾದಿಸಾಧನದಿಂದ ಮಾಯೆಯನ್ನು ಪ್ರಯೋಗಿಸಿ ಉಪಸಂಹರಿಸುವಂತೆ, ಅವಿದ್ಯೆಯ ಜಾಗದಲ್ಲಿಯೂ ನೋಡುವವನು ಸ್ವೇಚ್ಛೆಯಿಂದಲೇ ಕಣ್ಣುಮುಂದೆ ಕೈಬೆರಳಿಟ್ಟು ಇಬ್ಬರು ಚಂದ್ರರನ್ನು ಕಾಣಬಹುದು.

ಆದುದರಿಂದ ಅವಿದ್ಯೆ ಮತ್ತು ಮಾಯೆ ಎಂಬುವು ಬೇರೆಬೇರೆಯಲ್ಲ; ಒಂದೇ. ಆದರೆ ಶಾಸ್ತ್ರದಲ್ಲಿ ಅಲ್ಲಲ್ಲಿ ಆವರಣಶಕ್ತಿ ಮತ್ತು ವಿಕ್ಷೇಪಶಕ್ತಿಗಳ ದೃಷ್ಟಿಯಿಂದ ಅವಿದ್ಯೆ ಮತ್ತು ಮಾಯೆಗಳನ್ನು ಬೇರೆಬೇರೆಯಾಗಿ ವ್ಯವಹರಿಸಿರುವುದು ಔಪಚಾರಿಕವಾಗಿ ಮಾತ್ರ.

ಅನಾದಿಯಾದ ಅಜ್ಞಾನಕ್ಕೆ ಆವರಣಶಕ್ತಿ ಮತ್ತು ವಿಕ್ಷೇಪಶಕ್ತಿಯೆಂಬುದಾಗಿ ಎರಡು ಶಕ್ತಿಗಳಿವೆ. ಶುಕ್ತಿರಜತಭ್ರಾಂತಿಯ ಸ್ಥಳದಲ್ಲಿ ಆವರಣಶಕ್ತಿಯು ಯಥಾರ್ಥವಾದ ಶುಕ್ತಿಯ ಸ್ವರೂಪವನ್ನು ಮುಚ್ಚುತ್ತದೆ. ವಿಕ್ಷೇಪಶಕ್ತಿಯು ಅಲ್ಲಿ ಇಲ್ಲದಿರುವಂತಹ ರಜತವನ್ನು ತೋರಿಸುತ್ತದೆ.

ಹಾಗೆಯೇ ಅನಾದಿಯಾದ ಅಜ್ಞಾನವು ಬ್ರಹ್ಮಸ್ವರೂಪವನ್ನು ಮುಚ್ಚಿ ಇಲ್ಲದಿರುವ ಪ್ರಪಂಚವನ್ನು ತೋರಿಸುತ್ತದೆ. ಆವರಣಶಕ್ತಿಯ ದೃಷ್ಟಿಯಿಂದ ಅದು ಅವಿದ್ಯೆ. ವಿಕ್ಷೇಪಶಕ್ತಿಯ ದೃಷ್ಟಿಯಿಂದ ಅದು ಮಾಯೆ.

48. ಅನವಸ್ಥಾ: ಘಟಾಭಾವವು ಅನುಪಲಬ್ಧಿ ಪ್ರಮಾಣದಿಂದ ತಿಳಿಯಲ್ಪಡುತ್ತದೆಯೆಂದು ಭಾಟ್ಟ ಮೀಮಾಂಸಕರು ಹೇಳುತ್ತಾರೆ. ಅನುಪಲಬ್ಧಿ ಎಂದರೆ ಉಪಲಬ್ಧಿಯ ಅಭಾವ. ಘಟದ ಉಪಲಬ್ಧಿಯ ಅಭಾವವು ಘಟಾಭಾವವನ್ನು ತಿಳಿಸುವು

ವುದಾದರೆ, ಘಟದ ಉಪಲಬ್ಧಿಯ ಅಭಾವವನ್ನು ತಿಳಿಯಲು ಮತ್ತೊಂದು ಅನುಪಲಬ್ಧಿ ಪ್ರಮಾಣವು ಬೇಕು. ಈ ಅನುಪಲಬ್ಧಿಯೂ ಕೂಡ ಉಪಲಬ್ಧಿಯ ಅಭಾವರೂಪವಾದುದು. ಈ ಅಭಾವವನ್ನು ತಿಳಿಯಲು ಮತ್ತೊಂದು ಅನುಪಲಬ್ಧಿ ಪ್ರಮಾಣವು ಬೇಕು. ಹೀಗೆ ಅದಕ್ಕೆ ಮತ್ತೊಂದು ಮತ್ತೊಂದಕ್ಕೆ ಮಗದೊಂದು ಎಂಬುದಾಗಿ ಅನವಸ್ಥೆಯುಂಟಾಗಿ ಮೊದಲಿನ ಘಟಾಭಾವವನ್ನು ಗ್ರಹಿಸುವುದೇ ಅಸಾಧ್ಯವಾಗುತ್ತದೆ.

49. ಪ್ರತಿಯೋಗಿ: ಯಾವುದರ ಅಭಾವವೆಂಬುದಾಗಿ ಹೇಳುತ್ತೇವೆಯೋ ಅದು ಪ್ರತಿಯೋಗೀ. ಉದಾ :– ಘಟದ ಅಭಾವ ಎನ್ನುವಾಗ ಆ ಅಭಾವಕ್ಕೆ ಘಟವು ಪ್ರತಿಯೋಗೀ.

50. ಪ್ರಮಾಣಜ್ಞಾನವು: "ಇದು ಘಟ" ಎಂಬ ಪ್ರಮಾಣಜ್ಞಾನವು.


51. ಜ್ಞಾನಸಾಧಕವಾದ ಪ್ರಮಾಣದಲ್ಲಿ: ಪ್ರತ್ಯಕ್ಷಜ್ಞಾನಕ್ಕೆ ಸಾಧಕವಾಗಿರುವುದರಿಂದ ಇಂದ್ರಿಯವು ಪ್ರತ್ಯಕ್ಷಪ್ರಮಾಣ. ಅನುಮಿತಿ ಸಾಧಕವಾದ ಲಿಂಗಪರಾಮರ್ಶವು ಅನುಮಾನ ಪ್ರಮಾಣ. ಶಾಬ್ದಬೋಧಕ್ಕೆ ಸಾಧಕವಾದುದರಿಂದ ಶಬ್ದವು ಪ್ರಮಾಣ. ಆದುದರಿಂದ ಪ್ರಮಾಣವು ತನ್ನ ಫಲವಾದ ಜ್ಞಾನರೂಪವಾದ ವಿಷಯಕ್ಕೆ ಪ್ರಕಾಶಕವಾದುದರಿಂದ ಅಪ್ರಕಾಶಿತವಾದ ಅರ್ಥಕ್ಕೆ ಪ್ರಕಾಶಕವಾಗಿರುವಿಕೆಯೆಂಬ ಹೇತುವು ಪ್ರಮಾಣದಲ್ಲಿ (ಸಾಧ್ಯವಿಲ್ಲದಿರುವೆಡೆ) ಇರುವುದರಿಂದ ಹೇತುವಿಗೆ ವ್ಯಭಿಚಾರ ದೋಷವುಂಟಾಗುತ್ತದೆಯೆಂದು ಶಂಕೆಯ ಅಭಿಪ್ರಾಯ.

52. ಪ್ರತಿರೋಧದ ಭಯದಿಂದ: ಆತ್ಮಜ್ಞಾನದಿಂದ ಮಿಥ್ಯಾಭೂತವಾದ ಪ್ರಪಂಚಕ್ಕೆ ಬಾಧವುಂಟಾಗುತ್ತದೆಯೆಂಬ ಸಿದ್ಧಾಂತಕ್ಕೆ, ವಿರೋಧಿಯಾದ ಅನುಮಾನ ಪ್ರಯೋಗದಿಂದ ಪ್ರತಿರೋಧವುಂಟಾಗುತ್ತದೆ. ವಿರೋಧಿಯಾದ ಅನುಮಾನ ಪ್ರಯೋಗದಿಂದ ಪ್ರತಿರೋಧವನ್ನು ತಪ್ಪಿಸಲು ಯಾವುದಾದರೂ ಒಂದು ಹೇತುವಿನಲ್ಲಿ ದೋಷವನ್ನು ತೋರಿಸಬೇಕು. ಯದ್ಯಪಿ, ಒಂದೇ ಪಕ್ಷದಲ್ಲಿ ಪರಸ್ಪರ ವಿರುದ್ಧವಾದ ಎರಡು ಸಾಧ್ಯಗಳನ್ನು ಸಾಧಿಸುವ ಎರಡು ಹೇತುಗಳಿರುವಾಗ, ವಾಸ್ತವಿಕವಾಗಿ ಒಂದು ಸದ್ಧೇತು, ಮತ್ತೊಂದು ದುಷ್ಟ ಹೇತು; ಆದರೂ ಈ ಎರಡು ಹೇತುಗಳ ಪೈಕಿ ಒಂದು ಪ್ರಬಲವಾದುದು ಎಂದು ನಿಶ್ಚಯವಾಗುವವರೆಗೂ ಎರಡು ಹೇತುಗಳಲ್ಲಿಯೂ ದೋಷ ಶಂಕೆಯಿರುವುದರಿಂದ ಅವು ತಮ್ಮತಮ್ಮ ಸಾಧ್ಯಗಳನ್ನು ಸಾಧಿಸಿಕೊಡಲಾರವು ಎಂಬುದಾಗಿ ಪೂರ್ವಪಕ್ಷಿಯ ಅಭಿಪ್ರಾಯ.

53. ಷಷ್ಠೀಸಮಾಸ: ಶಾಸ್ತ್ರಸ್ಯ ಯೋನಿಃ ಶಾಸ್ತ್ರಯೋನಿಃ—ಎಂಬುದಾಗಿ ಷಷ್ಠೀತತ್ಪುರುಷಸಮಾಸ. ಶಾಸ್ತ್ರವೆಂದರೆ ಇಲ್ಲಿ ವೇದವೆಂದು ಅರ್ಥ. ಯೋನಿ ಎಂದರೆ ಕಾರಣವೆಂದರ್ಥ. ಎರಡನೆಯ ಸೂತ್ರದಲ್ಲಿ ಜಗತ್ಕಾರಣನಾದ ಬ್ರಹ್ಮನಲ್ಲಿ ಸರ್ವಜ್ಞತ್ವವು ಅರ್ಥಾತ್ ಸಿದ್ಧವಾಗುತ್ತದೆ. ಈ ಮೂರನೆಯ ಸೂತ್ರದಲ್ಲಿ ಮೊದಲನೆಯ ವರ್ಣಕದಲ್ಲಿ

ಷಷ್ಠೀತತ್ಪುರುಷಸಮಾಸದಿಂದ, ಬ್ರಹ್ಮನು ಸರ್ವಜ್ಞಕಲ್ಪವಾದ ವೇದಕ್ಕೂ ಕರ್ತೃವೆಂಬುದಾಗಿ ಹೇಳಿರುವುದರಿಂದ ಸರ್ವಜ್ಞನೆಂದು ಪ್ರತಿಪಾದಿತವಾಗುತ್ತದೆ.

54. ಬಹುವ್ರೀಹಿಸಮಾಸ: ಮೂರನೆಯ ಸೂತ್ರದ ಎರಡನೆಯ ವರ್ಣಕೆದಲ್ಲಿ ಶಾಸ್ತ್ರಂ ಯೋನಿಃ ಯಸ್ಯ ತತ್ ಶಾಸ್ತ್ರಯೋನಿ ಎಂಬುದಾಗಿ ಬಹುವ್ರೀಹಿಸಮಾಸ. ಯೋನಿಃ ಎಂದರೆ ಇಲ್ಲಿ ಪ್ರಮಾಣವೆಂದರ್ಥ. ಎರಡನೆಯ ಸೂತ್ರದಲ್ಲಿ ಬ್ರಹ್ಮನು ಜಗತ್ಕಾರಣನೆಂದು ಹೇಳಿದುದರಿಂದ, ಬ್ರಹ್ಮನು ಅನುಮಾನಪ್ರಮಾಣಗಮ್ಯನೆಂದು ಆಶಂಕೆಯುಂಟಾಗಬಹುದು. ಆ ಆಶಂಕೆಯನ್ನು ಪರಿಹರಿಸಲು ಬ್ರಹ್ಮನು ಶ್ರುತಿಪ್ರಮಾಣವೇದ್ಯನೆಂಬುದಾಗಿ ಈ ಮೂರನೆಯ ಸೂತ್ರವು ಪ್ರತಿಪಾದಿಸುತ್ತದೆ. "ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ" (ಬೃ.3-9-26) "ನಾವೇದವಿನ್ಮನುತೇ ತಂ ಬೃಹಂತಮ್" (ತೈ.ಬ್ರಾ.3-12-9-7) ಎಂಬುದಾಗಿ ಬ್ರಹ್ಮನು ಶ್ರುತಿಪ್ರಮಾಣದಿಂದಲೇ ವೇದ್ಯನಾದವನೆಂದು ಉಕ್ತವಾಗಿದೆ.





ಕನ್ನಡ ಅಧ್ಯಯನ ಸಂಸ್ಥೆ

ತತ್ವಶಾಸ್ತ್ರ ಗ್ರಂಥಗಳು

1. ಹಿಂದೂ ಜೀವನ ದರ್ಶನ : ಡಾ. ಎಸ್. ರಾಧಾಕೃಷ್ಣನ್ ;
ಅನು : ಡಾ. ಕೆ.ಬಿ. ರಾಮಕೃಷ್ಣರಾವ್
2. ಧರ್ಮ ಮತ್ತು ಸಮಾಜ : ಡಾ. ಎಸ್. ರಾಧಾಕೃಷ್ಣನ್ ;
ಅನು : ಎ. ಎಲ್. ಶಿವರುದ್ರಪ್ಪ
3. ಭಾರತೀಯ ದರ್ಶನ : ಬಲದೇವ ಉಪಾಧ್ಯಾಯ ;
ಅನು : ಎಸ್. ರಾಮಚಂದ್ರಶಾಸ್ತ್ರಿ
4. ಮುಸ್ಲಿಮ್ ಹಬ್ಬಗಳು ಮತ್ತು ಸಂಸ್ಕಾರಗಳು : ಶ್ರೀಪಾದ ಜೋಶಿ ;
ಅನು : ಹಿರಣ್ಮಯ
5. ಭಾರತೀಯ ತತ್ವಶಾಸ್ತ್ರದ ಮೂಲಾಂಶಗಳು : ಎಂ. ಹಿರಿಯಣ್ಣ ;
ಅನು : ಡಾ. ಕೆ. ಬಿ. ರಾಮಕೃಷ್ಣರಾವ್
6. ಆಧುನಿಕ ತರ್ಕಶಾಸ್ತ್ರ ಪರಿಚಯ (ಭಾಗ ೧) :
ಡಾ. ಕೆ. ಬಿ. ರಾಮಕೃಷ್ಣರಾವ್
7. ಆಧುನಿಕ ತರ್ಕಶಾಸ್ತ್ರ ಪರಿಚಯ (ಭಾಗ ೨) :
ಡಾ. ಕೆ. ಬಿ. ರಾಮಕೃಷ್ಣರಾವ್
8. ಭಾರತೀಯ ತತ್ವಶಾಸ್ತ್ರದ ರೂಪರೇಖೆಗಳು : ಎಂ. ಹಿರಿಯಣ್ಣ ;
ಅನು : ಡಾ. ಪ್ರಭುಶಂಕರ
9. ಪ್ಲೇಟೋವಿನ ಆದರ್ಶ ಗಣರಾಜ್ಯ ; ಅನು : ಸಿ. ಸೇತೂಬಾಯಿ
10. ಶಾಂಕರದರ್ಶನ : ಅನು : ಶೇಷಾಚಲ ಶರ್ಮ